ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ

"ಎಚ್.ನಾಗವೇಣಿಯವರ ಆಯ್ದ ಸಣ್ಣ ಕಥೆಗಳಲ್ಲಿ ತುಳುನಾಡಿನ ಕೆಳವರ್ಗದ ಜನರ ಜೀವನ ಚಿತ್ರಣ" ಒಂದು ಅಧ್ಯಯನ

ಮಾರ್ಗದರ್ಶಕರು

ಡಾ.ಎಸ್.ಶಾಂಭವಿ
ಸಹಾಯಕ ಪ್ರಾಧ್ಯಾಪಕರು,
ಶ್ರೀಮತಿ ವಿ.ಹೆಚ್.ಡಿ.ಗೃಹ ವಿಜ್ಞಾನ ಕಾಲೇಜು
ಶೇಷಾದ್ರಿ ರಸ್ತೆ, ಬೆಂಗಳೂರು – 560001.

ಸಂಶೋಧನಾ ವಿದ್ಯಾರ್ಥಿ
ನವೀನ್ ಕುಮಾರ್ ಬಿ.ಸಿ.

ನೋಂದಣಿ ಸಂಖ್ಯೆ : 150701030036

ವರ್ಷ: 2015–16

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ

ನರಸಿಂಹರಾಜ ಕಾಲೋನಿ, ಬೆಂಗಳೂರು–560 004

(ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ಸ್ನಾತಕೋತ್ತರ ಕೇಂದ್ರ)

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ

"ಎಚ್.ನಾಗವೇಣಿಯವರ ಆಯ್ದ ಸಣ್ಣ ಕಥೆಗಳಲ್ಲಿ ತುಳುನಾಡಿನ ಕೆಳವರ್ಗದ ಜನರ ಜೀವನ ಚಿತ್ರಣ" ಒಂದು ಅಧ್ಯಯನ

ಮಾರ್ಗದರ್ಶಕರು

ಡಾ.ಎಸ್.ಶಾಂಭವಿ
ಸಹಾಯಕ ಪ್ರಾಧ್ಯಾಪಕರು,
ಶ್ರೀಮತಿ ವಿ.ಹೆಚ್.ಡಿ.ಗೃಹ ವಿಜ್ಞಾನ ಕಾಲೇಜು
ಶೇಷಾದ್ರಿ ರಸ್ತೆ, ಬೆಂಗಳೂರು – 560001.

ಸಂಶೋಧನಾ ವಿದ್ಯಾರ್ಥಿ
ನವೀನ್ ಕುಮಾರ್ ಬಿ.ಸಿ.

ನೋಂದಣಿ ಸಂಖ್ಯೆ : 150701030036

ವರ್ಷ: 2015-16

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ

ನರಸಿಂಹರಾಜ ಕಾಲೋನಿ, ಬೆಂಗಳೂರು-560 004

(ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ಸ್ನಾತಕೋತ್ತರ ಕೇಂದ್ರ)

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ, ಬೆಂಗಳೂರು ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2015-16ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಎಚ್.ನಾಗವೇಣಿಯವರ ಆಯ್ದ ಸಣ್ಣ ಕಥೆಗಳಲ್ಲಿ ತುಳುನಾಡಿನ ಕೆಳವರ್ಗದ ಜನರ ಜೀವನ ಚಿತ್ರಣ" ಒಂದು ಅಧ್ಯಯನ** ಎಂಬ ಶೀರ್ಷಿಕೆಯ ಈ ನಿಬಂಧವನ್ನು ನವೀನ್‌ಕುಮಾರ್ ಬಿ.ಸಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ ಸಲ್ಲಿಸುತ್ತಿದ್ದಾರೆ.

ಈ ನಿಬಂಧವು ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು, ಇವರು ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

S. Shambhavi

ಮಾರ್ಗದರ್ಶಕರು

ಸ್ಥಳ : ಬೆಂಗಳೂರು

ದಿನಾಂಕ :

ಡಾ॥ ಎಸ್. ಶಾಂಭವಿ
ಕನ್ನಡ ಉಪನ್ಯಾಸಕಿ
ಶ್ರೀಮತಿ ವಿ.ಹೆಚ್.ಡಿ.ಕೇಂದ್ರಿಯ ಗೃಹ ವಿಜ್ಞಾನ ಕಾಲೇಜು,
ಶೇಷಾದ್ರಿ ರಸ್ತೆ, ಬೆಂಗಳೂರು-01

<u>ಅಭ್ಯರ್ಥಿಯ ಪ್ರಮಾಣ ಪತ್ರ</u>

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಎಂ.ಪಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ, ಬೆಂಗಳೂರು ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2015–16ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಎಚ್.ನಾಗವೇಣಿಯವರ ಆಯ್ದ ಸಣ್ಣ ಕಥೆಗಳಲ್ಲಿ ತುಳುನಾಡಿನ ಕೆಳವರ್ಗದ ಜನರ ಜೀವನ ಚಿತ್ರಣ" ಒಂದು ಅಧ್ಯಯನ** ಎಂಬ ಶೀರ್ಷಿಕೆಯ ಈ ನಿಬಂಧವನ್ನು ಡಾ.ಎಸ್.ಶಾಂಭವಿ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧವು ನನ್ನ ಸ್ವಂತ ಬರವಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

ಸ್ಥಳ : ಬೆಂಗಳೂರು
ದಿನಾಂಕ :

ಸಂಶೋಧನಾ ವಿದ್ಯಾರ್ಥಿ

Naveen Kumar. B.C.

(ನವೀನ್ ಕುಮಾರ್ ಬಿ.ಸಿ)

"ಎಚ್.ನಾಗವೇಣಿಯವರ ಆಯ್ದ ಸಣ್ಣ ಕಥೆಗಳಲ್ಲಿ ತುಳುನಾಡಿನ ಕೆಳವರ್ಗದ ಜನರ ಜೀವನ ಚಿತ್ರಣ"

ಒಂದು ಅಧ್ಯಯನ

ಅಧ್ಯಾಯ – ೧

ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ-೧

ಉದ್ದೇಶ ಮತ್ತು ವ್ಯಾಪ್ತಿ

ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ಮೂಲ ನವ್ಯದ ವಿಸ್ತರಣೆಯ ಪ್ರಯೋಗ ಶೀಲ ನವ್ಯಕಥೆಗಾರರೆಂದು ಕರೆಯಲ್ಪಡುವಂತಹ ಜಯಂತಕಾಯ್ಕಿಣಿ, ವಿವೇಕ್, ಶ್ಯಾನುಬೋಗ, ವೈದೇಹಿ, ಮಿತ್ರಾವೆಂಕಟರಾಜ್, ಕುಸುಮ, ಅಮರೇಶ ನುಗಡೋಣಿ, ನೇಮಿಚಂದ್ರರಂತಹವರ ಜೊತೆ ಗುರುತಿಸಿಕೊಳ್ಳುವಂತಹ ಹೆಸರು ನಾಗವೇಣಿಯವರದು.

ಕರಾವಳಿ ಎಂದರೆ ನಮ್ಮ ಕಣ್ಣಮುಂದೆ ಬರುವಂತಹದು ತುಳುನಾಡು. ನಾಗವೇಣಿಯವರು, ಅಲ್ಲಿನ ಸಾಂಸ್ಕೃತಿಕ ಸಾಮಾಜಿಕ, ರಾಜಕೀಯ, ಆರ್ಥಿಕ ಸ್ಥಿತಿಗತಿಗಳನ್ನು ಅವರು ತಮ್ಮ ಕಥಾಸಂಕಲನಗಳಾದ "ನಾಕನೇ ಸೀರು, ಮೀಯುವ ಆಟ, ಮತ್ತು ವಸುಂದರೆಯ ಗ್ಯಾನ" ಎಂಬ ಮೂರು ಕಥಾ ಗುಚ್ಚಗಳಲ್ಲಿ ಇಡೀ ತುಳುನಾಡಿನ ಬದುಕನ್ನು ಚಿತ್ರಿಸಿದ್ದಾರೆ.

ಇವರ ಕಥೆಗಳನ್ನು ಓದುತ್ತಿದ್ದವರಿಗೆ ತುಳುನಾಡ ಸಂಪೂರ್ಣ ಚಿತ್ರಣ ನಮ್ಮ ಕಣ್ಣ ಮುಂದೆ ಬಂದು ಬಿಡುತ್ತದೆ. ಅಂದರೆ ಅಲ್ಲಿನ ಜನರ ಜೀವನ ಶೈಲಿ, ಅವರು ಆಚರಿಸುವ ಹಬ್ಬಗಳು, ಆಚರಣೆಗಳು, ಸಾಂಪ್ರದಾಯಿಕ ವಾದ್ಯಗಳು, ಸಂಪ್ರದಾಯಗಳು, ಕಡಲು, ಕಡಲು ಮತ್ತು ಜನರ ಸಂಬಂಧ ಅಂತಹ ಕಡಲತಡಿಯ ಸಾಮಾನ್ಯ ಜನರ ಜೀವನ ಚಿತ್ರಣ ಅದರಲ್ಲೂ ಬ್ರಾಹ್ಮಣೇತರ ಜನ ಸಾಮಾನ್ಯರ ಬದುಕಿನ ಪದರಗಳು ಹೀಗೆ ತುಳು ನಾಡನ್ನೇ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿ ಓದುಗರನ್ನು ಒಮ್ಮೆ ತುಳು ನಾಡಿನ ಬಸ್ಸನ್ನು ಹತ್ತಿಸಿಕೊಂಡು ಕರಾವಳಿಯ ಉದ್ದಗಲವನ್ನು ಪರಿಚಯಿಸಿ ಕರೆತರುವಂತಹ ಕೆಲಸವನ್ನು ನಾಗವೇಣಿಯವರು ತಮ್ಮ ಕತೆಗಳಲ್ಲಿ ಅದ್ಭುತವಾಗಿ ಮಾಡಿ ಅದರಲ್ಲಿ ಯಶಸ್ವಿಯಾಗಿದ್ದಾರೆ.

ನಾಗವೇಣಿಯವರ ಆಯ್ದ ಕತೆಗಳಲ್ಲಿ ತುಳುನಾಡಿನಲ್ಲಿ ವಾಸಿಸುವಂತಹ ಜನಸಮುದಾಯದಲ್ಲಿನ ಜಾತಿ ವ್ಯವಸ್ಥೆ, ಒಕ್ಕಲ ಮಕ್ಕಳು ಎಂಬ ದಲಿತರು, ಅವರಿಗಿಂಥ ಸ್ವಲ್ಪ ಮೇಲ್ಮಟ್ಟದ ಬೆಸ್ತರು, ಮುಸಲ್ಮಾನರು ಹೀಗೆ ಒಟ್ಟಿನಲ್ಲಿ ಬ್ರಾಹ್ಮಣರನ್ನು ಹೊರತು ಪಡಿಸಿ ಉಳಿದವರೆಲ್ಲರೂ ಕೂಡ ಶೋಷಣೆಗೆ ಒಳಗಾಗಿರುವವರೇ ವಿಶೇಷವಾಗಿ ದಲಿತರು ಎಲ್ಲಾ ಆಯಾಮಗಳಲ್ಲಿಯೂ ಶೋಷಣೆಗೆ ಬಲಿಯಾದವರು ಇಂತಹ ಶೋಷಣೆಗೆ ಬಲಿಯಾದ ಜನರ ಜೀವನ ಕ್ರಮ, ಶೈಲಿ, ಆಚರಣೆಗಳು, ಆರ್ಥಿಕ ಸ್ಥಿತಿ-ಗತಿ, ಮತ್ತು ಶೈಕ್ಷಣಿಕ ಸ್ಥಿತಿ-ಗತಿ, ಇಂತಹ ವಿಷಯಗಳನ್ನು ಕುರಿತು, ನಾನು ನನ್ನ ಎಂ.ಫಿಲ್., ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದೇನೆ.

ಈ ಕಥೆಗಳಲ್ಲಿ ಬಳುಸುವಂತಹ ಪಾತ್ರಗಳ ಹೆಸರುಗಳು, ಉಲ್ಲೇಖಿಸಲಾಗುವ ಸಂಪ್ರದಾಯಗಳು ಕಣ್ಣಿಗೆ ಕಟ್ಟುವಂತೆ ಬಣ್ಣಿಸಲಾಗುವ ದೃಶ್ಯಗಳು ಓದುಗರ ಕಿವಿಗೆ ಕೇಳುವಂತಹ ಕನ್ನಡ ಭಾಷೆ ಎಲ್ಲವೂ ನಿರ್ದಿಷ್ಟವಾಗಿ ತುಳು ಸೀಮೆಯದು. ತುಳುನಾಡು ಜನ ಜೀವನದ ಎಳೆಗಳನ್ನು ಹೆಣೆದು ಬಣ್ಣಿಸಿದ ಚಿತ್ರಗಳು ಅಲ್ಲಿಯ ಮನೆ ಮನಸ್ಸುಗಳ ಒಳ ಹೊರಗೆ ಸುಳಿದ ಹಾಗೆ ಈ ಕತೆಗಳು ಹುಟ್ಟುವುದು.

ಷಣೆಗೊಳಗಾದ ಜನರುಗಳು ತಮ್ಮ ನೋವುಗಳನ್ನು ಬೇರೆಯವರಲ್ಲಿ ಹಂಚಿಕೊಳ್ಳದೆ ಇದೇ ತಮ್ಮ ಬದುಕು ವು ಹುಟ್ಟಿರುವುದು ಹೀನಕುಲದಲ್ಲಿ ಎಂದು ತಮಗೆ ತಾವೇ ಮನವರಿಕೆ ಮಾಡಿಕೊಂಡು. ನಾವು ಮೇಲ್ವರ್ಗದ ನರ ಅಥವಾ ಧಣಿಗಳ ಒಕ್ಕಲಮಕ್ಕಳು ಎಂದು ತಿಳಿದು ಸುಮ್ಮನಾಗುತ್ತಾರೆ. ಮತ್ತೆ ಕೆಲವೊಂದು ಪಾತ್ರಗಳು ಲ್ವರ್ಗದವರ ವಿರುದ್ಧ ತಿರುಗಿಬೀಳುವಂತಹ ಧೈರ್ಯವನ್ನು ಸಹ ಮಾಡುತ್ತಾರೆ. ಆದರೆ ಅದು ಶಾಶ್ವತವಲ್ಲ.

ರಾವಳಿ ಭಾಗದಲ್ಲಿ ಭೂತವನ್ನು ಅಲ್ಲಿನ ಜನರುಗಳು ದೈವ ಎಂದು ಆರಾಧಿಸುತ್ತಾರೆ. ಅದಕ್ಕೆ ಪಂಜುರ್ಲಿ ಂತಲೂ ಕರೆಯುತ್ತಾರೆ. ಅಂತಹ ಭೂತ (ಪಂಜುರ್ಲಿ) ಕೆಳವರ್ಗದವರ ಮೈ ಮೇಲೆ ಆವಾಹನೆಯಾಗಿ ಹಳ್ಳಿಗರ ಷ್ಟ ಕಾರ್ಪಣ್ಯಗಳಿಗೆ ಪರಿಹಾರವನ್ನು ಸೂಚಿಸುವುದು ಸಹಜವಾಗಿ ನಡೆಯುತ್ತದೆ. ಅಂತಹ ಸಮಯದಲ್ಲಿ ಲ್ಜಾತಿಯವರು ಸಹ ಭೂತ ಆವಾಹನೆಯಾಗುವಂತಹ ಕೆಳಜಾತಿಯವರಿಗೆ ಯಾವುದೇ ಜಾತಿ ಭೇದವನ್ನು ಾಡುವುದಿಲ್ಲ. ಇಂತಹ ಗಂಭೀರ ವಿಷಯಗಳನ್ನು ನಾವು ಈ ಕತೆಗಳಲ್ಲಿ ಕಾಣಬಹುದಾಗಿದೆ.

ಟ್ಟಾರೆಯಾಗಿ ಕರಾವಳಿ ಭಾಗದ ಕಡಲ ಮಕ್ಕಳ ಅದರಲ್ಲೂ ಕೆಳವರ್ಗದವರ ದೈನಂದಿನ ಜೀವನ ಶೈಲಿ, ೋಷಣೆ, ದೌರ್ಜನ್ಯ, ಬದುಕು, ಇಂತಹ ವಿಚಾರಗಳು ನಾಗವೇಣಿಯವರ ಕತೆಗಳಲ್ಲಿ ಮೂಡಿ ಬಂದಿರುವುದನ್ನು ರಿತು ನಾನು ನನ್ನ ಪ್ರಬಂಧದ ಅಧ್ಯಯನದಲ್ಲಿ ಗುರುತಿಸುತ್ತೇನೆ.

ಕರಾವಳಿ ನಾಡಿನ ಪ್ರಾಕೃತಿಕ ಸೌಂದರ್ಯವನ್ನು ತಮ್ಮ ಬರಹಗಳಲ್ಲಿ ಹಿಡಿದಿರುವ ರೀತಿಯಲ್ಲಿಯೇ ಅಲ್ಲಿನ ನರುಗಳು ಮತ್ತು ಅಲ್ಲಿನ ಆಚಾರ ವಿಚಾರಗಳು, ಸಂಪ್ರದಾಯಗಳು ಮತ್ತು ಅಂತಹ ಸಂಪ್ರದಾಯದ ಹೆಸರಿನಲ್ಲಿ ಡೆಯುವಂತಹ ಮೌಢ್ಯ ಆಚರಣೆಗಳು. ಅವುಗಳಿಗೆ ಈ ಹಿಂದುಳಿದವರು ಅಥವಾ ದಲಿತರು ಎಂದು ಕರೆಯಿಸಿ ೊಳ್ಳುವಂತಹ ಜನರುಗಳನ್ನು ಬಳಸಿಕೊಂಡು ತಾವು ಮತ್ತು ತಮ್ಮ ಜನಾಂಗದ ಉದ್ಧಾರವನ್ನು ಾಡಿಕೊಳ್ಳುವಂತಹ ಮೇಲ್ವರ್ಗದವರು. ಸ್ವಾತಂತ್ರ್ಯ ಪೂರ್ವದ ಕರಾವಳಿ ನಾಡಿಗೂ ಮತ್ತು ಸ್ವಾತಂತ್ರ್ಯ ನಂತರದ ರಾವಳಿ ನಾಡಿಗೂ ಇರುವಂತಹ ವ್ಯತ್ಯಾಸಗಳು ಆಗಿರುವಂತಹ ಬದಲಾವಣೆಗಳು, ಕೈಗಾರೀಕರಣ, ನಗರೀಕರಣ ವುಗಳಿಂದ ಪ್ರಕೃತಿನಾಶ ಹೀಗೆ ಎಲ್ಲಾ ವಿಷಯಗಳ ಮೇಲೂ ಲೇಖಕಿಯವರು ತಮ್ಮ ಈ ಕಥೆಗಳಲ್ಲಿ ಬೆಳಕು ಲ್ಲುತ್ತಾರೆ. ಮತ್ತು ಅಲ್ಲಿ ವಾಸಿಸುವಂತಹ ಜನರುಗಳು ತಮ್ಮ ತಮ್ಮ ನಡುವೆ ಜಾತಿ ಎಂಬ ಬಂದು ಬಲೆಯು ದ್ದರೂ ಸಹ ಅವುಗಳ ಒಳಗೇ ನಿಂತು ಮಾನವೀಯತೆಯನ್ನು ತೋರಿಸುವುದು ಘಟ್ಟದವರಿಗೆ ಹೊಲಸು ನಿಸುವಂತಹ ಮೀನು ಈ ಕರಾವಳಿ ಜನಕ್ಕೆ ಅದು ಬಲು ಪ್ರಿಯವಾದ ಆಹಾರ ಹೀಗೆ ಆ ತುಳುನಾಡಿನ ಜನರ ೀವನ ಶೈಲಿಯಿಂದ ಹಿಡಿದು ಪ್ರತಿಯೊಂದು ವಿಷಯವನ್ನು ತಮ್ಮ ಕಥೆ ಮತ್ತು ಕಾದಂಬರಿಯಲ್ಲಿ ಪ್ರಸ್ತಾಪಿಸುತ್ತಾರೆ.

ಅಧ್ಯಾಯ – ೨

" ಸಣ್ಣ ಕಥೆ " ಕಥಾ ಸಾಹಿತ್ಯದ ಪರಿಚಯ

ಅಧ್ಯಾಯ-2

"ಸಣ್ಣಕತೆ" ಕಥಾ ಸಾಹಿತ್ಯದ ಪರಿಚಯ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯದ ಮುಖ್ಯ ಅಭಿವ್ಯಕ್ತಿಯಾಗಿರುವಂತಹ ಈ ಸಣ್ಣಕತೆಗಳ ಪ್ರಕಾರ ದಿನದಿಂದ ದಿನಕ್ಕೆ ಹೊಸ ರೂಪ ಮತ್ತು ತಂತ್ರಗಳ ಅನ್ವೇಷಣ ಭೂಮಿಕೆಯಾಗಿದೆ.

ಈ ಸಾಹಿತ್ಯವು ವೈವಿಧ್ಯತೆಯಿಂದ ಓದುಗರ ಮನಸೆಳೆಯುತ್ತದೆ ಕಥೆ ಬದುಕಿನ ಒಡನಾಡಿ ಎನಿಸಿದೆ. ಒಡನಾಡಿ ಎನಿಸಿದ ಪ್ರಕಾರ ತುಂಬಾ ಹಿಂದಿನಿಂದಲೂ ಒಂದು ಕಲಾ ಪ್ರಕಾರವಾಗಿ ತನ್ನ ಉದ್ದೇಶ ಮತ್ತು ಅಗತ್ಯವಾದ ರಂಜನೆಯನ್ನು ನೀಡುತ್ತಲೇ ಬಂದಿದೆ.

ಸಣ್ಣ ಕತೆ ಕಾದಂರಿಯನ್ನು ಮೀರಿ ಜನಪ್ರಿಯವಾಗುತ್ತಿದೆ. ಅದಕ್ಕೆ ಕಾರಣವೇನೆಂದರೆ ಕೈಗಾರಿಕಾ ಕ್ರಾಂತಿಯ ನಂತರ ಸಮಯದ ಅಭಾವದ ಪರಿಣಾಮವಾಗಿ ದೀರ್ಘವಾದ ಮಹಾಕಾವ್ಯಗಳನ್ನು ಕಾದಂಬರಿಗಳನ್ನು ಓದುವ ತಾಳ್ಮೆ ಜನರಲ್ಲಿ ಕಡಿಮೆಯಾದ್ದರಿಂದ ಸಣ್ಣಕತೆಗಳು ಹೆಚ್ಚು ಜನಪ್ರಿಯವಾಗಿ ಈ ಪ್ರಕಾರದಲ್ಲಿ ಸಾಹಿತ್ಯ ರಚನೆಗೆ ಹೆಚ್ಚು ಪ್ರೋತ್ಸಾಹ ದೊರೆಯಿತು.

ಎಡ್ಗರ್ ಅಲನ್ ಪೋ ಹೇಳುವಂತೆ 1."ಸಣ್ಣಕಥೆ ಓದಿ ಮುಗಿಸಲು ಅರ್ಧಗಂಟೆಯಿಂದ ಹಿಡಿದು ಒಂದು ಗಂಟೆ ಬೇಕಾಗುವ ಗದ್ಯಕಥನ".1

ಮತ್ತೊಂದು ಹೇಳಿಕೆ ನೋಡುವುದಾದರೆ ಒಂದೇಸಲಕ್ಕೆ ಓದಿ ಮುಗಿಸಬಹುದಾದ ಕತೆ ನಿಜವಾದ ಸಣ್ಣಕತೆ ಎಂದು ಹೇಳಿದ್ದಾರೆ.

"ಸಣ್ಣಕತೆ ಕಾದಂಬರಿಯ ಸಂಕ್ಷಿಪ್ತ ರೂಪವಲ್ಲ" ಎಂದು ಮಾರ್ಕ ಶೋರರ್ ಹೇಳಿದ್ದಾರೆ.

ಸಣ್ಣಕತೆಯ ವಿಶಿಷ್ಟ ಸಾಹಿತ್ಯದ ಪ್ರಕಾರವಾಗಿ ಕನ್ನಡದಲ್ಲಿ ಮೂಡಿಬಂದಿದ್ದು ಪಾಶ್ಚಾತ್ಯ ಸಾಹಿತ್ಯ ಪ್ರಭಾವದಿಂದ ಎನ್ನ ಬೇಕು. ಸಣ್ಣಕತೆಯ ಇತಿಹಾಸವು ಕಾದಂಬರಿಯ ಇತಿಹಾಸವನ್ನು ಹೋಲುತ್ತದೆ. ಪಾತ್ರಗಳು, ವಸ್ತು, ಸಂಭಾಷಣೆ, ನಿರೂಪಣೆ, ದೃಷ್ಟಿಕೋನ ಜೀವನಸೃಷ್ಟಿ ಮುಂತಾದ ಮೂಲ ಘಟಕಗಳು ಎರಡರಲ್ಲೂ ಇರುತ್ತವೆ. ಆದರೆ ಎರಡೂ ಒಂದೇ ಆಗಿರುವುದಿಲ್ಲ ಬೇರೆ ಬೇರೆ ಆಗಿರುತ್ತವೆ.

ಸಣ್ಣಕತೆ ಮತ್ತು ಕಾದಂಬರಿಗಳು ಸ್ವರೂಪ ಮತ್ತು ಪರಿಣಾಮದಲ್ಲಿ ಭಿನ್ನವಾಗಿರುತ್ತವೆ ಎಂಬುದಕ್ಕೆ ಈ ಹೇಳಿಕೆ ನೋಡಬಹುದು. 2."ಸಣ್ಣ ಕತೆ ಸಾವಿನ ಸಂದೇಶ ತಲುಪಿಸುವವನ ಹಾಗೆ, ಕಾದಂಬರಿ ಮೆರವಣಿಗೆ ಹೊರಟ ಹಾಗೆ" ಎಂದಿದೆ. ಸಣ್ಣ ಕತೆಗೆ ಆಕರ್ಷಿತರಾಗದವರೇ ಇಲ್ಲ."2

೧೯೦೦ರಲ್ಲಿ ಪ್ರಕಟವಾದ ಪಂಜೆಮಂಗೇಶರಾಯರ ನನ್ನ ಚಿಕ್ಕ ಕಥೆ ಇದು ಕನ್ನಡದ ಮೊಟ್ಟಮೊದಲ ಸಣ್ಣಕಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನವೋದಯದ ಆರಂಭ ಕಾಲದ ವಿಷಯಗಳನ್ನು ಪಂಜೆಯವರ ಸಣ್ಣಕಥೆಗಳು ತಿಳಿಸುತ್ತವೆ. ಮಾಸ್ತಿ, ಗೊರೂರು, ಕುವೆಂಪು ಇವರುಗಳು ನವೋದಯದ ಕಾಲದಲ್ಲಿ ಬರುವಂತಹ ಪ್ರಮುಖ ಬರಹಗಾರರಾಗಿದ್ದಾರೆ. ನವೋದಯದ ಕಾಲದಲ್ಲಿ ಸಾಮಾಜಿಕ ವಿಷಯಗಳನ್ನು ಕಥೆಗಾರರು ಚಿತ್ರಿಸಿದ್ದಾರೆ.

ನವೋದಯದ ಸಣ್ಣಕಥೆಗಳು ಸ್ವರೂಪದಲ್ಲಿ ಅದರದೇ ಆದ ವಿಶಿಷ್ಟತೆಯನ್ನು ಹೊಂದಿವೆ ಕನ್ನಡ ಸಾಹಿತ್ಯದಲ್ಲಿ ಸಣ್ಣ ಸ್ವರೂಪದಲ್ಲಿ ದೊಡ್ಡ ಸ್ವರೂಪದಲ್ಲಿ ತನ್ನ ಸ್ವಂತಿಕೆಯನ್ನು ಮೆರೆದು ಒಂದು ಕಲಾತ್ಮಕ ಸ್ಥಾನ ಪಡೆದಿದೆ ಆದರೆ ಸಣ್ಣ ಕಥೆ ತೀರ ಇತ್ತೀಚಿನದು. ಬಿ.ವೆಂಕಟಾಚಾರ್ಯರು ತಾವು ಅನುವಾದಿಸುತ್ತಿದ್ದ ಕತೆಗಳನ್ನು ಚಿಕ್ಕ ಕಥೆ ಎಂದು ಕರೆದು ಅದಕ್ಕೆ ಒಂದು ಅಧಿಕೃತ ಸ್ಥಾನ ಕಲ್ಪಿಸಿದರು. ಆದ್ದರಿಂದಲೇ ಮಾಸ್ತಿವೆಂಕಟೇಶ ಅಯ್ಯಂಗಾರರು ಬಿ.ವೆಂಕಟಾಚಾರ್ಯರನ್ನು ಸಣ್ಣಕಥೆಯ ಜನಕ ಎಂದು ಕರೆದರು.

೧೯೦೦ ರಿಂದ ೧೯೨೦ರ ಕಾಲವನ್ನು ಆಧುನಿಕ ಕನ್ನಡ ಸಣ್ಣ ಕಥೆಯ ಪ್ರಾರಂಭದ ಕಾಲವೆಂದು ಕರೆಯಲಾಗುತ್ತಿದ್ದು ೨೦ನೆಯ ಶತಮಾನವನ್ನು ಸಣ್ಣಕಥೆಗಳ ಯುಗ ಎನ್ನಲಾಗಿದೆ ಕತೆಯ ಚಲನೆ ಸಹಜವಾಗಿರಬೇಕು ವಸ್ತು ಹಳೆಯದಾದರೂ ಅದನ್ನು ಹೇಳುವ ರೀತಿಯಲ್ಲಿ ಸೊಗಸಿರಬೇಕು. ಕತೆ ನಿರಂತರವಾಗಿ ನೇರವಾಗಿ ಸಾಗುವಂತೆ ಹೇಳಬೇಕು. ಕತೆಯ ಓಟಕ್ಕೆ ಬೆಳವಣಿಗೆಗೆ ಅಡ್ಡಿಯಾಗುವ ಅಂಶಗಳು ಅಲ್ಲಿ ಇರಬಾರದು ಎನ್ನುವಂತಹ ಮಾತಿಗೆ ಮಾಸ್ತಿಯವರು ಮಾದರಿಯಾಗಿದ್ದಾರೆ.

ನವೋದಯದ ಕಾಲದ ಲೇಖಕರಲ್ಲಿ ನಿರೂಪಣೆ, ತಮಾಷೆ, ವರ್ಣನೆ, ವಿಶ್ಲೇಷಣೆ, ರಸಿಕತೆ ಈ ಎಲ್ಲಾ ಗುಣಗಳನ್ನು ಆಗಿನ ಕಾಲದ ಕಥೆಗಳಲ್ಲಿ ಕಾಣಬಹುದಾಗಿತ್ತು ಅಂತಹ ನವೋದಯದ ವಿರುದ್ಧ ಅಸಹನೆ ಮತ್ತು ಪ್ರತಿರೋಧ ವ್ಯಕ್ತಪಡಿಸಲು ಹುಟ್ಟಿಕೊಂಡ ಪ್ರಕಾರ ಪ್ರಗತಿಶೀಲ ಈ ಕಾಲದಲ್ಲಿನ ಪ್ರಮುಖ ಕಥೆಗಾರನೆಂದರೆ ಅನಕೃ ಅವರ ನಾಯಕತ್ವದಲ್ಲಿ ಪ್ರಗತಿಶೀಲ ಸಾಹಿತ್ಯ ಬೆಳೆಯಿತು ನಿರಂಜನ, ಚದುರಂಗ, ತ್ರಿವೇಣಿ ಮುಂತಾದವರ ಪ್ರಗತಿಶೀಲ ಸಾಹಿತ್ಯದ ಕಾಲದಲ್ಲಿ ಕತೆಗಳನ್ನು ಬರೆದು ಕನ್ನಡ ಸಾಹಿತ್ಯದ ನೆಲೆಗಳನ್ನು ಮತ್ತಷ್ಟು ವಿಸ್ತರಿಸಿದರು.

ಆದರೆ ಈ ಕಾಲದ ಕಥಾ ಸಾಹಿತ್ಯದಲ್ಲಿ ಉತ್ಕೃಷ್ಟ ಮಾದರಿಯ ಕತಾಸಾಹಿತ್ಯ ಪ್ರಗತಿ ಶೀಲರ ಕಾಲದಲ್ಲಿ ಮೂಡಿಬರಲಿಲ್ಲ ಎಂದು ಹೇಳಬಹುದು. ಪ್ರಗತಿಶೀಲ ಸಾಹಿತ್ಯದ ನಂತರದಲ್ಲಿ ಹುಟ್ಟಿಕೊಂಡ ನವ್ಯ ಸಾಹಿತ್ಯದಲ್ಲಿ ಸಣ್ಣ ಕಥಾ ಸಾಹಿತ್ಯ ಸಮೃದ್ದವಾಗಿ ಬೆಳೆಯಿತು ಎಂದು ಹೇಳಬಹುದು. ಈ ನವ್ಯ ಸಾಹಿತ್ಯದ ಪ್ರಮುಖ ಕತೆಗಾರರು ಎಂದರೆ ಅನಂತಮೂರ್ತಿರವರು, ಚಿತ್ತಾಲರು, ಲಂಕೇಶ್, ತೇಜಸ್ವಿ, ವೀಣಾಶಾಂತೇಶ್ವರ ಮುಂತಾದವರು. ತಮ್ಮದೇ ಆದ ವಿಧಾನದಲ್ಲಿ ಕಥಾ ಸಾಹಿತ್ಯವನ್ನು ಬೆಳೆಸಿದರು. ನವ್ಯ ಸಾಹಿತ್ಯದ ಮುಖ್ಯ ಲಕ್ಷಣವೆಂದರೆ ಭಾಷೆ, ಮತ್ತು ಅವುಗಳ ರಚನೆಯ ವಿಧಾನ. ನವ್ಯಕತೆಗಾರರಿಗೆ ಭಾಷೆ ಬೇರೆ ಅಲ್ಲ ಸಾಹಿತ್ಯ ಬೇರೆ ಅಲ್ಲ. ಭಾಷೆಯು ಒಂದು ಸಾಮಾಜಿಕ ಸೃಷ್ಟಿ ಎಂದು ನಂಬಿದ್ದವರು ನವ್ಯಕತೆಗಾರರು ಅದರ ಜೊತೆಗೆ ವಿವಿಧವಾದ ಮಾದರಿ ಮತ್ತು ವೈವಿಧ್ಯತೆಯನ್ನು ನವ್ಯರು ಕನ್ನಡ ಸಾಹಿತ್ಯಕ್ಕೆ ತಂದುಕೊಟ್ಟರು.

ಅದೇ ರೀತಿ ಮುಂದಿನ ಸಾಹಿತ್ಯ ನೋಡುವುದಾದರೆ ದೇವನೂರು ಮಹಾದೇವನವರ ದಲಿತ ಸಾಹಿತ್ಯದ ಸೃಷ್ಟಿಯು ಆದ್ಯಮಾರ್ಗವನ್ನು ಹಿಡಿದರು ಮಹಾದೇವ ಅವರ ಕೃತಿಗಳು ದಲಿತ ಪ್ರಪಂಚದ, ನೋವು, ವೇದನೆ, ಅಸಹಾಯಕತೆ ಹಸಿವು ಮತು ಸಾಮಾಜಿಕ, ಮತ್ತು ಆರ್ಥಿಕವಾದ ಅಸಮಾನತೆಯ ವಿರೋಧವನ್ನು ವಿವರಿಸುತ್ತದೆ.

ದಲಿತ ಬಂಡಾಯದ ಕಾಲದಲ್ಲಿ ನಮಗೆ ಕಾಣಸಿಗುವ ಪ್ರಮುಖ ಕತೆಗಾರರೆಂದರೆ ಕುಂ.ವೀರಭದ್ರಪ್ಪ, ಕಾಳೇಗೌಡನಾಗವಾರ, ಬರಗೂರು ರಾಮಚಂದ್ರಪ್ಪ, ಗೀತಾ ನಾಗಭೂಷಣ್, ಸಾರಾ ಅಬೂಬಕರ್, ಮೊಗಳ್ಳಿ ಗಣೇಶ್, ಅರವಿಂದ ಮಾಲಗತ್ತಿ ಮುಂತಾದವರು ಇಂತಹ ಸಂದರ್ಭದಲ್ಲಿ ಮೂಲ ನವ್ಯದ ವಿಸ್ತರಣೆ ಎನ್ನುವಂತೆ ಪ್ರಯೋಗಶೀಲ ಕಥೆಗಾರರು ಎಂಬಂತೆ ಎಂದು ಕರೆಯ ಬಹುದಾದ ಕತೆಗಾರರು ಕತೆಗಳನ್ನು ಸೃಷ್ಟಿಸಿದರು. ಅದರಲ್ಲಿ ಪ್ರಮುಖರಾದವರೆಂದರೆ ಜಯಂತ್ ಕಾಯ್ಕಿಣಿ, ವಿವೇಕ್ ಶಾನುಭೋಗ, ನಾಗವೇಣಿಯವರು, ವೈದೇಹಿ, ಕುಸುಮ, ಅಮರೇಶ ನುಗಡೋಣಿ ಮುಂತಾದವರು.

ಅಡಿ ಟಿಪ್ಪಣಿಗಳು

1. ಕನ್ನಡ ಸಾಹಿತ್ಯ ಕೋಶ, ರಾಜಪ್ಪ ದಳವಾಹಿ ಪು.ಸಂ–88

2. ಕತೆ, ಕಥನ, ಡಾ.ಎಸ್.ಪ್ರಸಾದಸ್ವಾಮಿ ಪು.ಸಂ–1

ಅಧ್ಯಾಯ – ೩

ಲೇಖಕಿಯ ಬದುಕು ಬರಹ ಪರಿಚಯ

ಅಧ್ಯಾಯ–೩

ಲೇಖಕಿಯ ಬದುಕು ಬರಹ ಪರಿಚಯ

ಆಧುನಿಕ ಕನ್ನಡ ಸಾಹಿತ್ಯದ ಮಹತ್ವದ ಲೇಖಕಿಯರಲ್ಲಿ ಎಚ್.ನಾಗವೇಣಿಯವರು ಪ್ರಮುಖರು. ಇವರು ೨೯/೧೧/೧೯೬೨ ರಲ್ಲಿ ಮಂಗಳೂರಿನ ಹೊನ್ನಕಟ್ಟೆ ಎಂಬಲ್ಲಿ ಜನಿಸಿದರು ತಂದೆ ಸುಬ್ಬಯ್ಯಶೆಟ್ಟರು. ತಾಯಿ ಭವಾನಿಯವರು.

ಇವರು ಬಿ.ಎಸ್ಸಿ. ಎಂ.ಇಡಿ., ಎಂ.ಎಲ್.ಐ.ಎಸ್.ಸಿ., ಪಿ.ಹೆಚ್‌ಡಿ., ಪದವಿಯನ್ನು ಪಡೆದಿದ್ದಾರೆ. ಕೇಂದ್ರ ಸಂಪಾದಕಿಯಾಗಿ ಕಾರ್ಯನಿರ್ವಹಿಸಿದ್ದಾರೆ. ೧೯೮೯ ರಿಂದ ೧೯೯೨ ರವರೆಗೆ ರಾಷ್ಟ್ರೀಯ ಗ್ರಂಥಾಲಯ ಕಲ್ಕತ್ತಾದಲ್ಲಿ ಸಹಾಯಕ ಗ್ರಂಥಾಲಯಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ. ೧೯೯೨ ರಲ್ಲಿ ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ, ಹಂಪಿ ಇಲ್ಲಿ ಸಹಾಯಕ ಗ್ರಂಥಾಲಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಎಚ್. ನಾಗವೇಣಿಯವರ ಸೃಜನಾತ್ಮಕ ಚಟುವಟಿಕೆಗಳು

೧. ಕಡಲು, ಕನ್ನಡ ವಿಶ್ವವಿದ್ಯಾನಿಲಯ ಹಂಪಿ–೧೯೯೭

೨. ನಾಕನೇನೀರು (ಕಥಾ ಸಂಕಲನ) ಕ್ರೈಸ್ ಕಾಲೇಜು, ಬೆಂಗಳೂರು–೧೯೯೭

೩. ಗಾಂಧಿಬಂದ (ಕಾದಂಬರಿ) ಲೋಹಿಯಾ ಪ್ರಕಾಶನ, ಬಳ್ಳಾರಿ–೧೯೯೯

೪. ಮೀಯುವ ಆಟ (ಕಥಾ ಸಂಕಲನ) ಲೋಹಿಯಾ ಪ್ರಕಾಶನ, ಬಳ್ಳಾರಿ–೨೦೦೫

೫. ವಸುಂದರೆಯ ಗ್ಯಾನ (ಕಥಾ ಸಂಕಲನ) ಲೋಹಿಯಾ ಪ್ರಕಾಶನ ಬಳ್ಳಾರಿ–೨೦೦೬

೬. ಸೂರ್ಯನಿಗೊಂದು ವೀಳ್ಯ (ಪ್ರಬಂಧಗಳ ಸಂಕಲನ) ಪ್ರಜಾಸ ಪ್ರಕಾಶನ, ಬೆಂಗಳೂರು–೨೦೧೨

೭. ಕನ್ನಡ ಕಥೆಗಾರ್ತಿ ಕೊಡಗಿನ ಗೌರಮ್ಮ, ಕನ್ನಡ ವಿ.ವಿ: ಹಂಪಿ–೨೦೧೧

೮. ಕೊಡಗಿನ ಗೌರಮ್ಮ ಕೇಂದ್ರ ಸಾಹಿತ್ಯ ಅಕಾಡಮಿ (ಪತ್ರಿಕೆ)

ಶೈಕ್ಷಣಿಕ ಸಾಧನೆಗಳು

೧. ಕೊಡಗಿನ ಗೌರಮ್ಮ, ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೧೧

೨. ತಿರುಳು ತೋರಣ (ಪ್ರಕಟಣೆ–ಕನ್ನಡ ವಿಶ್ವವಿದ್ಯಾನಿಲಯ, ಹಂಪಿ–೧೯೯೨–೨೦೦೨

೩. ಸಾರ ವಿಸ್ತಾರ (ಪ್ರಕಟಣೆ ಕನ್ನಡ ವಿಶ್ವವಿದ್ಯಾಲಯ ಹಂಪಿ-೨೦೦೦-೨೦೧೨

೪. ಕತ್ತಲು ಬೆಳಕಲ್ಲಿ ಕರ್ನಾಟಕ ಖೈದಿಗಳು (ಪತ್ರಿಕೆ)

ನಾಗವೇಣಿಯವರು ಇತರೆ ಹಲವಾರು ಕಥಾ ಸಂಕಲನಗಳನ್ನು ಇಂಗ್ಲೀಷ್, ತಮಿಳು, ಮಲೆಯಾಳಂ ಮತ್ತು ಹಿಂದಿ ಭಾಷೆಗಳಿಗೆ ಭಾಷಾಂತರಿಸಿದ್ದಾರೆ. ಇವರ ಸಾಹಿತ್ಯವನ್ನು ಕುವೆಂಪು ವಿಶ್ವವಿದ್ಯಾಲಯ, ಗುಲ್ಬರ್ಗ ವಿಶ್ವವಿದ್ಯಾಲಯ ಮತ್ತು ಮಂಗಳೂರು ವಿಶ್ವವಿದ್ಯಾಲಯಗಳು ಸ್ನಾತಕ ಪದವಿಗೆ ಮತ್ತು ಸ್ನಾತಕೋತ್ತರ ಪದವಿಗಳಿಗೆ ಪಠ್ಯವನ್ನಾಗಿಸಿಕೊಂಡಿವೆ. ಮತ್ತು ಇವರ ಕಥೆಗಳನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯು ತನ್ನ ಪಠ್ಯ ಪುಸ್ತಕದಲ್ಲಿ ಪಠ್ಯವನ್ನಾಗಿಸಿಕೊಂಡಿದೆ. ಕರ್ನಾಟಕದ ಇನ್ನಿತರ ವಿಶ್ವವಿದ್ಯಾಲಯಗಳೂ ಸಹ ಇವರ ಸಾಹಿತ್ಯವನ್ನು ಅಧ್ಯಯನಕ್ಕೆ ಬಳಸಿಕೊಳ್ಳುತ್ತಿವೆ.

ಇವರಿಗೆ ಲಭಿಸಿರುವ ಪ್ರಶಸ್ತಿಗಳು

೧. ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ-ಬೆಂಗಳೂರು

ನಾಕನೆ ನೀರು-೧೯೯೮

ಗಾಂಧಿ ಬಂದ-೨೦೦೦

೨. ಆರ್ಯಭಟ ಪ್ರಶಸ್ತಿ

ನಾಕನೇ ನೀರು-೨೦೦೮

೩. ರತ್ನಮ್ಮ ಹೆಗ್ಗಡತಿ ಪ್ರಶಸ್ತಿ, ಕರ್ನಾಟಕ ವಿಧ್ಯಾವರ್ದಕ ಸಂಘ, ದಾರವಾಡ

ನಾಕನೇ ನೀರು-೨೦೦೮

೪. ಚದುರಂಗ ಪ್ರಶಸ್ತಿ, ಚದುರಂಗ ಪ್ರತಿಷ್ಠಾನ ಮೈಸೂರು

ಗಾಂಧಿಬಂದ-೨೦೦೦

೫. ಗೀತಾ ದೇಸಾಯಿ ಪ್ರಶಸ್ತಿ, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು. ಗಾಂಧಿಬಂದ-೨೦೦೦

೬. ಎಸ್.ಎಸ್.ಭೂಸನೂರಮಠ ಪ್ರಶಸ್ತಿ, ಧಾರವಾಡ. ಗಾಂಧಿ ಬಂದ-೨೦೦೦

೭. ಭಾರತಿಸುತ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು. ಮೀಯುವ ಆಟ-೨೦೦೭

೮. ಯು.ಆರ್.ಅನಂತಮೂರ್ತಿ ಪ್ರಶಸ್ತಿ, ಕನ್ನಡ ಸಂಘ, ಶಿವಮೊಗ್ಗ.

ವಸುಂಧರೆಯ ಗ್ಯಾನ-೨೦೦೬.

ಅಧ್ಯಾಯ – ೪

ಲೇಖಕಿಯ ನೇರ ಸಂದರ್ಶನ



ಅಧ್ಯಾಯ–೪

ಲೇಖಕಿಯ ನೇರ ಸಂದರ್ಶನ

* ನಿಮ್ಮ ಕತೆಗಳ ವಸ್ತು ಮತ್ತು ವಿಷಯಗಳನ್ನು ಹೇಗೆ ಅಯ್ಕೆ ಮಾಡಿಕೊಳ್ಳತ್ತಿದ್ದೀರಿ? ಮತ್ತು ಅದನ್ನು ಹೇಗೆ ಕಥಾ ರೂಪಕ್ಕೆ ತರುತ್ತಿದ್ದಿರಿ?

ನಾವು ನೋಡಿದ ಘಟನೆ, ಕೇಳಿದ ಘಟನೆ ಇವೆಲ್ಲವೂ ಕತೆಯಾಗಲು ಸಾಧ್ಯವಿಲ್ಲ ಒಂದು ಕತೆಗೆ ಅದರದೇ ಆದಂತಹ ಒಂದು ಸಂವಿಧಾನವಿದೆ. ಕತೆ ಹೇಗೆ ಬರೆಯಬೇಕು, ಅದರ ತಂತ್ರವೇನು, ವಸ್ತು ಹೇಗಿರಬೇಕು, ಆ ವಸ್ತುವನ್ನು ಬೆಳೆಸೋದು ಹೇಗೆ. ಅದಕ್ಕೆ ಮುತ್ತು ಮಾಣಿಕ್ಯವೆಲ್ಲ ಇಟ್ಟು ಸೌಂದರ್ಯ ಬರಿಸೋದು ಹೇಗೆ ಎಂದರೆ ವಸ್ತುವನ್ನು ಪ್ರತಿಮೆಯ ರೂಪದಲ್ಲಿ ಹೇಳಬೇಕಾಗುತ್ತದೆ. ಉದಾ: ಕಾಮವನ್ನು ಕುದುರೆಗೆ ಹೋಲಿಸುವುದು, ಹಾವಿಗೆ ಹೋಲಿಸಿ ಕತೆ ಹೇಳುವುದು.

ಈ ರೀತಿ ಪ್ರತಿಮೆ ರೂಪದಲ್ಲಿ ಹೋಲಿಸಿ ಕಥೆ ಬರೆಯೋದೆಲ್ಲಾ ಮುಂಚೆ ನವ್ಯದಲ್ಲಿ ಇತ್ತು ಆದರೆ ಈಗಿನ ಕಾಲದವರೆಲ್ಲಾ ಅದನ್ನು ಪರಿಗಣಿಸುವುದಿಲ್ಲ, ಅವರದೆಲ್ಲಾ ನೇರಾ ನೇರಾ ಮುಜುಗರಗಳಿಲ್ಲದೇ ಹೇಳುವುದು.

ಒಂದು ಕತೆ ಎಂದರೆ ಒಂದು ವಸ್ತುವನ್ನು ಪ್ರತಿಮೆ, ರೂಪಕ, ಸಂಕೇತಗಳು ಮತ್ತು ಭಾಷೆ, ಇವುಗಳನ್ನು ಬಳಸಿ ಬರೆಯೋದು ಒಳ್ಳೆಯ ಭಾಷೆಯಿದ್ರೆ ಆ ಕಥೆಗೆ ಒಂದು ಸೊಗಸು ಬರುತ್ತೆ. ಉದಾ : ದಕ್ಷಿಣ ಕನ್ನಡದ ಒಂದು ವಸ್ತುವನ್ನು ತೆಗೆದುಕೊಂಡು ಅಲ್ಲಿನ ಭಾಷೆ, ಸಂಸ್ಕೃತಿ, ಸೊಗಸು ಪಾತ್ರ ಅವುಗಳನ್ನು ತನ್ನ ಕತೆಯಲ್ಲಿ ಬಳಸಿಕೊಳ್ಳಬೇಕು. ಧಾರವಾಡ ಪ್ರಾಂತ್ಯದ ವಸ್ತುವಿನಲ್ಲಿ ಅಲ್ಲಿನ ಸ್ಥಳೀಯ ಭಾಷೆ, ಸಂಸ್ಕೃತಿ, ಪಾತ್ರಗಳು ಇವನ್ನು ಬಳಸಿ ಕತೆ ಬರೆಯಬೇಕು.ಹೀಗೆ ಅಲ್ಲಿಂದ ಒಂದು ಇಲ್ಲಿಂದ ಒಂದು ಎಂದು ಬೆರೆಸಿ ಕತೆ ಬರೆಯಲು ಸಾಧ್ಯವಿಲ್ಲ ಪಾತ್ರಕ್ಕನುಗುಣವಾಗಿ ಭಾಷೆಯನ್ನು ಬಳಸಬೇಕು ಹೀಗೆ ಎಲ್ಲವನ್ನು ಎಚ್ಚರಿಕೆಯಿಂದ ತಿಳಿದು ಕತೆಯನ್ನು ಬರಿಬೇಕು.

ಕತೆಯ ವಸ್ತುಗಳು ಸಾಮಾಜಿಕ ಸಮಸ್ಯೆಗಳಾಗಿರಬೇಕು ಅಥವಾ ಒಂದು ವಿಶೇಷ ಸಂದೇಶವನ್ನು ಕೊಡುವಂತಿರಬೇಕು.

* ತುಳು ನಾಡಿನ ಸಂಪ್ರದಾಯಗಳು, ಆಚರಣೆಗಳು ಈಗಿನ ಕಾಲದಲ್ಲಿಯೂ ನಡೆದುಕೊಂಡು ಬರುತ್ತವೆಯಾ?.

ಹೌದು, ಸಂಪ್ರದಾಯಗಳು ಈಗಲೂ ಇದ್ದವೆ. ಆದರೆ ಈ ಆಧುನೀಕರಣದ ಗಾಳಿಗೆ ಅಲ್ಪಸ್ವಲ್ಪ ತೂರಿ ಹೋಗಿರಬಹುದು. ನನ್ನ ಕತೆಗಳು ಭೂಮಸೂದೆ ಬರೋದಕ್ಕೆ ಮುಂಚಿನ ಕತೆಗಳಾಗಿರುವ ಕಾರಣ ಆಗಿನ ಕಾಲದಲ್ಲಿ ಎಲ್ಲಾ ಸಂಪ್ರದಾಯಗಳು ಇದ್ದುವು ನಾನು ಕತೆಗಳಲ್ಲಿ ಕೆಲವು ಸಂಪ್ರದಾಯಗಳನ್ನು ತಿಳಿಸಿದ್ದೀನಿ ಅವು ನಾವು ಕಂಡು ನೋಡಿದಂತವು, ವೈದೇಹಿಯವರೂ ಸಹ ಕತೆ ಬರೆದರು ಅವರು ಅವರ ಕಣ್ಣಿಗೆ ಕಂಡಂತಹ ಬ್ರಾಹ್ಮಣ ಸಂಪ್ರದಾಯ ಲೋಕವನ್ನು ಕತೆಯಲ್ಲಿ ತೋರಿಸಿದರು. ಆದರೆ ನಾನು ಅಬ್ರಾಹ್ಮಣರು ಆಗಿರೋ ಕಾರಣ

ನಾನು ಅಬ್ರಾಹ್ಮಣ ಲೋಕವನ್ನು (ಸಂಪ್ರದಾಯಗಳನ್ನು) ನನ್ನ ಕತೆಗಳಲ್ಲಿ ತಂದಿದ್ದೇನೆ ನಾನು ಪೂದ್ರ ಮನೆತನಗಳ ಸಂಪ್ರದಾಯಗಳನ್ನು ನೋಡಿಬರೆದಿದ್ದೇನೆ.

* ಆಚರಣೆಗಳ ಸಂಪ್ರದಾಯಗಳು ಇವೆಯೇ?

ಹೌದು ಖಂಡಿತ ಇವೆ. ಆದರೆ ಸ್ವಲ್ಪ ಕ್ಷೀಣವಾಗಿರಬಹುದು. ಮುಂಚೆ ದೀಪಾವಳಿಗೆ ಲಕ್ಷ್ಮಿ ಪೂಜೆ ಮಾಡ್ತಿದ್ವಿ, ಆದರೆ ಈಗ ವರ ಮಹಾಲಕ್ಷ್ಮಿ ಪೂಜೆ ಬಂದಿದೆ. ನಮ್ಮಲ್ಲಿ ಇರಲಿಲ್ಲ ಈಗ ಬಂದಿವೆ. ಅವುಗಳ ದಾಳಿಗಳಿಗೆ ಸಣ್ಣಪುಟ್ಟ ಆಚರಣೆಗಳು ಮಾಯವಾಗಿವೆ, ತುಳುನಾಡಿನಲ್ಲಿ ಮಳೆಗಾಲ ಬಂದರೆ ಆಟಿಕಳಂಜ ಮಾಡಬೇಕು. ಮಾಡುತ್ತಿಲ್ಲ ಬದಲಾಗಿ ಆಳ್ವಾಸ್ ನುಡಿಸಿರಿ ಅಂತ ಮಾಡ್ತಾರೆ.

* ನಾಗರಿಕತೆ ಕೆಳವರ್ಗದವರ ಮೇಲೆ ಪರಿಣಾಮ ಬೀರಿದೆಯೇ?

ದಕ್ಷಿಣ ಕನ್ನಡ ನಾಗರಿಕತೆಯ ಹೆಬ್ಬಾಗಿಲಾಗಿತ್ತು. ಇಲ್ಲಿ ಕಡಲಿರುವ ಕಾರಣ ಪಾಶ್ಚಿಮಾತ್ಯರು ಇಲ್ಲಿಂದ ವಿಜಯನಗರ ಸಾಮ್ರಾಜ್ಯಕ್ಕೆ ಹೋಗುತ್ತಿದ್ದರು.

ನಾಗರಿಕತೆಗೇನು ಕೊರತೆ ಇಲ್ಲ ಇಲ್ಲಿ ಬಡವರಿಗೆ ಹಣ, ಅನ್ನ ಇಲ್ಲದಿರಬಹುದು ಆದರೆ ನಾಗರಿಕತೆ ತುಂಬಾ ಇತ್ತು ಬಡತನದಲ್ಲಿಯೂ ನಾಗರೀಕತೆ ಇದೆ.

* ಮೌಢ್ಯತೆ ಈಗಲೂ ಇದೆಯಾ?

ಇದೆ ಮೌಢ್ಯತೆ ಎಲ್ಲಾ ಕಡೆ ಇದೆ ಅದೇರೀತಿ ದಕ್ಷಿಣ ಕನ್ನಡದಲ್ಲಿಯೂ ಇದೆ.

* ಅಲ್ಲಿನ ಜನರಿಗೆ ಕಷ್ಟ ಬಂದಾಗ ಪ್ರಸ್ತುತದಲ್ಲಿಯೂ ಪಂಜುರ್ಲಿ ಅಥವಾ ಭೂತದೇವರ ಮೊರೆ ಹೋಗ್ತಾರಾ?

ಹೌದು ಈಗಲೂ ಭೂತ ಪಂಜುರ್ಲಿಯನ್ನ ಆರಾದನೆ ಇದೆ ಕರಾವಳಿಯಲ್ಲಿ ಹಿಂದುತ್ವವನ್ನು ಉಳಿಸಬೇಕಾದರೆ ಈ ಹಿಂದು ದೇವರುಗಳನ್ನು ಅಥವಾ ಆ ನೆಲದ ದೇವರುಗಳನ್ನು ಜಾಸ್ತಿ ಆರಾಧನೆ ಮಾಡುತ್ತಾರೆ ಅದು ಸಂಪ್ರದಾಯವೂ ಕೂಡ ಹೌದು.

* ಮಗು ದಾನ ಕೊಡುವ ಪದ್ಧತಿ ಇದೆಯಾ?

ಹೌದು ಇದೆ, ಆದರೆ ಅದರ ಹಿಂದಿನ ನಿಯಮಾವಳಿಗಳು ಈಗಿಲ್ಲ ಆಚರಣೆ ಇದೆ ಬೇರೇ ರೀತಿಯಲ್ಲಿ ಮಾಡುತ್ತಾರೆ. ಎಂಜಲು ತಿನಿಸುವುದಿಲ್ಲ. ಬದಲಿಗೆ ಬೇರೆ ಅನ್ನಕೊಡುತ್ತಾರೆ ಹೀಗೆ ಅದರಲ್ಲಿ ಕೆಲವು ಬದಲಾವಣೆಯಾಗಿವೆ.

* ಒಕ್ಕಲು–ಮಕ್ಕಳು, ಧಣಿ, ಗೇಣಿ, ಜೀತಪದ್ಧತಿ ಇವೆಲ್ಲವೂ ನಿಂತು ಹೋಗಿದೆ ಎಂದು ಕಥೆಯಲ್ಲಿ ಹೇಳಲಾಗಿದೆ ಅವು ಸಂಪೂರ್ಣವಾಗಿ ನಿಂತು ಹೋಗಿದ್ದಾವ?

ನಿಂತು ಬಿಟ್ಟಿದ್ದಾವೆ ಮತ್ತು ಅಲ್ಲಲ್ಲಿ ಕಾಣುತ್ತವೆ ಅದು ಅಪರೂಪ ಆದರೆ ಅದರ ಹೆಸರುಗಳು ಜೀತ, ಒಕ್ಕಲು ಅಂತ ಹೇಳುವುದಿಲ್ಲ. ಸುಮ್ಮನೆ ಕೆಲಸ ಮಾಡ್ತಿದ್ದೀನಿ ಅಂತ ಹೇಳ್ತಾರೆ, ಕೈಗಾರೀಕರಣ ಬಂದ ಮೇಲೆ ಎಲ್ಲರಿಗೂ ಅಲ್ಲಿ ಉದ್ಯೋಗವಕಾಶ ಸಿಕ್ಕಿವೆ ಹಾಗಾಗಿ ಹಳೆ ತಲೆಗಳು ಇಂತಹ ಪದ್ಧತಿಗಳನ್ನು ಮಾಡ್ತಾರೆ ಅಪರೂಪಕ್ಕೆ.

* ಕೆಳವರ್ಗದವರು ರಾಜಕೀಯವಾಗಿ ಮುಂದುವರೆದಿದ್ದಾರೆಯೇ?

ಹೌದು ರಾಜಕೀಯ ಮೀಸಲಾತಿಯಿಂದ ಅವರಿಗೂ ರಾಜಕೀಯ ಪ್ರವೇಶದ ಹಕ್ಕು ಸಿಕ್ಕಿ ರಾಜಕೀಯ ಸೇರಿ ಸ್ವಲ್ಪ ಜನರು ಮುಂದುವರೆದಿದ್ದಾರೆ.

* ತುಳುನಾಡಿನಲ್ಲಿ ಇದ್ದಂತಹ ಕುಲ ಕಸುಬುಗಳು ಕೈಗಾರೀಕರಣದ ಹೊಡೆತದಿಂದ ನಶಿಸಿ ಹೋಗಿದ್ದಾವೆಯೇ ಅಥವಾ ಉಳಿದಿವೆಯೇ?

ಕೈಗಾರಿಕಾ ಕ್ರಾಂತಿಯ ಹೊಡೆತಕ್ಕೆ ಸಿಲುಕಿ ಕುಲ ಕಸುಬುಗಳು ನಾಶದ ಅಂಚಿಗೆ ಬಂದಿವೆ ಆದರೆ ಸಂಪೂರ್ಣ ನಾಶಹೊಂದಿಲ್ಲ. ಅಲ್ಲಲ್ಲಿ ಇಳಿ ತಲೆ ಮಾರಿನವರು ತಮ್ಮ ಕುಲ ಕಸುಬನ್ನು ಮಾಡುತ್ತಾರೆ. ಅದರಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ.

* ಕೆಳ ವರ್ಗದವರು ಶೈಕ್ಷಣಿಕವಾಗಿ ಬೆಳಕನ್ನು ಕಂಡಿದ್ದಾರಾ?

ಹೌದು ತುಂಬಾ ಚೆನ್ನಾಗಿ ಶೈಕ್ಷಣಿಕವಾಗಿ ಬೆಳೆದಿದ್ದಾರೆ ಈ ಕೈಗಾರೀಕರಣ ಆಯ್ತಲ್ಲ, ಮತ್ತೆ ಐಟಿ,ಬಿಟಿ, ಕಂಪನಿಗಳಲ್ಲಿ ಬಂದವಲ್ಲ. ಆಗ ಅವರಿಗೆ ತಿಳಿಯಿತು ಶಿಕ್ಷಣ ಪಡೆಯಬೇಕು ಉದ್ಯೋಗಾವಕಾಶ ಇವೆ ಎಂದು ತಿಳಿಯಿತು.

*ಹೆಣ್ಣು ಮಕ್ಕಳಿಗೆ ಶಿಕ್ಷಣ ಸಿಕ್ಕಿದಿಯಾ?

ನಿಜ ಹೌದು ಹೆಣ್ಣು ಮಕ್ಕಳು ಚೆನ್ನಾಗಿ ಓದಿದ್ದಾರೆ. ಮೊದಲೆಲ್ಲಾ ಪ್ರೌಢಶಿಕ್ಷಣದವರೆಗೆ ಕಳುಹಿಸಿ ಬಿಡಿಸ್ತಿದ್ರು ಕಾಲೇಜಿಗೆ ಬೇರೆ ಊರಿಗೆ ಹೋಗಬೇಕು ಅಥವಾ ಬಡತನದಿಂದ. ಆದರೆ ಈಗ ಹಾಗಿಲ್ಲ ಹೆಣ್ಣು ಮಕ್ಕಳೆ ಗಂಡು ಮಕ್ಕಳಿಗಿಂತ ಚೆನ್ನಾಗಿ ಶಿಕ್ಷಣ ಪಡೆದುಕೊಂಡಿದ್ದಾರೆ.

*ಹಿಂದು ಮುಸ್ಲಿಂ ಧರ್ಮದ ಜನರುಗಳ ನಡುವೆ ಹೊಂದಾಣಿಕೆ ಹೇಗಿದೆ .ಏನಾದರೂ ಕಲಹಗಳು ನಡೆದಿವೆಯಾ?

ಕರಾವಳಿಯಲ್ಲಿ ಹಿಂದೆ ಮುಸ್ಲಿಂ ಕುಟುಂಬಗಳು ಕಡಿಮೆ ಇದ್ದರೂ ಈಗ ಜಾಸ್ತಿಯಾಗಿದ್ದಾರೆ ಹಳ್ಳಿಗಳಲ್ಲಿ ಎರಡು ಧರ್ಮಗಳ ನಡುವೆ ಹೊಂದಾಣಿಕೆ ಚೆನ್ನಾಗಿದೆ. ನಗರ ಪ್ರದೇಶದ ಮುಸ್ಲಿಂರಿಗೂ ಹಾಗೂ ಹಿಂದೂಗಳಿಗೂ ಆಗಾಗ ಸಣ್ಣಪುಟ್ಟ ಗಲಭೆಗಳು ನಡೆಯುತ್ತವೆ ಅದಕ್ಕೆ ಕೆಲವು ಕಿಡಿಗೇಡಿಗಳು ಕಾರಣ ಧರ್ಮ ಧರ್ಮಗಳ ಮಧ್ಯ ಕಲಹ ತಂದೊಡ್ಡುವುದೇ ಅವರ ಕೆಲಸವಾಗಿರುತ್ತದೆ.

* ಕಸಬರಿಕೆ ಮತ್ತು ಸೇವಂತಿ ಕತೆಗಳಲ್ಲಿ ಕೆಳ ವರ್ಗದ ಹೆಣ್ಣು ಮಕ್ಕಳನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ ಹಾಗಾಗಿ ಈಗಿನ ಕಾಲದಲ್ಲಿ ಅಂತರ್ಜಾತಿ ವಿವಾಹಗಳು ನಡೆಯುತ್ತಿವೆಯಾ?

ಮುಗ್ಧ ಹೆಣ್ಣು ಮಕ್ಕಳನ್ನು ಕೇವಲ ಕರಾವಳಿ ಭಾಗದಲ್ಲಿ ಮಾತ್ರವಲ್ಲ ಎಲ್ಲಾಕಡೆ ದುರುಪಯೋಗ ಪಡಿಸಿಕೊಳ್ಳುತ್ತಾರೆ ಕರಾವಳಿ ಭಾಗಕ್ಕೆ ನೋಡುವುದಾದರೆ ಅಂತರ್ಜಾತಿ ವಿವಾಹಗಳು ಹೆಚ್ಚು ಕಡಿಮೆ ನಡೆಯುತ್ತವೆ. ನನ್ನದು ಕೂಡ ಅಂತರ್ಜಾತಿ ವಿವಾಹವೇ ಕತೆಗಳು ತುಂಬಾ ಹಿಂದಿನವು ಆಗಾಗಿ ಅಂತಹ ಸಮಯದಲ್ಲಿ ಅಂತರ್ಜಾತಿವಿವಾಹ ಕಡಿಮೆ ಇತ್ತು ಈಗ ಬದಲಾಗಿದೆ.

* ಕರಾವಳಿ ನಾಡಿನಲ್ಲಿ ಕನ್ನಡವನ್ನು ಕೆಲವಾರು ಜನರು ಮಾತನಾಡುವುದಿಲ್ಲ. ಇನ್ನು ಕೆಲವು ಮಂದಿಗೆ ಕನ್ನಡ ಬರುವುದೇ ಇಲ್ಲ ಕಾರಣ?

ಕರಾವಳಿ ನಾಡಿನಲ್ಲಿ ಸಾಮನ್ಯವಾಗಿ ಎಲ್ಲರಿಗೂ ಕನ್ನಡ ಬರುತ್ತದೆ. ಆದರೆ ಹೆಚ್ಚು ತುಳುವನ್ನು ಬಳಸಿ ಮಾತನಾಡುತ್ತಾರೆ. ಏಕೆಂದರೆ ಅಲ್ಲಿ ದ್ವಿಭಾಷಿಕತೆ ಇರುವ ಕಾರಣ ಎಲ್ಲಾ ನಾಮಫಲಕಗಳು ಕನ್ನಡದಲ್ಲಿಯೇ ಇದ್ದರೂ ಸಹ ಜಾಸ್ತಿ ತುಳುವನ್ನೇ ಮಾತನಾಡುತ್ತಾರೆ. ತುಳುವಿನ ಅಭಿಮಾನಕೋಸ್ಕರ ಮತ್ತೆ ಪಶ್ಚಿಮಘಟ್ಟದ ಕೆಳಗಿರುವ ಕೆಲವಾರು ಜನಾಂಗಗಳಿಗೆ ಕನ್ನಡ ಅಲ್ಪ ಸ್ವಲ್ಪ ಬರುತ್ತೆ ತಳವರ್ಗದ ಕೆಲವರಿಗೆ ತುಳು ಬಿಟ್ಟರೆ ಬೇರೆ ಭಾಷೆ ಬರುವುದೇ ಇಲ್ಲ.

* ನಿಮ್ಮ ಕತೆಗಳಲ್ಲಿ ಅಥವಾ ಸಾಹಿತ್ಯದಲ್ಲಿ ಅಲ್ಲಲ್ಲಿ ತುಳು ಪದಗಳು ಮಿಶ್ರಿತವಾಗಿದೆಯಲ್ಲ ಕಾರಣ?

ನಾನು ಮುಂಚೆ ಹೇಳಿದಂಗೆ ಕೆಲವು ಜನಾಂಗಗಳಿಗೆ ಕನ್ನಡ ಬರುತ್ತಿರಲಿಲ್ಲ ಅಂತಹ ಪಾತ್ರಗಳು ಕತೆಯಲ್ಲಿ ಬಂದಾಗ ಬ್ರಾಹ್ಮಣರು ಅಥವಾ ಮೇಲ್ವರ್ಗದವರು ಕನ್ನಡ ಗೊತ್ತಿಲ್ಲದವರ ಹತ್ತಿರ ಮಾತನಾಡುವಾಗ ತುಳುವನ್ನೇ ಉಪಯೋಗಿಸುತ್ತಾರೆ ಮತ್ತು ಕನ್ನಡ ಮಾತನಾಡುವವರೂ ಕೂಡ ಮಧ್ಯ ಮಧ್ಯ ತುಳು ಪದಗಳನ್ನ ಬಳಸುತ್ತಾರೆ.

* ಕೊನೆಯದಾಗಿ ಕಾನೂನಿನ ಅರಿವು ಅಲ್ಲಿನ ಶೋಷಿತರಿಗೆ ಇದೆಯಾ? ಮತ್ತು ಸರ್ಕಾರದ ಸವಲತ್ತುಗಳನ್ನು

ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಿದ್ದಾರಾ?

ಈವತ್ತು ದಲಿತರು ಅಥವಾ ಹಿಂದುಳಿದವರು ತಮ್ಮ ಶೋಷಣೆ ವಿರುದ್ಧ ಹೋರಾಡುತ್ತಿದ್ದಾರೆ. ಅಂದರೆ ಅದು ಕಾನೂನಿನ ಸಹಕಾರದಿಂದಲೇ ಸಂವಿಧಾನದಿಂದ ಕೇವಲ ಕರಾವಳಿ ಹಿಂದುಳಿದವರಲ್ಲಿ ನಮ್ಮ ದೇಶದಲ್ಲಿಯೇ ಶೋಷಣೆಗೆ ಒಳಗಾದವರು, ನಿರ್ಭಯವಾಗಿ ಬದುಕುವಂತಾಯಿತು. ಹಾಗಾಗಿ ತುಳುನಾಡಿನಲ್ಲಿಯೂ ಕೂಡ ದಲಿತರು ಅಥವಾ ಶೋಷಣೆಗೆ ಒಳಗಾದವರು ಅಭಿವೃದ್ಧಿ ಹೊಂದಿದ್ದಾರೆ ಅಥವಾ ಉದ್ಧಾರ ಆಗಿದ್ದಾರೆ. ಎನ್ನುವುದಾದರೆ ಅದು ಸಂವಿದಾನದ ಕೊಡುಗೆ. ಯಾವ ಮೇಲ್ವರ್ಗದವರೂ ಅಥವಾ ಬ್ರಾಹ್ಮಣರು ಕೂಡ ದಲಿತರನ್ನು ಉದ್ಧಾರ ಮಾಡಲಿಲ್ಲ ಅವರನ್ನು ತುಳಿದು ಶೋಷಣೆ ಮಾಡಿದರೇ ವಿನಃ ಅವರ ಉದ್ಧಾರ ಮಾಡಲಿಲ್ಲ.

ಈ ಸಂವಿಧಾನದ ಸಹಾಯದಿಂದ ಕೆಳವರ್ಗದವರು ಇವತ್ತು ಮೇಲ್ವರ್ಗದವರ ಸರಿಸಮಾನಕ್ಕೆ ಬದುಕುತಿದ್ದಾರೆ.ಈ ದಲಿತರು ಅಥವಾ ಶೋಷಣೆಗೆ ಒಳಗಾದವರನ್ನು ಮೇಲೆತ್ತಿದ ಮತ್ತು ಅಭಿವೃದ್ಧಿ ಮಾಡಿದಂತಹ ಕೀರ್ತಿ ಗೌರವ ನೇರವಾಗಿ ಸಂವಿಧಾನಕ್ಕೆ ಸೇರುತ್ತದೆ. ಅವರೆಲ್ಲರೂ ಕೂಡ ಸರ್ಕಾರದ ಸವಲತ್ತುಗಳನ್ನು ಉಪಯೋಗಿಸಿಕೊಂಡರೂ ಅಧಿಕಾರಿ ವರ್ಗದವರಿಗೆ ಸವಲತ್ತುಗಳಲ್ಲಿ ತಾರತಮ್ಯ ತೋರಿಕೆಯಾಗಿರಬಹುದು. ಆದರೆ ಸರ್ಕಾರದ ಸವಲತ್ತು ಉಪಯೋಗಿಸಿಕೊಂಡು ಮೇಲೆ ಬಂದಿರುವುದು ನಿಜ.

*ತುಳುನಾಡಿಗೂ ನಿಮಗೂ ಪ್ರಸ್ತುತ ಸಂಬಂಧ ಹೇಗಿದೆ?

ನಾನು ಪ್ರತಿ ತಿಂಗಳಿಗೆ ಒಂದರಿಂದ ಎರಡು ಬಾರಿ ನನ್ನ ಊರಿಗೆ ಹೋಗಿ ಬರುತ್ತೇನೆ, ನನ್ನ ಸಂಬಂಧ ಕರಾವಳಿ ಜೊತೆ ಕಡಿದು ಹೋಗಬಾರದು ಎಂದು ನನ್ನ ಮಗನನ್ನು ಅಲ್ಲೇ ಇರಿಸಿ ಓದಿಸುತ್ತಿದ್ದೇನೆ.

*ತುಂಬಾ ಸಂತೋಷವಾಯಿತು ಮೇಡಂ ಧನ್ಯವಾದಗಳು.

ಅಧ್ಯಾಯ – ೫

ಕಥೆಗಳ ಪರಿಸರ, ಕಾಲ – ಪ್ರಾದೇಶಿಕತೆ

ಕಥೆಗಳ ಪರಿಸರ, ಕಾಲ, ಪ್ರಾದೇಶಿಕತೆ.

ನಾಗವೇಣಿ ಅವರ ಈ ಕಥೆಗಳು ಸಂಪೂರ್ಣವಾಗಿ ಕರಾವಳಿಯ ಪರಿಸರವನ್ನು ಆಧರಿಸಿ ರಚಿಸಿರುವಂತಹ ಕಥೆಗಳು, ಅವರು ಸ್ವತಃ ಕೇಳೀಕೊಳ್ಳುವಂತೆ 1." ನಾನು ಕಡಲತಳಿಯಲ್ಲಿ ಬೆಳೆದವಳು, ತುಳುನಾಡ ಸಿರಿಯನ್ನು ಕಂಡವಳು, ಹುಟ್ಟಿದ್ದು ಬೆಳದಿದ್ದು ಹೊರಜಗತ್ತನ್ನು ನೋಡಿದ್ದು ಎಲ್ಲಾ ಅಲ್ಲೆ. ಭೂತ-ಕೋಲ, ಕಂಬಳ, ತಾಳ ಮದ್ದಳೆ, ಯಕ್ಷಗಾನ, ದಿಗಿಣದ ಜೊತೆ ಕಡಲ ತೀರ ಅಲೆ-ಬಲೆ, ಬಿರುಮಳೆ-ಕೆರೆಗಾಳಿ, ಮೀನಿನವಾಸನೆ ಎಲ್ಲವೂ ನನ್ನ ಒಳ ಹೊರಗನ್ನು ತುಂಬಿಕೊಂಡಿತ್ತು".1 ಹೀಗೆ ನಾಗವೇಣಿಯವರಿಗೂ ತುಳುನಾಡಿಗೂ ಇರುವಂತಹ ಸಂಬಂಧವನ್ನು ತಾವೇ ಹೇಳಿಕೊಂಡಿದ್ದಾರೆ.

ಅವರು ಕರಾವಳಿಯಲ್ಲಿಯೇ ಹುಟ್ಟಿ ಬೆಳೆದವರು ಹಾಗಾಗಿ ಅವರು ತಮ್ಮ ಸಾಹಿತ್ಯ ರಚನೆಯಲ್ಲಿ ತೊಡಗುವಷ್ಟರಲ್ಲಿ ಆ ತುಳುನಾಡನ್ನು ಬಿಟ್ಟು ಹೊಗೆ ಬಂದಿದ್ದರು ಆನಂತರ ಅಲ್ಲಿನ ಪರಿಸರವನ್ನು ಎಳೆ ಎಳೆಯಾಗಿ ಬಿಚ್ಚಿಟ್ಟರು, ಈ ಕಥೆಗಳಲ್ಲಿ ಬರುವಂತಹ ಕಡಲು ಮೀನುಗಾರರು, ಶಾಂಭವಿ ಹೊಳೆ ಕಡಲ ತಡಿಯ ಕಪ್ಪೆಗಳು, ನರ್ತನೆಗಳು, ತುಳುನಾಡಿನ ಹಲವಾರು ಪ್ರಾಣಿ ಸಂಕುಲಗಳು ಮತ್ತು ಅಲ್ಲಿ ಆಚರಿಸುವಂತಹ ಹಬ್ಬಗಳು, ಸಂಪ್ರದಾಯಗಳು, ಅಲ್ಲಿ ಜನರುಗಳು ಬಳಸುವಂತಹ ಉಡುಗೆ-ತೊಡುಗೆಗಳು ಯಕ್ಷಗಾನ, ಕಂಬಳ, ತಾಳ ಮದ್ದಳೆ, ಭೂತ-ಕೋಲ, ಪಣಂಬೂರಿನ ಬಂದರು ತುಳುನಾಡಿನ ಹಬ್ಬ , ಆಚರಣೆಗಳು ಅಲ್ಲಿನ ವಿಶೇಷ ಖಾದ್ಯಗಳು ಈಗೆ ಸಂಪೂರ್ಣವಾಗಿ ಕರಾವಳಿ ಭಾಗದ ವಿಶೇಷತೆಗಳನ್ನು ನಾವು ಈ ಕಥೆಗಳಲ್ಲಿ ಕಾಣಬಹುದಾಗಿದೆ.

ಆ ಪರಿಸರದಲ್ಲಿ ಏನಿತ್ತು ಏನಿಲ್ಲ ಎಂಬುದನ್ನು ಹೇಳಲಾಗದು ಅಲ್ಲಿ ವೈವಿಧ್ಯಗಳಿದ್ದವು, ವೈರುಧ್ಯಗಳೂ ಇದ್ದವು. ಈ ಒಂದೆ ತುಳುನಾಡಿನಲ್ಲಿ ಮಲಿನಗೊಳ್ಳದ ನಿಸರ್ಗವಿತ್ತು. ಅಂತಹ ನಿಸರ್ಗದಲ್ಲಿ ಸಹಬಾಳ್ವೆ ಕಲಿಸುವ ಜೀವವೈವಿಧ್ಯತೆ ಇತ್ತು, ಜೀವಕ್ಕೆ ಮುದನೀಡುವ ಮಾನವ ಸಂಬಂಧಗಳಿದ್ದವು ಇವೆಲ್ಲದರ ಜೊತೆಗೆ ಆ ಜಗತ್ತಿನ ವೈರುದ್ಯಗಳೆಂಬಂತೆ ಅಲ್ಲಿ ಜಾತಿ ತಾರತಮ್ಯವಿತ್ತು, ವರ್ಗತಾರಮ್ಯವಿತ್ತು ಮತ್ತು ವೈಷಮ್ಯವಿತು, ಬಡತನ, ಭೂಮಾಲಿಕತ್ವವೂ ಸಹ ಅಡಗಿದ್ದವು. ಆದರೆ ಈಗ ಅಂತಹ ಕರಾವಳಿಯ ಚಿತ್ರಣ ಅರ್ಧಕ್ಕಿಂತ ಹೆಚ್ಚು ಬದಲಾಗಿದೆ ಕಾರಣ ನಗರೀಕರಣ, ಆಧುನೀಕರಣದ ದೆಸೆಯಿಂದಾಗಿ ಮನುಷ್ಯ ಸಂಬಂಧದ ಎಳೆಗಳು ನಿದಾನಕ್ಕೆ ದುರ್ಬಲಗೊಳ್ಳತೊಡಗಿದವು ಹಾಗೆಯೇ ಇತ್ತೀಚಿನ ದಿನಗಳಲ್ಲಿ ಮನುಷ್ಯ ಸಂಬಂಧಗಳು ಮತ್ತು ಸಹಬಾಳ್ವೆಯ ವಿವೇಚನೆ ತೀರ ದುರ್ಭಲಗೊಳ್ಳತೊಡಗಿವೆ. ಪ್ರತಿಯೊಂದು ಮನೆಯು ಮತ್ತೊಂದು ಮನೆಯಿಂದ ಪ್ರತ್ಯೇಕವಾಗಬೇಕೆನ್ನುವ ಒಮ್ಮತತೆಯಿಂದ ಬಳಲುತ್ತಾ ತನ್ನ ಅಂಗಳದ ಸುತ್ತಾ ಜಾತಿ ಮತ ಸ್ವಾರ್ಥ, ಅರ್ಥ, ಅಧಿಕಾರ, ಹಮ್ಮು, ಶ್ರೀಮಂತಿಕೆ ಇತ್ಯಾದಿ ಮಾನಸಿಕ ವಿಕಾರಗಳು ಬೆರೆತು ಹೋಗಿವೆ.

ಇನ್ನು ಈ ಕತೆಗಳ ಕಾಲ ಹೇಳುವುದಾದರೇ ನಾಗವೇಣಿಯವರೇ ಹೇಳಿರುವಂತೆ 2"ನಾನು ಕಂಡ ಚಿತ್ರಣವನ್ನೇ ನಾನ್ನ ಬಾಲ್ಯದ ನೆನಪಿಗೆ ಜೀಕಿಕೊಂಡು ಅವುಗಳನ್ನು ಕಥನಗಳನ್ನಾಗಿ ಇಲ್ಲಿ ದಾಖಲಿಸಿದ್ದೇನೆ ಹಾಗೆ ನೋಡಿದರೆ

ಇಲ್ಲಿನ ಕಥೆಗಳು ಕೇವಲ ನನ್ನದೇ ಬಾಲ್ಯದ ನೆನಪಿನ ಕಥನಗಳಲ್ಲಿ ಹಲವು ಕಡೆ ನನ್ನ ನೆನಪಿನ ಎಳೆಗಳು ಅಮ್ಮನ ಮೂಲಕ ಅಮ್ಮನ ತಲೆಮಾರಿಗೂ ಹಿಂದಕ್ಕೆ ಚಾಚಿಕೊಂಡು ಇಂದಿನ ಪ್ರಸ್ತುತತೆಯನ್ನು ಮೀಟಿಕೊಂಡು ಮುಂದುವರೆಯುತ್ತವೆ"2 ಎನ್ನುತ್ತಾರೆ.

ಕಥೆಗಾರ್ತಿಯೇ ಹೇಳುವಂತೆ ಅವರು ತುಳುನಾಡಿನಲ್ಲಿ ಹುಟ್ಟಿ ಬೆಳೆದ ಬಾಲ್ಯದ ದಿನದಿಂದಲೂ ಅವರು ನೋಡಿದಂತಹ ಪರಿಸರ, ಸನ್ನಿವೇಶ ಮತ್ತು ತಾಯಿಯಿಂದಲೂ ಕೇಳಿದಂತಹ ಘಟನೆಗಳು ಇವೆಲ್ಲವುದರ ಮೇಲೆ ಯೋಚಿಸಿ ಅವರು ಈ ಕಥೆಗಳನ್ನು ಬರೆದಿದ್ದಾರೆ. ಅಂದರೆ ಇಲ್ಲಿ ಬರುವ ಕಥೆಗಳ ಕಾಲ ಸ್ವಾತಂತ್ರ್ಯ ಪೂರ್ವದವು ಸೇರಿದಂತೆ ಸ್ವಾತಂತ್ರ್ಯ ನಂತರದ ಕೆಲವು ವರ್ಷಗಳ ನಂತರದಲ್ಲಿ ಇರುವಂತಹ ಘಟನೆಗಳನ್ನು ವಿವರಿಸುವಂತಹವವು. ಇನ್ನು ಈ ಕಥೆಗಳು ಅವುಗಳಲ್ಲಿ ಬರುವಂತಹ ಕತೆಗಳ ಹೆಸರು ಕನ್ನಡ ಮಿಶ್ರಿತ ತುಳುನಾಮಗಳು. ಉದಾ ನೋಡುವುದಾದರೆ ರುಕ್ಕಮೂಲ್ಯ, ಕಿಟ್ಟುಬಟ್ಟರು, ಸೋನಕ್ಕ, ಹೈತಪ್ಪಮೂಲ್ಯ, ಮದನ ಮೂಲ್ಯ, ಗೋಪ, ಹೀರಪ್ಪ, ಜಾರಪ್ಪ, ಕುಪ್ಪ, ಪದ್ಮಕ್ಕ, ಕರಿಯ, ರುಕುಮಾಚಾರ್ತಿ, ಕಿನ್ನಿ, ಮೈಲಿ, ಚಿನ್ನಮ್ಮ, ವಾಂಟಿರಾಮ, ಮಾಕಾಳಿ, ಉಮ್ಮಕ್ಕ, ಕುದುಪ, ಗುಡ್ಡ ಇನ್ನು ಹಲವಾರು ಈ ರೀತಿಯಲ್ಲಿ ಪ್ರಾದೇಶಿಕವಾಗಿ ಬಳಕೆಯಲ್ಲಿರುವಂತಹ ಹೆಸರುಗಳನ್ನು ಕಥೆಗಾರ್ತಿಯು ತಮ್ಮ ಕಥೆಗಳಲ್ಲಿ ಪಾತ್ರಕ್ಕೆ ಯತಾವತ್ತಾಗಿ ಅವುಗಳನ್ನೇ ಬಳಸಿರುವುದು ತುಳುನಾಡ ಪರಿಸರದ ಪ್ರಾದೇಶಿಕತೆಯನ್ನು ಸಾರಿ ಹೇಳುತ್ತದೆ.

ಅಷ್ಟೇ ಅಲ್ಲದೆ ಕಥೆಯಲ್ಲಿ ಬರುವ ಪ್ರಾಣಿ ಪಕ್ಷಿಗಳ ಹೆಸರು ಹಬ್ಬ ಆಚರಣೆಗಳ ಹೆಸರುಗಳು, ಖಾದ್ಯಗಳ ಹೆಸರುಗಳು, ಉಡುಗೆ ತೊಡುಗೆಗಳ ಹೆಸರು ಮಾಸಗಳ ಹೆಸರು, ದಿಕ್ಕುಗಳ ಹೆಸರುಗಳ, ಮರಗಿಡಗಳ ಹೆಸರುಗಳು, ನದಿಹಳ್ಳಗಳ ಹೆಸರುಗಳು ಹೀಗೆ ಪ್ರತಿಯೊಂದು ವಸ್ತು ವಿಷಯ ಸನ್ನಿವೇಶ ಪಾತ್ರಗಳಲ್ಲಿಯೂ ಸಹ ಕರಾವಳಿಯ ಪ್ರಾದೇಶಿಕತೆಯು ಎದ್ದು ಕಾಣುವಂತೆ ಚಿತ್ರಿಸಿದ್ದಾರೆ.

ಅಡಿ ಟಿಪ್ಪಣಿ

1. ನಾಕನೇ ನೀರು : ಮುನ್ನುಡಿಯಲ್ಲಿ ಬರುವ ಬಹಿರಂಗದಲ್ಲಿ ಎನ್ನುವುದರಿಂದ

2. ವಸುಂದರೆಯ ಗ್ಯಾನ : ಮುನ್ನುಡಿಯಲ್ಲಿ ಬರುವ ನನ್ನ ಗ್ಯಾನದೊಳಗಿಂದ

ಅಧ್ಯಾಯ – ೬

"ಕಥೆಗಳ ಆಯಾಮ,ಸಾಂಸ್ಕೃತಿಕ ವಿವರ, ಕೆಳವರ್ಗದವರ ಜೀವನ ಚಿತ್ರಣ, ಜಾತಿ ಸಮಸ್ಯೆ"

ಅಧ್ಯಾಯ – ೬

"ಕಥೆಗಳ ಆಯಾಮ,ಸಾಂಸ್ಕೃತಿಕ ವಿವರ, ಕೆಳವರ್ಗದವರ ಜೀವನ ಚಿತ್ರಣ, ಜಾತಿ ಸಮಸ್ಯೆ"

ನಾಗವೇಣಿಯವರ ೩ ಕಥಾ ಸಂಕಲನಗಳಲ್ಲಿ ಕೆಲವು ಸಂಕಲನಗಳನ್ನು ಆಯ್ದುಕೊಂಡಿದ್ದೇನೆ. ಅವುಗಳೆಂದರೆ

ನಾಕನೇ ನೀರು ಎಂಬ ಕಥಾ ಸಂಕಲನದಿಂದ

೧. ಕಸಬರಿಕೆ,

೨. ಪಂಜುರ್ಲಿ ಮತ್ತು ಗರ್ಭಪಾತ

೩. ಕೊಡೆಯಿಲ್ಲ ಶಿವರಾಯ

೪. ಬಸಿರು

೫. ಬಗ್ಗುಂಡಿ ಪ್ರಸಂಗ

೬. ಬೆಲ್ಲ

* ಎರಡನೇ ಕಥಾಸಂಕಲನ ಮೀಯುವ ಆಟದಿಂದ

೧. ಮೀಯುವ ಆಟ

೨. ಧಣಿಗಳ ಬೆಳ್ಳಿ ಲೋಟ

೩. ದಾನ

೪. ತಾಯ್ತನ

೫. ಸೇವಂತಿಯ ಓಲೆ

* ಮೂರನೆಯ ಕಥಾ ಸಂಕಲನ ವಸುಂಧರೆಯ ಗ್ಯಾನದಿಂದ

೧. ಗೇಣಿದಾರರ ಏಣಿಯಾಟ

೨. ಇವರ‍್ಯಾಕೆ ಕೊರಗರು

ಎಂಬ ಇಷ್ಟು ಕತೆಗಳನ್ನು ಆರಿಸಿಕೊಂಡು ಈ ಕತೆಗಳಲ್ಲಿನ ಬಡತನ, ಕೆಳವರ್ಗದವರ ಬದುಕು, ಉಳ್ಳವರ ದೌರ್ಜನ್ಯ, ಶೋಷಣೆ ಇವುಗಳನ್ನು ಚಿತ್ರಸಿವೆ.

ನಮ್ಮ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಸಂಪೂರ್ಣವಾಗಿ ಜಾತಿ ವ್ಯವಸ್ಥೆಯು ತುಂಬಿದೆ. ಕರ್ನಾಟಕದ ಭಾಗವಾಗಿರುವಂತಹ ಕರಾವಳಿ ಭಾಗದಲ್ಲಿಯೂ ಸಹ ಹಾಸುಹೊಕ್ಕಾಗಿದೆ. ಇಲ್ಲೂ ಸಹ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಎಂದೂ ಇದ್ದಾರೆ ಅದೇ ರೀತಿ ಬೇರೆ ಧರ್ಮದ ಜನರು ಸಹ ಕರಾವಳಿಯಲ್ಲಿ ವಾಸಿಸುತ್ತಿದ್ದಾರೆ ಮುಸಲ್ಮಾನರು, ಕ್ರೈಸ್ತರು ಸೇರಿ ಹಲವಾರು ಧರ್ಮದವರು ಇದ್ದಾರೆ.

ನಾಗವೇಣಿಯವರ ಕಥಾ ಚೌಕಟ್ಟಿನಲ್ಲಿ ನೋಡುವುದಾದರೆ ಅವರ ಈ ಕಥೆಗಳು ಸಂಪೂರ್ಣವಾಗಿ ಹಳ್ಳಿ ಸೊಗಡನ್ನು ಪರಿಚಯಿಸುವ ಕಥೆಗಳು. ಲೇಖಕಿಯು ತಮ್ಮ ಕಥೆಗಳಲ್ಲಿ ಎಲ್ಲ ವಸ್ತು, ವಿಷಯ, ವರ್ಗಗಳನ್ನು

ಕುರಿತು ವಿವರಿಸಿದ್ದಾರೆ. ಅವರಲ್ಲಿ ನಾನು ಈ ಜಾತಿವ್ಯವಸ್ಥೆಯಲ್ಲಿನ ಕೆಳ ವರ್ಗದ ಜನರುಗಳ ಜೀವನಶೈಲಿ, ಬದುಕು, ಕಸುಬು ಆಚರಣೆಗಳ ಬಗೆಗೆ ಅಧ್ಯಯನವನ್ನು ಮಾಡಲುಹೊರಟಿದ್ದೇನೆ ಮತ್ತು ಇವರ ಕೆಲವು ಕತೆಗಳನ್ನು ಆಯ್ದುಕೊಂಡು, ಅಂತಹ ಕತೆಗಳನ್ನು ಜಾತಿ ವ್ಯವಸ್ಥೆಯ ಹಿನ್ನೆಲೆಯಲ್ಲಿ ನಾನು ಅಧ್ಯಯನ ಮಾಡಬೇಕೆಂದುಕೊಂಡಿದ್ದೇನೆ, ಈ ಕತೆಗಳಲ್ಲಿ ಬರುವ ಉಳ್ಳವರು ಮತ್ತು ಇಲ್ಲದವರ ನಡುವಿನ ಸಂಬಂಧ ಸಂಘರ್ಷ ಇಲ್ಲದವರ ಬದುಕು ಹೀಗೆ ಶೋಷಣೆ ಇಂತಹ ಗಂಭೀರ ವಿಷಯಗಳನ್ನು ಚರ್ಚಿಸಲು ಬಯಸುತ್ತೇನೆ.

ಮೊದಲಿಗೆ "ಕಸಬರಿಕೆ" ಕತೆಯ ಬಗೆಗೆ ನೋಡುವ

ಕಸಬರಿಕೆ

ಚಂದು ಸ್ಫುರದ್ರೂಪಿ ಹೆಣ್ಣುಮಗಳು ಆಕೆ ತನ್ನ ಸುಂದರವಾದಂತಹ ಮುಖವನ್ನು ಗಂಟಿಕ್ಕಿಕೊಂಡು ದೂಪದ ಮರದಡಿ ತನ್ನ ತಂದೆಯ ಬರುವಿಕೆಯ ದಾರಿಯನ್ನು ಕಾಯುತ್ತಿರುವ ದೃಶ್ಯದಿಂದ ಪ್ರಾರಂಭವಾಗುವಂತಹ ಈ ಕಸಬರಿಕೆ ಕತೆಯು ದಲಿತ ಕುಟುಂಬಕ್ಕೆ ಸೇರಿದ ಒಂದು ಹೆಣ್ಣು ತನ್ನ ಆತ್ಮಾಭಿಮಾನ, ಸ್ವಾಭಿಮಾನ, ಹೆಣ್ತನಕ್ಕಾಗಿ ಆಕೆ ಬ್ರಾಹ್ಮಣ್ತಿಯ ವಿರುದ್ಧ ತಿರುಗಿ ಬೀಳುವಂತಹ ಸನ್ನಿವೇಶವನ್ನು ವರ್ಣಿಸುತ್ತದೆ.

ಆದರೆ ಅಂತಹ ತಿರುಗಿ ಬೀಳುವಂತಹ ಸಂದರ್ಭವು ಆಕೆಗೆ ಅನಿವಾರ್ಯವೂ ಆಗಿರುತ್ತದೆ. ಆದರೆ ಅದು ಶಾಶ್ವತವಲ್ಲ ದಲಿತ ವರ್ಗಕ್ಕೆ ಸೇರಿದ ರುಕ್ಕುಮೂಲ್ಯನ ಮಗಳು ಈ ಚಂದು ಈಕೆ ಹುಟ್ಟಿದ 15 ವರ್ಷಗಳ ನಂತರ ತಾಯಿ ತೀರಿಹೋಗಿರುತ್ತಾಳೆ. ಅಂದಿನಿಂದ ತಂದೆ ರುಕ್ಕನೇ ಸಾಕಿ ಬೆಳೆಸಿರುತ್ತಾನೆ. ಈ ದಲಿತ ಹೆಣ್ಣು ಮಗಳು ಶೆಟ್ಟರುಡುಗ ಮಂಜಪ್ಪನೆಂಬುವವನಲ್ಲಿ ಪ್ರೀತಿ ಚಿಗುರಿ ಅದು ಪರಸ್ಪರರ ನಡುವೆ ಹೆಮ್ಮರವಾಗಿ ಬೆಳೆದಿರುತ್ತದೆ. ಈ ಪ್ರೀತಿಯನ್ನು ಶೆಟ್ಟರ ಕೇರಿಯವರಾಗಲಿ ಅಥವಾ ಮೂಲ್ಯರ ಕೇರಿಯವರಾಗಲಿ ಗಂಬೀರವಾಗಿ ಪರಿಗಣಿಸಿರುವುದಿಲ್ಲ. ಈ ರೀತಿ ಇರುವಾಗ ಚಂದು ಕಿಟ್ಟು ಬಟ್ಟರು ಎಂಬವರ ಮನೆಯಲ್ಲಿ ಕಸ ಮುಸುರೆ ಕೆಲಸಕ್ಕೆ ಪ್ರತಿದಿನ ಹಾಜರಿರುತಿದ್ದಳು ಆ ಕೆಲಸವನ್ನೆಲ್ಲಾ ಮಾಡುವುದಕ್ಕೆ ಮುಂಚೆ ಚಂದು ತನ್ನ ಮನೆಯ ಕೆಲಸ ಕಾರ್ಯಗಳನ್ನು ಮುಗಿಸಿ ನಂತರ ಕಿಟ್ಟು ಬಟ್ಟರ ಮನೆಯ ಕಡೆಗೆ ಕಂಕುಳಲ್ಲಿ ಕಸಬರಿಕೆ ಹಿಡಿದು ಹೋಗುವುದು ವಾಡಿಕೆ. ಪ್ರತಿದಿನ ಹೀಗೆ ನಡೆಯಬೇಕಾದರೆ ಒಂದು ದಿನ ಅವಳ ಪ್ರಿಯಕರ ಮಂಜಪ್ಪ ಬೆಳಿಗ್ಗೆ ಕಿಟ್ಟು ಬಟ್ಟರ ಮನೆಗೆ ಹೊರಟಿದ್ದ ಚಂದುವಿನ ಜೊತೆ ಅದೇ ಧೂಪದ ಮರದಡಿ ಸರಸಕ್ಕೆ ಎಳೆದುಕೊಂಡು ಬಿಡುತ್ತಾನೆ. ಅದರಲ್ಲಿ ಮೈಮರೆತ ಚಂದುವಿಗೆ ತನ್ನ ಬ್ರಾಹ್ಮಣ್ತಿ ಅಮ್ಮಣ್ಣಿಯಮ್ಮ ಏನೆಲ್ಲಾ ಬಯ್ಯಬಹುದು ಎಂದು ನೆನಪಿಸಿಕೊಳ್ಳುವಷ್ಟರಲ್ಲಿ ಹೊತ್ತು ನೆತ್ತಿಯ ಮೇಲೆ ಬಂದಾಗಿತ್ತು ಕೆಲಸದ ಮನೆಗೆ ಬರುವ ಹೊತ್ತಿಗೆ ಸ್ವತಃ ಅಮ್ಮಣ್ಣಿಯಮ್ಮನವರು ಮಡಿಕೆರೆಯಲ್ಲಿ ಮಿಂದು ಮನೆಯ ಅಂಗಳ ಸ್ವಚ್ಛಗೊಳಿಸಿ ರಂಗೋಲಿ ಬಿಡುತ್ತಿರುವ ದೃಶ್ಯ ಚಂದುವಿನ ಕಣ್ಣಿಗೆ ಬೀಳುತ್ತೆ. ಆಗ ಆ ಬ್ರಾಹ್ಮಣ್ತಿ ಚಂದುವಿಗೆ ಬಯ್ಯುತ್ತಾಳೆ ಅದು ಕೂಡ 1" ಏನೇ ಸೂಳಿ ಮುಂಡೆ ಮಂಜಪ್ಪನೊಡನೆ ಬೆಳಗಿನ ಒಂದು ಸುತ್ತಿನ ಮುಲಗಾಟ ಮುಗಿತಾ? ಎಲ್ಲಿ ಕಟ್ಟಿ ಹುಣಿಯಲ್ಲಾ? ಕೊಡ್ಡಬ್ಬು ಸ್ಥಾನದ ಎದುರಿನ ದೂಪದ ಮರದಡಿಯಲ್ಲ, ಮಿಂಡನೊಬ್ಬ ಸಿಕ್ಕಿದ್ರೆ ಉಂಡ ಮನೆಯೂ ನೆನಪಾಗುವುದಿಲ್ಲ ನಿನಗೆ"1 ಕೇವಲ ತನ್ನ

ಅಂತರಂಗದಲ್ಲಿರಬೇಕಾದ ವಿಷಯವನ್ನು ನಾಚಿಕೆ ಮುಲಾಜಿಲ್ಲದೆ ನಿರ್ದಾಕ್ಷಿಣ್ಯವಾಗಿ ಬೀದಿ ಪಾಲು ಮಾಡುತ್ತಿರುವ. ಆ ಅಮ್ಮಣ್ಣಿಯಮ್ಮನ ಮೇಲೆ ಅದುವರೆಗೂ ಇದ್ದಂತಹ ಗೌರವ ವಿಶ್ವಾಸಗಳೆಲ್ಲಾ ಚಂದುವಿನಲ್ಲಿ ಇಂಗಿಹೋಗುತ್ತವೆ.

ಈ ಘಟನೆ ನಡೆಯುವ ವರೆಗೂ ಕೂಡ ಬ್ರಾಹ್ಮಣ್ತಿ ಎಂದರೆ ಈ ಚಂದುವಿಗೂ ಪ್ರೀತಿ ಗೌರವ ವಿಶ್ವಾಸಗಳಿದ್ದವು ಆದರೆ ಇಂತಹ ವಿಷಯವನ್ನು ಬೀದಿಯಲ್ಲಿ ಬೊಗಳಿ ತನ್ನ ಮರ್ಯಾದೆಯನ್ನು ತೆಗೆದಾಗ ಅವೆಲ್ಲವೂಗಳು ಬರಿದಾಗುತ್ತವೆ. ಹೌದು ನಿಜ ಚಂದು ಮಾಡಿದ್ದು ನಿಜವಾಗಲೂ ತಪ್ಪೆ ಆದರೆ ಅದಕ್ಕೆ ಹಿರಿಯರು ಆದ ಅಮ್ಮಣ್ಣಿಯಮ್ಮ ಚಂದುವಿಗೆ ಕರೆದು ತಿಳಿಹೇಳಿ ತಿದ್ದಿಕೊಳ್ಳಲು ಅವಕಾಶ ನೀಡಬೇಕಾಗಿತ್ತು. ಆದರೆ ಆ ಬ್ರಾಹ್ಮಣ್ತಿಯು ಅಂತಹ ಕೆಲಸಕ್ಕೆ ಕೈ ಯಾಕದೆ ತನ್ನ ಹೊರಟು ತನದ ಬುದ್ಧಿಯನ್ನು ತೋರಿಸಿ ತನ್ನ ಬಾಯನ್ನು ಹರಿ ಬಿಟ್ಟರು ಈ ಸನ್ನಿವೇಶವನ್ನು ನೋಡುತ್ತಿದ್ದಂತಹ ಕಿಟ್ಟುಬಟ್ಟರು ಒಂದು ಎಚ್ಚರಿಕೆಯ ಮಾತನ್ನು ಕೂಡ ಹೇಳುತ್ತಾರೆ 2" ಏನೆ ಅಮ್ಮಣ್ಣಿ ಸ್ತೋತ್ರಗೀತ್ರ ಓದಿದ ಬಾಯಲ್ಲಿ ಮುಂಡೆ ರಂಡೆ, ಗಳೆಲ್ಲಾ ಅದೇಗೆ ಹೊರಗೆ ಬರುತ್ತೆ ನಿಂಗೆ? ಸವರೆಂತಹ ಬಡವರಾದ್ರು ಹೀನಕುಸ್ತರಾದ್ರು ಸ್ವಾಭಿಮಾನ, ಆತ್ಮಗೌರವದಲ್ಲಿ ನಮಗಿಂತ ಅವರೇನು ಕಡಿಮೆ? ನಿಮ್ಮ ಮಡಿ ಮೈಲಿಗೆ ಬಗ್ಗೆ ಏನಾದ್ರು ಮಾಡಿಕೋ ಮಾತಾಡಿಕೋ ಆದ್ರೆ ಆ ಶೂದ್ರ ಮಕ್ಕಳನ್ನು ಬಾಯಿಗೆ ಬಂದ ಹಾಗೆ ಬೈದಾಡಿದರೆ ಒಂದಿನ ನಿಂಗವರು ಎದ್ದು ನಿಂತು ಮುಖಕ್ಕೆ ಉಗಿಯುತ್ತಾರಷ್ಟೆ ಮತ್ತೆ ನೀನು ಬದುಕುಳಿಬೇಕಾ ?"2 ಎಂದು ಹೀಗೆ ಗಂಡನ ಎಚ್ಚರಿಕೆಯ ಮಾತನ್ನು ಅಮ್ಮಣ್ಣಿಯಮ್ಮ ಪರಿಗಣಿಸುವುದಿಲ್ಲ.

ಅಂತಹ ಸಮಯದಲ್ಲಿ ಗಂಡನೆದುರೇ " ಗಂಜಿಕುಡಿಯುವವು ಗಗನಕ್ಕೆ ಹಾರುವುದೆಂದರೇನು?" ಎಂದು ಗೇಣಿಮಕ್ಕಳನ್ನು ನಿಂದಿಸಿದ ಪ್ರಕರಣವು ಹಲವಾರಿವೆ.

ಕಿಟ್ಟು ಬಟ್ಟರು ಸುಂಸ್ಕೃತರು, ತಿಳಿದವರು ವಯಸ್ಸಿನಲ್ಲಿ ಅನುಭವಸ್ತರು ಅವರು ಹೇಳಿದಂತೆ ಒಬ್ಬ ಮನುಷ್ಯನಲ್ಲಿ ಅವನ್ಯಾವ ಸ್ತರದಲ್ಲಿಯೇ ಇರಲಿ ಅವನಲ್ಲಿ ಸ್ವಾಭಿಮಾನ, ಆತ್ಮಗೌರವಗಳು, ಇದ್ದೇ ಇರುತ್ತವೆ ನಾವು ಎಷ್ಟೇ ದೊಡ್ಡವರಾದರೂ ಸರಿ ಅಂತಹ ವಿಷಯಗಳಿಗೆ ಘಾಸಿ ಮಾಡುವಂತಹ ಕೆಲಸಗಳಿಗೆ ಕೈಹಾಕಬಾರದು ಎಂದು ತಿಳಿದಿದ್ದಂತಹವರು ಹೀಗೆ ಮಾಡಿದರೆ ಎಂಥವರಾದರು ಸರಿ ತಿರುಗಿ ಬೀಳುತ್ತಾರೆ ಎಂಬ ಸತ್ಯವನ್ನು ಅರಿತಿದ್ದವರು ಕಿಟ್ಟುಭಟ್ಟರು.

ಈ ಘಟನೆ ನಂತರ ಚಂದು ನೇರವಾಗಿ ನಡೆದದ್ದು ತನ್ನ ಪ್ರಿಯಕರ ಮಂಜಪ್ಪನ ಹತ್ತಿರ ಇವರಿಬ್ಬರ ನಡುವಿನ ಪ್ರೀತಿ ಎಷ್ಟಿತ್ತೆಂದರೆ ಇಬ್ಬರೂ ಸಹ ವಯಸ್ಸಿಗೆ ಬರುವ ಹಂತದಲ್ಲಿಯೇ ಹುಟ್ಟಿಕೊಂಡಂತಹಾ ಪ್ರೀತಿ ಮೂರ್‍ನಾಲ್ಕು ವರ್ಷಗಳಲ್ಲಿಯೇ ಬೆಳೆದು ಹೆಮ್ಮರವಾಗಿತ್ತು.

ಈ ರೀತಿಯಾಗಿ ಬೇಜಾರಿನಿಂದ ಬರುವಂತಹ ಚಂದುವನ್ನು ಮಂಜುಪ್ಪ ಸಮಾಧಾನಪಡಿಸಿ ಆ ಕೊಳಕು ಬಾಯಿ ಬ್ರಾಹ್ಮಣ್ತಿಯು ನಮ್ಮ ಪ್ರೀತಿಯ ಮುಂದೆ ಏನು ಮಾಡಿಯಾಳು ಎಂದು ಸಮಾಧಾನಿಸುತ್ತಿದ್ದನು. ಅದೇ ರೀತಿ ಮಂಜಪ್ಪನಿಗೆ ಒಮ್ಮೆ ಆ ಬ್ರಾಹ್ಮಣ್ತಿಯಮ್ಮ ವ್ಯಂಗ್ಯವಾಗಿ ಅಂದಿರುತ್ತಾಳೆ. ಅದೇನೆಂದರೆ

3"ಕೊಳೆತ ಕುಂಬಳಕ್ಕೆ, ಕೆಟ್ಟ ತೆಂಗಿನ ಕಾಯಿ" ನಿನ್ನ ಅಟ್ಟೆಗಾಲಿಗೊಂದು ಹೊಟ್ಟೆ ಮಂಡೆಯ ಚಂದು ಅಲ್ಲ್ವೇನೋ"3 ಮಂಜಪ್ಪ ಎಂದು ವ್ಯಂಗ್ಯವಾಗಿ ಮಂಜಪ್ಪನನ್ನು ಮಾತಿನಿಂದಲೇ ತಿವಿದಿರುತ್ತಾರೆ. ಅನಂತರ ಏನಾ ಮಂಜಪ್ಪ ನಿಮ್ಮ ಶೆಟ್ರ ಹುಡುಗಿಯನ್ನ ಮದುವೆಯಾದ್ರ ಒಳ್ಳೆ ಗಂಟು ಸಿಗುತ್ತೆ ಜಾತಿ ಹುಡುಗಿನೂ ಸಿಗುತ್ತೆ, ಆ ಮೂಲ್ಕರ ಹುಡುಗಿ ಚಂದುವನ್ನು ಬೇಕಿದ್ರೆ ಇಟ್ಕೊಂಡ್ರೆ ಆಯ್ತು, ನಿಮ್ಮ ಜಾತಿಯಲ್ಲಿ ಎಲ್ಲರೂ ಹಾಗೆ ಮಾಡುವುದಲ್ವ? ನಿನ್ದೇನು ಹೆಚ್ಚು" ಎಂದಿರುವ ಮಾತುಗಳು ಮಂಜಪ್ಪನಿಗೆ ನೆನಪಿಗೆ ಬಂದು ತನ್ನ ಚಂದುವನ್ನು ಸಮಾಧಾನಪಡಿಸಿ ಮನೆಗೆ ಕಳುಹಿಸಿಕೊಡುತ್ತಾನೆ.

ನಾವು ಚರ್ಚೆ ಮಾಡಬೇಕಾದ್ದು ಇಲ್ಲೆ ಅದೇನಂದ್ರೆ ಬ್ರಾಹ್ಮಣರು ಮತ್ತು ಮೇಲ್ಜಾತಿಯವರು ಏನೇ ಮಾಡಿದರೂ ಸಹ ದಲಿತರು ಸಹಿಸಿಕೊಂಡಿರಬೇಕು ಎಂಬುದು ಇದರ ಭಾವನೆ ಇಲ್ಲಿ ಚಂದುವಿನ ಹಿಂದಿನ ತಲೆ ಮಾರಿನವರೆಲ್ಲಾ ಸಹಿಸಿಕೊಂಡಿರುತ್ತಾರೆ. ಆದರೆ ಚಂದುವಲ್ಲ, ತುಳುನಾಡಿನಲ್ಲಿ ಅಂದರೆ ಕರಾವಳಿ ಭಾಗದಲ್ಲಿ ದಲಿತರನ್ನು ಎಲ್ಲಾ ವರ್ಗಗಳಿಗಿಂತ ಕೀಳಾಗಿ ಕಾಣುತ್ತಾರೆ. ಅವರ ನಂತರ ಧಣಿಗಳು ಅಂದರೆ ಶೆಟ್ಟರು ಇವರಾದ ನಂತರ ಬ್ರಾಹ್ಮಣರು. ಈ ಬ್ರಾಹ್ಮಣ ಅನಾಧಿಕಾಲದಿಂದಲೂ ತಮ್ಮನ್ನು ತಾವು ಉತ್ತುಂಗದಲ್ಲಿಯೇ ಇರಿಸಿಕೊಂಡು ಬಂದವರು. ಈ ಪ್ರಸಂಗದಲ್ಲಿ ಹೇಳುವುದಾದರೆ ಅಮ್ಮಣ್ಣಿಯವರು ಈ ಶೆಟ್ಟರ ಹುಡುಗ ಮಂಜಪ್ಪನನ್ನು ಹೀಯಾಳಿಸುತ್ತಾರೆ. ಶೆಟ್ಟರು ತಮ್ಮ ಸ್ವಜಾತಿಯಲ್ಲಿಯೇ ತಮ್ಮ ಮದುವೆಯನ್ನು ಮಾಡಿಕೊಂಡು ಬೇಕಿದ್ದರೆ ದಲಿತರ ಹೆಣ್ಣುಗಳನ್ನು ಅನೈತಿಕ ಸಂಬಂಧದಲ್ಲಿ ಇಟ್ಟುಕೊಳ್ಳಬಹುದು ಎಂಬ ಭಾವನೆ ಹಲವರಲ್ಲಿ ಬೆಳೆದಿದೆ. ಮನುಷ್ಯ ತನ್ನ ಮನಸ್ಸಿನಲ್ಲಿರುವ ಜಾತಿ ಬೇಧ ಎನ್ನುವ ವಿಷ ಜಂತುವನ್ನು ಕಿತ್ತೆಸೆದರೆ ಆ ಅನೈತಿಕ ಸಂಬಂಧವು ನೈತಿಕ ಸಂಬಂಧವಾಗಿ ಪರಿವರ್ತನೆಯಾಗುತ್ತದೆ. ಅಂತಹ ಪ್ರೀತಿ ಈ ಮಂಜಪ್ಪ ಮತ್ತು ಚಂದುವಿನದು ಇದನ್ನು ಅರಿಯದ ಆ ಬ್ರಾಹ್ಮಣ್ತಿಯು ತನ್ನ ಬಾಯನ್ನು ಹರಿಬಿಟ್ಟು ಬಾಯಿಗೆ ಬಂದಂತೆ ಒದರುತ್ತಾಳೆ.

ಮಂಜಪ್ಪನ ಸಮಾಧಾನದ ಮಾತುಗಳನ್ನು ಕೇಳುತ್ತಾ ಚಂದು ಈ ಲೋಕದಲ್ಲಿ ತನ್ನ ಇರುವಿಕೆಯನ್ನೇ ಮರೆತು ಹೋಗುವಷ್ಟು ಪ್ರೀತಿ ಮಂಜಪ್ಪನಲ್ಲಿರುತ್ತದೆ. ಅವಳ ಮುಗ್ಧಪ್ರೀತಿ ಯಾವರೀತಿಯದ್ದೆಂದರೆ ಮಂಜಪ್ಪನ ಕಾಲಿನ ಬಗೆಗೆ ಯಾರಾದರೂ ಏನಾದರೂ ಅಟ್ಟಗಾಲು, ಸೊಟ್ಟಗಾಲು ಎಂದರೆ ಸಾಕು ಅಂತವರ ಚಳಿಬಿಡಿಸುತ್ತಿದ್ದಳು. ಚಂದು ಇದರ ಭಯ ಸ್ವತಃ ಚಂದುವಿನ ತಂದೆ ರುಕ್ಕನಿಗೂ ಇತ್ತು. ಅದರ ಅನುಭವವೂ ಕೂಡ ಒಮ್ಮೆ ಆಗಿತ್ತು. ಅಂತಹ ಪ್ರೀತಿ ಚಂದುವಿನದು ಇಂತಹ ಪ್ರೀತಿಯನ್ನು ಮಂಜಪ್ಪನ ತಾಯಿಯೂ ಕೂಡ ಗಂಭೀರವಾಗಿ ಪರಿಗಣಿಸಿರಲಿಲ್ಲ. ಒಳ್ಳೆಯ ದುಡ್ಡು ಕೊಡುವ ಹುಡುಗಿ ಸಿಕ್ಕರೆ ಇವನು ಸುಮ್ಮನೆ ಮದುವೆಯಾಗುತ್ತಾನೆ ಬಿಡು ಎನ್ನುವ ಉದಾಸೀನತೆ ಮಂಜಪ್ಪನ ತಾಯಿಯದು.

ಅಮ್ಮಣ್ಣಿಯಮ್ಮನವರ ಈ ಜಾತಿ ನಿಂದನೆ ಮಾತನ್ನು ಮತ್ತೊಂದು ಹೇಳುವುದಾದರೆ ರುಕ್ಕನ ಹೆಂಡತಿ ಕೇಮಣುವಿಗೆ ಹೆರಿಗೆಯಾಗಿ 38 ದಿನದ ನಂತರ ತಮ್ಮ ಹೆಂಡತಿಯ ಆಜ್ಞೆಯಂತೆ ರಕ್ಕಾ ಮಗುವಿನ ತೊಟ್ಟಿಲು ಹಾಕುವ ಶಾಸ್ತ್ರಕ್ಕೆ ದಿನ ಘಳಿಗೆ ಕೇಳಿಬರಲು ಹೋದಾಗ ಮತ್ತು ತನ್ನ ಆಸೆಯನ್ನು ರುಕ್ಕಾ ಕಿಟ್ಟುಬಟ್ಟರಲ್ಲಿ ಹೇಳಿಕೊಂಡಾಗ ಅದಕ್ಕೆ ಉತ್ತರ ಕೊಟ್ಟವರು ಅವರ ಹೆಂಡತಿ ಅಮ್ಮಣ್ಣಿಯಮ್ಮ ಅದೇಗೆ ಎಂದರೆ "ನಿಮ್ಮ ಜಾತಿಗೆ ಯಾವಾಗ ತೊಟ್ಟಿಲು ಹಾಕಿದ್ರೂ ನಡೆಯುತ್ತೆ ಮಾರಾಯ ಮಧು ಮಾಂಸ ತಿನ್ನುವ ಜಾತಿಗೆ ಘಳಿಗೆ ದಿನ,

ರಾಹುಕಾಲ, ಗುಳಿಕಕಾಲ, ಸಿಂಗೂಡೆ ವಿನಾದ್ರು ಬೇಕಾ?" ಎಂದು ವ್ಯಂಗ್ಯವಾಗಿ ಮೊದಲಿಸುತ್ತಾರೆ. ಅದಕ್ಕೆ ಕಿಟ್ಟುಬಟ್ಟರು ನನ್ನ ಪಂಚಾಂಗದ ಶುದ್ಧಿಗೆ ನೀನು ಬರಬೇಡ ಎಂದು ರೇಗಿ ಒಳಗಡೆ ಕಳಿಸುತ್ತಾರೆ ಆ ನಂತರ ಮಗುವಿಗೆ ಒಂದು ಹೆಸರು ರುಕ್ಕು ಕೇಳುತ್ತಾನೆ. ಅದಕ್ಕೆ ಚಂದ್ರಾವಳಿ ಎಂದು ಭಟ್ಟರು ಸೂಚಿಸಿದಾಗ ಅಮ್ಮಣ್ಣಿಯಮ್ಮ ತಮ್ಮ ಮಗಳ ಹೆಸರು ಆ ಮೂಲ್ಯನ ಮಗಳಿಗೆ ಇಡಬಾರದೆಂದು ಬರಿ ಚಂದು ಎಂದಷ್ಟೇ ಸೂಚಿಸುತ್ತಾರೆ.

ಇಲ್ಲೂ ಸಹ ಅಮ್ಮಣ್ಣಿಯವರ ಜಾತಿ, ಭೇದ, ದಲಿತರ ಮೇಲಿರುವಂತಹ ಶೋಷಣೆಯು ಎದ್ದು ಕಾಣುತ್ತದೆ. ಆದರೆ ಅಂತಹ ದೌರ್ಜನ್ಯ, ಶೋಷಣೆಯ ವಿರುದ್ಧ ಹೋರಾಡುವುದರಲ್ಲಿ ಅದನ್ನು ಧಿಕ್ಕರಿಸಿ ಮಾತನಾಡುವ ಧೈರ್ಯ ಕೂಡ ರುಕ್ಕನಿಗೆ ಇರಲಿಲ್ಲ. ರುಕ್ಕನ ತಲೆಮಾರು ಮತ್ತು ಹಿಂದಿನವರೂ ಕೂಡ ಇಂತಹ ಮೇಲ್ವರ್ಗದವರ ದಬ್ಬಾಳಿಕೆ, ದೌರ್ಜನ್ಯಕ್ಕೆ ಒಳಗಾದವರೇ ಅದನ್ನು ಎದುರಿಸುವಂತಹ ಧೈರ್ಯ ಯಾರಲ್ಲಿಯೂ ಕೂಡ ಇರಲಿಲ್ಲ. ಇಂತಹದನ್ನೇ ಬಂಡವಾಳ ಮಾಡಿಕೊಂಡಂತಹ ಮೇಲ್ವರ್ಗದವರು ಈ ದಲಿತರ ಮೇಲೆ ನಿರಂತರವಾಗಿ ಶೋಷಣೆ ದಬ್ಬಾಳಿಕೆಗಳನ್ನು ನಡೆಸುತ್ತಾ ಬಂದಿದ್ದಾರೆ.

ಆದರೆ ಇಂತಹವುಗಳನ್ನು ಸಹಿಸಿ ಕೊಳ್ಳುವಂತಹ ಹೆಣ್ಣಲ್ಲ ಚಂದು, ಆಕೆ ಎಷ್ಟು ಮೃದು ಸ್ವಭಾವದವಳೋ ಅಷ್ಟೇ ಜಗಳ ಗಂಟಿಯೂ ಕೂಡ ಹೌದು. ತನ್ನ ಮನಸ್ಸಿನ ಆಳಕ್ಕೆ ಯಾರಾದರೂ ನೋಯಿಸಿದರೆ ಸುಮ್ಮನೆ ಬಿಡುವವಳಲ್ಲ. ಅಂತಹುದರಲ್ಲಿ ತನ್ನ ಪ್ರಾಣಕ್ಕಿಂತ ಹೆಚ್ಚು ಎಂದು ಪ್ರೀತಿಸುವ ಮಂಜಪ್ಪನ ಬಗೆಗೆ ಮತ್ತು ತನ್ನ ಪ್ರೀತಿಯ ವಿಷಯವನ್ನು ರಸ್ತೆಯಲ್ಲಿ ಜೋರಾಗಿ ಕಿರುಚಾಡಿದಂತಹ ಯಾರ ಮೇಲೆಯೇ ಆದರೂ ಚಂದು ಸೇಡು ತೀರಿಸಿಕೊಳ್ಳುವ ಸಂದರ್ಭಕ್ಕಾಗಿ ಹಂಬಲಿಸುತ್ತಿದ್ದಳು.

ಆದರೆ ಮಂಜಪ್ಪನ ಸಮಾಧಾನದ ಮಾತುಗಳಿಂದ ಸಮಾಧಾನಗೊಂಡಂತಹ ಚಂದು. ಅವೆಲ್ಲವನ್ನೂ ಮರೆತು ಮರುದಿನ ತನ್ನ ದಿನಚರಿಯಂತೆ ತನ್ನ ಮನೆಯ ಕೆಲಸಗಳನ್ನು ಮಾಡಿ ಮುಗಿಸಿ ಕಂಕುಳಲ್ಲಿ ಕಸಬರಿಕೆ ಸಿಕ್ಕಿ ಹಾಕಿಕೊಂಡು ನೇರ ಕಿಟ್ಟು ಭಟ್ಟರ ಮನೆಯ ದಾರಿಯ ಹಿಡಿಯುತ್ತಾಳೆ ಅದಾಗಲೇ ಅಮ್ಮಣ್ಣಿಯಮ್ಮನವರು ತನ್ನ ಮಡಿಕೆರೆಯಲ್ಲಿ ಸ್ನಾನಮುಗಿಸಿ ಅಂಗಳದಲ್ಲಿ ಬಂದಿರುತ್ತಾರೆ. ಅವರು ನನ್ನ ಬಿಡಿಸಿರುವಂಥ ಚಿತ್ತಾರದ ರಂಗೋಲಿ ಚಂದುವನ್ನು ಸ್ವಾಗತಿಸುತ್ತಿತ್ತು ಚಂದು ಆ ರಂಗೋಲಿಯನ್ನು ಅದರ ಚಿತ್ತಾರಗಳನ್ನು ತುಳಸಿಕಟ್ಟೆಯ ಪಕ್ಕದಲ್ಲಿ ನಿಂತು ನೋಡುತ್ತಿದ್ದಾಳೆ. ಅದನ್ನು ಗಮನಿಸಿದಂತಹ ಅಮ್ಮಣ್ಣಿಯವರು ರೋಷ, ಸಿಟ್ಟುಗಳನ್ನು ತುಂಬಿಕೊಂಡರು. ಏಕೆಂದರೆ ನೆನ್ನೆ ನಾನು ಕೂಗುತ್ತಿದ್ದರು ತಿರುಗಿ ನೋಡದಂತೆ ಹೋದವಳು ಇವಳೇ ಎಂದು ಅಂದುಕೊಂಡರು. ಚಂದುವು ನೋಡುತ್ತಿದ್ದ ರಂಗೋಲಿಯನ್ನು ಅಮ್ಮಣ್ಣಿಯವರು ಬಂದು ತನ್ನ ಕಾಲಿನಿಂದ ಅದನ್ನು ಅಳಿಸಿ ಹಾಕುತ್ತಾರೆ. ಜೊತೆಗೆ ಎಂತಾ ಬೋಳಿ ಮುಂಡೆ ! ನಿನ್ನ ಮಿಂಡನ ಕಾಲನ್ನು ಹೀಗೆ ಬಗ್ಗಿ ಬಗ್ಗಿ ನೋಡುತ್ತಿದೀ". ಎಂದು ಕೇಳುತ್ತಾರೆ. ಈ ಮಾತುಗಳನ್ನು ಕೇಳಿದ ಚಂದು ರಣಚಂಡಿಯಂತಾದಳು ಏಕೆಂದರೆ ಅವರು ಮಂಜಪ್ಪನ ಕಾಲುಗಳ ಬಗೆಗೆ ಮಿಂಡನ ಕಾಲು" ಎಂದು ಜರಿದಿದ್ದರು ಅದನ್ನು ಸಹಿಸಿ ಕೊಳ್ಳಲಾಗದ ಚಂದು ಈ ಅಮ್ಮಣ್ಣಿಯವರು ತನಗೆ ನೆನ್ನೆ ಬೈದಿದ್ದ ಬೈಗಳುಗಳನ್ನು ನೆನಪಿಸಿಕೊಂಡು ಇಂದಿನ ಮಾತುಗಳನ್ನು ಕೇಳಿ "ತನ್ನ ಮಂಜಪ್ಪನ ಕಾಲುಗಳನ್ನು ಅಣಿಕಿಸ್ತಿದ್ದಾಳೆ ! ಅದೂ ಮಿಂಡನ ಕಾಲೆಂದು ಕೊಂಡವಳು ಚಂದು ತನ್ನಲ್ಲಿ ಅಡಗಿದ್ದಂತಹ ಸಿಟ್ಟು, ಧೈರ್ಯವನ್ನೆಲ್ಲಾ ತನ್ನ ಕಂಕುಳಲಲ್ಲಿದ್ದಂತಹ ಕಸಬರಿಕೆಗೆ ಕೊಡುತ್ತಾಳೆ. ಆ ಅಮ್ಮಣ್ಣಿಯಮ್ಮನ

ತಲೆ ಜುಟ್ಟುಗಳನ್ನು ಹಿಡಿದು "ಏನೇ ಬ್ರಾಹ್ಮಣ್ತಿ ! ನನ್ನ ಮಿಂಡನ ಕಾಲು" ಅಂತೀಯ ಮುಂಡೆ " ಎಂದು ಹೇಳುತ್ತಾ ಕೈಯಲ್ಲಿದ್ದಂತಹ ಪರಿಕೆಯಲ್ಲಿ ಆ ಬ್ರಾಹ್ಮಣ್ತಿಗೆ ತಿರುಗಿಸಿ ಬಾರಿಸುತ್ತಾಳೆ. ಅದನ್ನು ನೋಡುತ್ತಿದ್ದಂತಹ ಕಿಟ್ಟುಬಟ್ಟರು ಅಸಾಹಯಕರಂತೆ ನಿಂತಿದ್ದರು ನಂತರ ಅಮ್ಮಣ್ಣಿಯಮ್ಮ ಬೈದರೆ ಅದಕ್ಕೆ ಚಂಉ ಬಾಯ್‌ಮುಚ್ಚು ಇಲ್ಲದಿದ್ದರೆ ಕಾಲಮೆಟ್ಟಲ್ಲಿ ಹೊಡೆದುಬಿಟ್ಟೇನು ಎನ್ನುತ್ತಾ ಓಣಿಯ ಕಡೆಗೆ ಓಡುತ್ತಾಳೆ. ಇದನ್ನು ಕಿಟ್ಟುಬಟ್ಟರು ದಿಗ್ಭ್ರಾಂತರಂತಾಗಿ ನೋಡುತ್ತಾ ನಿಲ್ಲತ್ತಾರೆ.

ಇದು ಶೋಷಣೆಗೆ ಒಳಗಾದವರು ತಮ್ಮ ತಾಳ್ಮೆಯನ್ನು ಕಳೆದು ಕೊಂಡಾಗ ನಾವುಕಮ್ಮಿ ಇಲ್ಲ ಎಂದು ತಿರುಗಿ ಬೀಳುವಂತಹ ಸನ್ನಿವೇಶ ಅಂದರೆ ಈ ಮೊದಲೇ ಕಿಟ್ಟುಬಟ್ಟರು ಹೇಳಿದಂತೆ ಎಂಥ ಹೀನ ಕುಲದವರೇ ಆದರೂ ಸಹ ತನ್ನ ಸ್ವಾಭಿಮಾನ ಮತ್ತು ಆತ್ಮಗೌರವಕ್ಕೆ ಧಕ್ಕೆ ಬರುತ್ತದೆ ಎಂದು ತಿಳಿದಾಗ ಅವರು ಅಂತಹ ದೌರ್ಜನ್ಯ ಶೋಷಣೆಯನ್ನು ಮತ್ತು ದಬ್ಬಾಳಿಕೆಗಳನ್ನು ಪ್ರತಿರೋಧಿಸುತ್ತಾರೆ. ಈ ಕತೆಯಲ್ಲಿ ಹಲವಾರು ಗಂಭೀರ ವಿಷಯಗಳು ಚರ್ಚೆಗೆ ಬರುತ್ತವೆ. ಅಂದರೆ ದಲಿತರನ್ನು ಮೇಲ್ಜಾತಿಯವರು ಹಳ್ಳಿಗಳಲ್ಲಿ ಕೇವಲ ಇಟ್ಟಿಕೊಳ್ಳಬಹುದು, ಆದರೆ ಕಟ್ಟಿಕೊಳ್ಳಲಾಗದು ಎಂಬುದು ಅನೈತಿಕ ಸಂಬಂಧವಾಗಲಿ ಅಥವಾ ನೈತಿಕ ಸಂಬಂಧವಾಗಲಿ ಅದು ಪರಸ್ಪರರ ನಡುವೆ ನಡೆಯುವ ಸಂಬಂಧ ಅದು ಪರಸ್ಪರರ ಒಪ್ಪಿಗೆಯ ಮೇರೆಗೆ ನಡೆಯುತ್ತದೆ. ಅಲ್ಲಿ ಮನಸ್ಸುಗಳು ಬೆರೆದಿರುತ್ತವೆ ಅಂತಹ ಮನಸ್ಸುಗಳನ್ನು ಮೇಲು ಕೀಳು ಎಂಬ ಜಾತಿಯು ಬಂದು ಅವರನ್ನು ಬೇರ್ಪಡಿಸುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಕರಾವಳಿ ಭಾಗವು ಆಧುನೀಕರಣ, ಕೈಗಾರೀಕರಣ, ನಗರೀಕರಣಕ್ಕೆ ಪರಿವರ್ತನೆ ಹೊಂದಿರುವುದರಿಂದ ಇಂತಹ ಜಾತಿ ವ್ಯವಸ್ಥೆಯು ಕೊಂಚ ಕಡಿಮೆಯಾಗಿದೆ ಎಂದು ಭಾವಿಸಬಹುದು.

ಮತ್ತೊಂದು ವಿಷಯವೆಂದರೆ ದಲಿತರು ಎಂದು ಕರೆಯಿಸಿಕೊಳ್ಳುವವರೂ ಕೂಡ ಆತ್ಮಗೌರವ, ಸ್ವಾಭಿಮಾನಗಳು ಇರುತ್ತವೆ ಎಂಬುದನ್ನು ಚಂದುವು ಇಲ್ಲಿ ತೋರಿಸಿಕೊಟ್ಟಿದ್ದಾಳೆ. ಹುಟ್ಟಿದ ಪ್ರತಿಯೊಬ್ಬರಿಗೂ ಕೂಡ ತನ್ನದೇ ಆದ ಸ್ವಾಭಿಮಾನ ಮತ್ತು ಆತ್ಮಗೌರವಗಳಿರುತ್ತವೆ. ಅದನ್ನು ಯಾರೂ ಕೂಡ ಅವಮಾನಿಸಿಬಾರದು. ಅಂತಹುದರಲ್ಲಿ ದಲಿತರು ತಿರುಗಿಬಿದ್ದು ಅದನ್ನು ಪ್ರತಿಭಟಿಸುವುದು ಹೆಚ್ಚಾಗಬೇಕು. ಇಂತಹವರಿಗೆ ಚಂದು ಮಾದರಿಯಾಗಿದ್ದಾಳೆ ಅವಳು ಕಸಬರಿಕೆಯಲ್ಲಿ ಹೊಡೆದದ್ದು ಮಾತ್ರವಲ್ಲ. ಮುಂದೆ ಮಾತನಾಡಿದರೆ ಚಪ್ಪಲಿಯಲ್ಲಿ ಹೊಡೆಯುತ್ತೇನೆ ಎಂದು ಎಚ್ಚರಿಕೆಯನ್ನು ನೀಡುವುದು ಅದು ಒಂದು ಸಮುದಾಯವೇ ಎಚ್ಚರಿಕೆ ಕೊಟ್ಟಂತಹುದು. ಚಂದು ಸಾಂಕೇತಿಕವಾಗಿದ್ದಾಳೆ.

ಲೇಖಕಿಯು ಈ ಕಥೆಯ ನಿರೂಪಣೆಯನ್ನು ಬಹಳ ಅದ್ಭುತವಾಗಿ ನಿರ್ವಹಿಸಿದ್ದಾರೆ. ಕಥೆಯು ಸುರುವಾಗುವುದೇ ಚಂದುವಿನ ರೋಷ ಕಿಚ್ಚಿನಿಂದ, ಕೊನೆಗೆ ಕತೆಯು ಮುಕ್ತಾಯವಾಗುವುದು ಕೂಡ ಅದೇ ಚಂದುವಿನ ರೋಷ ಕಿಚ್ಚುಗಳಿಂದ ಎನ್ನಬಹುದು. ಕಥೆಯ ಮಧ್ಯಂತರವನ್ನೇ ಮೊದಲಿಗೆ ಹೇಳಿ ಅನಂತರ ಮಧ್ಯಭಾಗದಲ್ಲಿ ಪೂರ್ವಕಥೆಯನ್ನ ಹೇಳಿ ನಂತರ ಕೊನೆಗೆ ಬರುವಂತಹ ಚತುರತೆಯಲ್ಲಿ ಕಥೆಗಾರ್ತಿಯು ಯಶಸ್ವಿಯಾಗಿದ್ದಾರೆ. ಈ ಕಥೆಯ ನಿರೂಪಣ ಶೈಲಿಯ ವಿಶಿಷ್ಟತೆ ಎಂದರೆ ಬ್ರಾಹ್ಮಣರ ಬಾಯಲ್ಲಿ ಬರುವ ಬೈಗುಳ ಅವರ ಬುದ್ಧಿ ಹೀನತೆಯನ್ನು ಎತ್ತಿಹೇಳಿದೆ ಅವರ ಆಲೋಚನಾ ರೀತಿಯನ್ನು ತಿಳಿಸಿದೆ, ಸ್ವಾಭಿಮಾನ ವ್ಯಕ್ತಿಯನ್ನು ವ್ಯವಸ್ಥೆಯ

ವಿರುದ್ಧ ಬಂಡೇಳುವ ರೀತಿಯನ್ನು ಚಂದುಪಿನಂತಹ ಸಾಮಾನ್ಯ ಹೆಣ್ಣಿನ ಪಾತ್ರದ ಮೂಲಕ ಚಿತ್ರಿಸಿರುವ ರೀತಿ ಚೆನ್ನಾಗಿದೆ. ಹೆಣ್ಣೊಬ್ಬಳು ಸಾಕು ವ್ಯವಸ್ಥೆಯನ್ನು ಧಿಕ್ಕರಿಸಲು ಎಂಬುದು ಸಾಕ್ಷಿಯಾಗಿದೆ.

ಪಂಜುರ್ಲಿ ಗರ್ಭಪಾತ

ಮುಂದೆ ಪಂಜುರ್ಲಿ ಮತ್ತು ಗರ್ಭಪಾತ ಎನ್ನುವಂತಹ ಕಥೆಯನ್ನು ನೋಡುವುದಾದರೆ ಇವೆರಡಕ್ಕೂ ಕೂಡ ನಿಜವಾದ ಸಂಬಂಧವಿದೆ ಎನಿಸುತ್ತದೆ. ಮಂಜಪ್ಪ ಶೆಟ್ಟರು ತನ್ನ ಮನಸ್ಸನ್ನು ವಿಕ್ಷುಬ್ಧಗೊಳಿಸಿಕೊಂಡು ಭರಿ ಯೋಚನೆಯಲ್ಲಿ ಕುಳಿತಿದ್ದರು. ಅವರು ಆ ರೀತಿಯಲ್ಲಿ ಕುಳಿತಿರುವುದನ್ನು ಕುತೂಹಲದಿಂದ ನೋಡಿದವನು ಅವನ ಸ್ನೇಹಿತ ಉಸ್ಮಾನ್ ಬ್ಯಾರಿ ಇವನು ಗೂಡಂಗಡಿಯ ಮಾಲೀಕ ಪ್ರತೀದಿನವು ಶೆಟ್ಟರು ಮತ್ತು ಈ ಉಸ್ಮಾನರು ಹರಟೆ ಹೊಡೆಯುವುದು ವಾಡಿಕೆ, ಅಂತಹ ಹರಟೆಯಲ್ಲಿ ಕೆಲವು ಸಾರಿ ಗಂಭೀರ ವಿಚಾರಗಳನ್ನು ಚರ್ಚಿಸಿದ್ದಿದೆ. ಅದೇ ರೀತಿ ತಮ್ಮ ಜಾತಿ ಹಾಗೂ ಧರ್ಮದ ವಿಷಯಗಳ ಬಗೆಗೂ ಕೂಡ ಇಬ್ಬರು ತಮ್ಮ ತಮ್ಮ ವಾದ ಪ್ರತಿವಾದಗಳನ್ನು ಮಂಡಿಸಿಕೊಂಡು ಸ್ವತಃ ಅವರೇ ಸಮಾಧಾನಗೊಂಡಂತವರು.

ಆದರೆ ಶೆಟ್ಟರ ಈ ಇಂದಿನ ಮೌನದ ಬಗೆಗೆ ಉಸ್ಮಾನನಲ್ಲಿ ಹಲವು ರೀತಿಯ ಯೋಚನೆಗಳು ಬರುತ್ತವೆ ಶೆಟ್ಟರ ಮಗಳು ಸೋಣಕ್ಕ ಇವಳಿಗೆ ನಾಲ್ಕನೇ ಬಾರಿ ಗರ್ಭಪಾತವಾದಾಗ ಉಸ್ಮಾನನು ಶೆಟ್ಟರಿಗೆ ಒಂದು ಮಾತು ಹೇಳಿರುತ್ತಾನೆ. ನಿಮ್ಮ ಪಂಜುರ್ಲಿಯಲ್ಲಿ ಹಲವು ಹರಕೆ ಹೊತ್ತರೂ ಈಗ ಗರ್ಭಪಾತವಾಗಿದೆ ಒಮ್ಮೆ ನಮ್ಮ ದರ್ಗಕ್ಕೆ ಒಂದು ಹರಕೆ ಇಡಿ ಎಂದು ಕೇಳಿಕೊಂಡಾಗ ಶೆಟ್ಟರು ನಿರಾಕರಿಸುತ್ತಾರೆ. ಇಲ್ಲಿ ಯೋಚಿಸಬೇಕಾದ್ದು ಶೆಟ್ಟರಿಗೆ ತಮ್ಮ ಧರ್ಮದ ದೈವವನ್ನು ಬಿಟ್ಟು ನಂಬಿಕೆ ಇಲ್ಲದೆ ಬೇರೆ ಧರ್ಮದ ದೇವರಲ್ಲಿ ಹರಕೆ ಇಡುವುದು ಮನಸ್ಸಿಗೆ ಇಷ್ಟವಿರಲಿಲ್ಲ. ಆ ರೀತಿ ಮಾಡಿದ್ದಿದ್ದರೆ ಉಸ್ಮಾನನೆದುರು ಶೆಟ್ಟರು ಮುಜುಗರವನ್ನು ಎದುರಿಸಬೇಕಿತ್ತು. ಏಕೆಂದರೆ ಅವರು ಕೆಲವೊಂದು ಬಾರಿ ಜಾತಿ ಮತ್ತು ಧರ್ಮಗಳ ಬಗ್ಗೆಯೂ ಸಹ ತಮ್ಮ ಮಾತಿನ ಯುದ್ಧದಲ್ಲಿ ಸೆಣಸಾಡಿದ್ದರು, ಉಸ್ಮಾನನಿಗೆ ಶೆಟ್ಟರನ್ನು ಹೀಗಾದರೂ ಮುಜುಗರಕ್ಕೀಡು ಮಾಡಬೇಕೆಂಬ ಹಂಬಲ ಹಾಗಾಗಿ ಶೆಟ್ಟರು ನಿರಾಕರಿಸಿದರು.

ಶೆಟ್ಟರ ಯೋಚನೆಗೆ ಸುಳಿವು ಹುಡುಕಿದ್ದಂತಹ ಉಸ್ಮಾನನಿಗೆ ಮತ್ತೆ ಸೋಣಕ್ಕನಿಗೆ ಏನಾದರೂ ಐದನೇ ಬಾರಿ ಗರ್ಭಪಾತವಾಯಿತೇ ಎಂದು ಯೋಚಿಸುವಾಗಲೇ ಸೋಣಕ್ಕನ ಗಂಡ ವಿಶ್ವನಾಥ ಉಸ್ಮಾನನ ಎದುರಿಗೆ ಕಂಡಾಗ ಅವರನ್ನು ಭಯದಿಂದ ಕರೆದು ಅವನಿಗೆ ಒಂದು ಸಿಗರೇಟಿನ ಅಂಗಿನೊಳಗೆ ಸಿಲುಕಿಸಿ ಶೆಟ್ಟರ ಯೋಚನೆಗೆ ಕಾರಣವನ್ನು ತಿಳಿದುಕೊಳ್ಳುತ್ತಾನೆ ಉಸ್ಮಾನಬ್ಯಾರಿ.

ವಿಶ್ವನಾಥ ಇವನು ನೀತಿ ನಿಯಮಗಳಿಲ್ಲದಂತಹ ಜೀವನವನ್ನು ನಡೆಸುವಂತಹ ಕ್ಷುದ್ರ ಮನಸ್ಸಿನವನು ಅಂದರೆ ಅವನು ತನ್ನ ಜಾತಿ ಅಂತಸ್ತಿಗೆ ತಕ್ಕಂತೆ ಜೀವನ ನಡೆಸುತ್ತಿದ್ದವನಲ್ಲ. ದಿನವೂ ಶರಾಬೂ ಕುಡಿದು ಬೀಡಿ ಸಿಗರೇಟು ಸೇದುತ್ತಾ ಕಳ್ಳತನ ಮೋಸಗಳಂತಹ ಅಪರಾದ ಕೃತ್ಯಗಳಲ್ಲಿಯೂ ತನ್ನನ್ನು ತಾನು ತೊಡಗಿಸಿಕೊಂಡಿದ್ದನು. ಶೆಟ್ಟರು ತನ್ನ ಮಗಳು ಸೋಣಕ್ಕನನ್ನು ತನ್ನ ತಂಗಿಯ ಮಗ ವಿಶ್ವನಾಥನಿಗೆ ಮದುವೆ ಮಾಡಿಕೊಟ್ಟಿದ್ದರು. ಇವನು ಇಂಥ

ವ್ಯಕ್ತಿ ಅಂತ ಮಂಜಪ್ಪ ಶೆಟ್ಟರಿಗೆ ತಿಳಿದಿದ್ದರೂ ಕೂಡ ಅವರು ತನ್ನ ತಂಗಿಗೆಕೊಟ್ಟ ಮಾತಿನಂತೆ ವಿಶ್ವನಾಥನನ್ನು ಅಳಿಯನನ್ನಾಗಿ ಮಾಡಿಕೊಂಡಿದ್ದರು. ಇದಕ್ಕೆ ನೆಂಟರಿಷ್ಟರಜೊತೆಗೆ ಊರಿನವರ ವಿರೋಧವೂ ಸಹ ಇತ್ತು.

ಇಂತಹ ವಿಶ್ವನಾಥನು ಹೆಂಡತಿಯಾದ ಸೋನಕ್ಕನ ಜೊತೆ ಉತ್ತಮ ಸಂಬಂಧವನ್ನೇನು ಇಟ್ಟುಕೊಂಡಿರಲಿಲ್ಲ ಅವಳ ಮೈಮೇಲಿದ್ದ 70 ತೋಲ ಬಂಗಾರವನ್ನು ಜೂಜಿನಲ್ಲಿ ಕಳೆದು ಅವಳನ್ನು ಒಡವೆಗಳಿಲ್ಲದೆ ಬರಿಕೈ ಮಾಡಿದ್ದ ನಂತರ ಅವಳು ಆತನ ಜೊತೆಗೆ ಮಾತನಾಡುವುದನ್ನೇ ನಿಲ್ಲಿಸಿಬಿಟ್ಟಳು ಇಂತಹ ನೀಚ ಕೃತ್ಯಗಳ ಬಗೆಗೆ ಅಪ್ಪನಿಗೆ ಹೇಳುತ್ತೇನೆ ಎಂದರೆ ನಾನು ಮನೆಬಿಟ್ಟು ಹೋಗ್ತೀನಿ ವಾಪಸ್ಸು ಬರುವುದಿಲ್ಲ ಎಂದು ಆ ಅಧರ್ಮಿ ವಿಶ್ವನಾಥ ಪುಣ್ಯಕ್ಷೇತ್ರವಾದಂತಹ ಧರ್ಮಕ್ಷೇತ್ರದ ಮೇಲೆ ಆಣೆ ಇಡುತ್ತಿದ್ದನು.

ಮಂಜಪ್ಪ ಶೆಟ್ಟರ ಈ ಮೌನಕ್ಕೆ ನಿಜವಾದ ಕಾರಣ ಈ ವಿಶ್ವನಾಥನೇ ಹೌದು ಏಕೆಂದರೆ ಪಂಜುರ್ಲಿ ದೈವದ ಬೆಳ್ಳಿಯ ಮೂರ್ತಿಯು ಕಳುವಾಗಿರುವ ವಿಚಾರ ನೆನ್ನೆ ಸೋನಕ್ಕನಿಗೆ ಗರ್ಭಪಾತ ವಿಚಾರ ಇದನ್ನು ಅರಿತು ಶೆಟ್ಟರು ಪಂಡಿತನಲ್ಲಿ ಅಂಜನ ಹಾಕಿಸಿದಾಗ ಅವರು ನೇರ ಕೈ ಮಾಡಿ ತೋರಿಸಿದ್ದು ಶೆಟ್ಟರ ಮನೆಯ ಬಡಗು ದಿಕ್ಕಿನಲ್ಲಿರುವ ಎರಡು ಮನೆಯವರು ಕದ್ದಿದ್ದಾರೆ ಎಂದು ಬಂದಾಗ ಅದನ್ನು ಪಂಜುರ್ಲಿಯ ಬಾಯಿಯಿಂದ ಇಡೀ ಊರಿನ ಜನರುಗಳಿಗೆ ಹೇಳಿಸಬೇಕು ಎಂದು ತಿಳಿಸಿದ ನಂತರ ವಿಶ್ವನಾಥ ಪಂಜುರ್ಲಿಯನ್ನು ಮೈಮೇಲೆ ಆವಾಹಿಸಿಕೊಳ್ಳುವ ಕೊರಗ ಪಂಡಿತನನ್ನು ಹೋಗಿ ಹೇಳಿಬರುತ್ತಿದ್ದೇನೆ ಎಂದು ವಿಶ್ವನಾಥ ಉಸ್ಮಾನನ ಹತ್ತಿರ ಹೇಳಿದಾಗ ಉಸ್ಮಾನನಿಗೆ ಇವತ್ತಿನ ಶೆಟ್ಟರ ಮೌನಕ್ಕೆ ನಿಜವಾದ ಕಾರಣ ತಿಳಿಯುತ್ತದೆ. ಆದರೆ ಉಸ್ಮಾನನು ಒಂದುಕ್ಷಣ ಯೋಚಿಸುತ್ತಾನೆ. ಪಂಜುರ್ಲಿಗೂ ಈ ಗರ್ಭಪಾತಕ್ಕೂ ಎಲ್ಲಿಯ ಸಂಬಂಧ ಎಂದು ಆಗ ಮತ್ತೊಂದು ವಿಷಯವನ್ನು ಯೋಚಿಸುತ್ತಾನೆ. ಸೋನಕ್ಕ ಐದನೇ ಬಾರಿಗೆ ಗರ್ಭದರಿಸುವಾಗ ಶೆಟ್ಟರು ನಮ್ಮ ದರ್ಗಕ್ಕೆ ಬಂದು ಹರಕೆ ಹೊತ್ತಿದ್ದರೆ ಈಗ ಈರೀತಿ ಗರ್ಭಪಾತವಾಗುತ್ತಿರಲಿಲ್ಲ ಎಂದು ಯೋಚಿಸಿದ.

ಇಲ್ಲಿ ಉಸ್ಮಾನನದು ಬ್ಯಾರಿ ಬುದ್ದಿ ಏಕೆಂದರೆ ಅವನು ಈ ಹಿಂದೂ ದೈವವಾದ ಪಂಜುರ್ಲಿಗೂ ಈ ಗರ್ಭಪಾತಕ್ಕೂ ಎಲ್ಲಿಯ ಸಂಬಂಧ ಎಂದುಕೊಂಡು ತಮ್ಮ ದೈವಕ್ಕೆ ಹರಕೆ ಹೊತ್ತಿದ್ದರೆ ಆ ಗರ್ಭಪಾತ ನಿಲ್ಲುತ್ತಿತ್ತು ಎಂದು ತಮ್ಮ ದೈವಕ್ಕೂ ಗರ್ಭಪಾತಕ್ಕೂ ಅವನು ಸಂಬಂಧ ಕಲ್ಪಿಸುತ್ತಾನೆ. ಇದನ್ನೇ ನೋಡಿ ಸ್ವಜನ ಪಕ್ಷಪಾತ ಎನ್ನುವುದು. ಉಸ್ಮಾನನು ಶೆಟ್ಟರ ಮೇಲಿರುವ ಪ್ರತಿಷ್ಠೆಗೋಸ್ಕರ ಈ ರೀತಿ ಬೇರೆ ಬೇರೆ ಧರ್ಮಗಳು ಮತ್ತು ದೈವಗಳನ್ನು ತಕ್ಕಡಿಗೆ ಹಾಕಿ ಅಳೆದು ತೂಗಿಬಿಡುತ್ತಾನೆ. ಹಾಗೆ ತೂಗಿದರೂ ಕೂಡ ತನ್ನ ದೇವರ ಮೇಲೆ ಬೇರೆ ದೇವರ ಕೆಳಗೆ ಎನ್ನುವಂತಹ ಮೋಸ ಉಸ್ಮಾನನ ಮನಸ್ಸು ಚಿಂತಿಸಿತ್ತು ಈ ರೀತಿ ಚಿಂತಿಸಲು ಮಂಜಪ್ಪ ಶೆಟ್ಟರೂ ಒಂದು ಕಡೆಯ ಕಾರಣ ಕರ್ತರು ಎನ್ನುವ ಮಾತನ್ನು ಅಲ್ಲೆಗಳಿಯುವಂತಿಲ್ಲ.

ಮಾರನೇ ದಿಸ ಬಂದೇ ಬಿಡುತ್ತದೆ. ಮಂಜಪ್ಪನ ಮನೆಯ ಹತ್ತಿರ ಜನಜಂಗುಳಿ ಸೇರಿದೆ ಕೊರಗ ಪಂಡಿತ ಪಂಜುರ್ಲಿಯನ್ನು ಆವಾಯಿಸಿಕೊಂಡು ಹಿಂದಿನ ದಿನ ವಿಶ್ವನಾಥ ಹೇಳಿಕೊಟ್ಟಿದ್ದನು. ಆ ಕೊರಗ ಪಂಡಿತ ಊರಜನರೆದುರು ಹೇಳಿಬಿಡುತ್ತಾನೆ. ಅದೇನೆಂದರೆ ಸೋನಕ್ಕನ ಗರ್ಭಪಾತಕ್ಕೆ ನಾನೇ ಕಾರಣ, ಆದರೆ ಆ ವಿಗ್ರಹವನ್ನು ಕದ್ದವರನ್ನು ಹೆಸರಿಸಲು ಹಿಂದೇಟು ಹಾಕಿದಾಗ ಡೋಲು ಬಾರಿಸುವ ಮೂಲ್ಯ ಮಾತನ್ನು

ಕೇಳಿದಾಗ ಅದು ಆ ಮನೆಯ ಉಪ್ಪಿನ ಋಣಭಾರ ಇರುವ ಹೀನಕುಲಸ್ಥ ಎಂದು ಮತು ಅದಕ್ಕೆ ಕುಮ್ಮಕ್ಕು ಕೊಟ್ಟವನು ಇದೇ ಮನೆಯ ಉಪ್ಪು ತಿಂದು ಮೋಸಮಾಡಿರುವವನು ಎಂದು ಹೇಳಿತು. ಊರ ಜನರುಗಳು ಆ ಹೆಸರುಗಳನ್ನು ಕಲ್ಪನೆ ಮಾಡಿಕೊಳ್ಳತೊಡಗಿದರು. ನಂತರ ಅವರಿಗೆ ಏನು ಶಿಕ್ಷೆ ಎಂದು ಶೆಟ್ಟರು ಪಂಜುರ್ಲಿಯಲ್ಲಿ ಕೇಳಿದಾಗ ಅವರಿಗೆ ಶಿಕ್ಷೆ ಒಂದು ವಾರದಲ್ಲಿ ನಾನೇ ನೀಡುತ್ತೇನೆ ಎಂದು ಹೇಳಿದಾಗ ಶೆಟ್ಟರು ನಿಟ್ಟುಸಿರುಬಿಡುತ್ತಾರೆ.

ಶೆಟ್ಟರು ಈ ರೀತಿ ನಿಟ್ಟುಸಿರುಬಿಡಲು ಕಾರಣ ವೆಂದರೆ ಅವರಿಗೆ ತನ್ನ ಅಳಿಯ ವಿಶ್ವನಾಥನಲ್ಲಿ ಅನುಮಾನವಿತ್ತು ನಿಜ ಹೇಳಬೇಕೆಂದರೆ ಅದನ್ನು ಕದ್ದವನು ನಿಜವಾಗಲೂ ವಿಶ್ವನಾಥನೇ ಆದರೆ ಆತ ಪಂಜುರ್ಲಿಯನ್ನು ಕರೆಯಲು ಹಿಂದಿನ ದಿನ ಹೋದಾಗ ಕೊರಗನಿಗೆ ಹಣಕೊಟ್ಟು ಶರಾಬು ಕುಡಿಸಿ ಅದನ್ನು ಬೇರೆ ರೀತಿ ಹೇಳುವಂತೆ ಹೇಳಿ ಬಂದಿರುತ್ತಾನೆ ಆದರೆ ಆ ಕಳ್ಳತನದ ಅಪವಾದವನ್ನು ಅಮಾಯಕರ ದಲಿತ ವ್ಯಕ್ತಿಗಳ ಮೇಲೆ ಹೊರಿಸಿದ ಕೀರ್ತಿ ಆ ಕೊರಗ ಪಂಡಿತನದ್ದು.

ಆ ದಲಿತ ವ್ಯಕ್ತಿಗಳ್ಯಾರೆಂದು ಊರಿನ ಜನಕ್ಕೆ ತಿಳಿದು ಹೋಗಿತ್ತು ಅವರು ದೆಯ್ಯು ಅದಕ್ಕೆ ಕುಮ್ಮಕ್ಕು ನೀಡಿದವನು ಮಂಕು ಪೂಜಾರಿ ಎಂದು ನಿರ್ಧರಿಸಿಕೊಂಡು ಬಿಟ್ಟದ್ದರು ಆದರೆ ಆ ವ್ಯಕ್ತಿ ದ್ಯೆಯ್ಯು ಮಾರನೇದಿನ ಆನೆಕೆರೆಯಲ್ಲಿ ಬಿದ್ದು ಪ್ರಾಣ ಬಿಟ್ಟಿದ್ದನು. ಆತ ತಾನು ಮಾಡದ ತಪ್ಪಿಗೆ ತನ್ನ ಪ್ರಾಣವನ್ನು ಬಿಡಬೇಕಾಗಿ ಬಂತು ಮಾನವೀಯತೆಯನ್ನು ಯಾವತ್ತೂ ಕಳೆದು ಸ್ವಾರ್ಥ ದುಷ್ಟತನ, ಅಪರಾಧಗಳನ್ನು ತುಂಬಿಕೊಂಡಿದ್ದಂತಹ ವಿಶ್ವನಾಥನ ಮನಸ್ಸು ಒಂದರೆಗಳಿಗೆ ನೆಮ್ಮದಿಯ ನಿಟ್ಟುಸಿರು ಬಿಟ್ಟಿತ್ತು ತದ ನಂತರದಲ್ಲಿ ತಾನು ಕದ್ದಿದಂತಹ ವಿಗ್ರಹವನ್ನು ನಾಳೆ ಜುಗಾರಿ ಕಟ್ಟೆಯಲ್ಲಿ ಒತ್ತೆಯಿಡುವ ಬಗ್ಗೆ ಯೋಚಿಸುತ್ತಿದ್ದ.

ತಾನು ಮಾಡದ ಅಪರಾಧ ತನ್ನ ಮೇಲೆ ಬಂದಿತು ಎಂದು ಅದನ್ನು ಬೇರೆಯವರ ಹತ್ತಿರ ಹೇಳಿಕೊಳ್ಳಲಾಗದೇ ದೈವವೇ ತನ್ನ ಮೇಲೆ ಕಳ್ಳತನದ ಆರೋಪವನ್ನು ಹೊರಿಸಿ ಅಪರಾಧಿಯನ್ನಾಗಿ ಮಾಡಬಿಟ್ಟಿದೆ. ಮತ್ಯಾರ ಹತ್ತಿರ ಹೇಳುವುದು ಎಂದು ದ್ಯೆಯ್ಯುವು ಚಿಂತಿಸಿ ಇನ್ನು ನಾನು ಊರಿನಲ್ಲಿ ತಲೆ ಎತ್ತಿತಿರುಗಾಡಲು ಸಾಧ್ಯವಿಲ್ಲ ನಾನು ಕದ್ದಿಲ್ಲ ಎಂದು ಹೇಳಿದರೆ ಯಾರೂ ಕೂಡ ನಂಬುವುದಿಲ್ಲ ಆದಲಿತನ ಮಾತಿಗೆ ಮನ್ನಣೆ ನೀಡುವವರು ಯಾರೂ ಇಲ್ಲ ಎಂದು ಗೊತ್ತಾದಾಗ ಆ ದ್ಯೆಯ್ಯು ನೇರ ಹಿಡಿದಿದ್ದು ಸಾವಿನ ದಾರಿ.

ಇತ್ತ ದ್ಯೆಯ್ಯುವಿವ ಸಾವಿನ ಸುದ್ದಿ ಮರುದಿನ ತಿಳಿಯುತ್ತಿದ್ದಂತೆ ಮಂಜಪ್ಪಶೆಟ್ಟರು ತನ್ನ ಹೆಂಡತಿಗೆ ಕೂಗಿ ಹೇಳಿದಾಗ ಆ ಮಾತಿಗೆ 4"ಪಂಜುರ್ಲಿಯ ಪಾಪೆ (ವಿಗ್ರಹ) ಕದ್ದವನಿಗೆ ಎಂದಾದರೂ ಬರ್ಕತ್ ಆದಿದ್ದಿದೆಯೇ?"4 ಎಂದು ವಿಶ್ವನಾಥನು ಉತ್ತರಿಸುತ್ತಾನೆ. ಒಟ್ಟಿನಲ್ಲಿ ವಿಶ್ವನಾಥನಿಗೆ ಅದೇ ಬೇಕಾಗಿತ್ತು ಅತ್ತ ದ್ಯೆಯ್ಯುವಿನ ಹೆಂಡತಿ ತಲೆ ಚೆಚ್ಚಿಕೊಳ್ಳುತ್ತಾ ಅಳುತ್ತಿರುವಾಗ ಮಾಂಕಾ ಪೂಜಾರಿ ಮತ್ತವನ ಹೆಂಡತಿ ಸಮಾಧಾನ ಮಾಡಲೆತ್ನಿಸಿ ಅದರಲ್ಲಿ ಸೋತು ನಿಲ್ಲುತ್ತಾರೆ. ಆದರೆ ಮಂಜಪ್ಪಶೆಟ್ಟರು ತನ್ನ ವಿಗ್ರಹ ಕಳ್ಳನಿಗೆ ಪಂಜುರ್ಲಿಯು ಇಷ್ಟು ಬೇಗ ಶಿಕ್ಷೆ ನೀಡಿದರ ಬಗೆಗೆ ಹೆಂಡತಿ ಹತ್ತಿರ ಪ್ರಶಂಸೆ ಪಡುತ್ತಿರುತ್ತಾರೆ ಆದರೆ ಸೋನಕ್ಕನ ಅಂತರಾಳದಲ್ಲಿ ಎಲ್ಲೋ ಒಂದು ಕಡೆ ನಿಜದ ಅರಿವಾಗಿದೆ ಎಂದು ನಮಗೆ ಅನಿಸುತ್ತದೆ ಏಕೆಂದರೆ ತನ್ನ ಗಂಡ ಎಂತಹ ಹೀನ ಬುದ್ಧಿಯವನು ಎಂದು ಸೋನಕ್ಕನಿಗೆ ತಿಳಿದಿರುತ್ತದೆ ಹಾಗಾಗಿ ಅವಳು ದ್ಯೆಯ್ಯುವಿನ ಸಾವಿಗೆ ಕಣ್ಣೀರು ಸುರಿಸುತ್ತಾಳೆ.

ಇಲ್ಲಿ ದಲಿತರು ಅಥವಾ ಹೀನಕುಲಸ್ಥರು ಎಂದರೆ ತಾವು ಮಾಡಿದ ಅಪರಾಧ ಮೋಸಗಳನ್ನು ಅವರ ಮೇಲೆ ಹೊರಿಸಿ ಈ ಮೇಲ್ವರ್ಗದವರು ನಿರಾಳರಾಗಿರಬಹುದು ಎಂದುಕೊಂಡಿದ್ದಾರೆ. 5"ದಲಿತರು ಹೀನ ಕುಲಸ್ಥರಿರ ಬಹುದು ಆದರೆ ಹೀನ ಬುದ್ಧಿಯವರಲ್ಲ"5 ಬೇರೆ ಜನರುಗಳ ಬಾಯಿಯಿಂದ ದೈಯ್ಯುವಿನ ಮೇಲೆ ಆರೋಪಮಾಡಿದ್ದರೆ ದೈಯ್ಯುವೂ ಕೂಡ ಅದನ್ನು ನಿರಾಕರಿಸುತ್ತಿದ್ದ ಏಕೆಂದರೆ ಅವನಿಗೂ ಆತ್ಮಗೌರವ ಮತ್ತು ಸ್ವಾಭಿಮಾನವಿರುತ್ತದೆ. ಆದರೆ ಈ ವಿಶ್ವನಾಥನಂತವರು ದೈಯ್ಯುವಿನ ಮೇಲೆ ಅಪರಾಧ ಹೊರಿಸಲು ಬಳಸಿಕೊಂಡ ಮಾರ್ಗ ಅದು ದೈವ.ದೈವದ ಬಯ ತೋರಿಸಿ ಕೆಳವರ್ಗದವರನ್ನು ಹೀಗೆ ಕೆಲ ಮೇಲ್ವರ್ಗದವರು ಶೋಷಣೆಗೆ ಒಳಪಡಿಸಿದ್ದಾರೆ. ಮೇಲ್ಜಾತಿಯವರೆಲ್ಲಾ ಕೆಟ್ಟವರು ಎಂದಲ್ಲಾ ಸುಖ ಸುಮ್ಮನೆ ದಲಿತರನ್ನು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಂಡು ಅವರ ಬಾಳನ್ನು ಬೀದಿಗೆ ತಳ್ಳುವುದು ಸರಿಯಲ್ಲ ಎಂದು ಸೋನಕ್ಕನವರು ಮರುಗುವುದನ್ನು ನಾವು ಇಲ್ಲಿ ಗಮನಿಸಬಹುದು ಬಹುಶಃ ನಿಜವಾದ ಸತ್ಯ ತಿಳಿದಿದ್ದರೆ ಮಂಜಪ್ಪ ಶೆಟ್ಟರೂ ಸಹ ಮರಗುತ್ತಿದ್ದರೇನೋ! ಅದು ಯಕ್ಷ ಪ್ರಶ್ನೆ ಈ ಒಂದು ಎಳೆಯನ್ನು ಇಟ್ಟುಕೊಂಡು ಕಥೆಗಾರ್ತಿಯು ಬಹಳ ಚೆನ್ನಾಗಿ ಒಂದು ಕಥೆಯನ್ನ ಹಲವು ತಿರುವುಗಳನ್ನು ನೀಡಿ ಹೆಣೆದಿರುವುದು ಮೆಚ್ಚುವಂತಹದ್ದು. ದೈವದ ಹೆಸರಿನಲ್ಲಿ ಕೆಳವರ್ಗದವರನ್ನು ಹಿಡಿದಿಡುವ ತಂತ್ರ-ಕುತಂತ್ರದ ನಿರೂಪಣೆ ಈ ಕಥೆಯದು, ಮುಗ್ಧತೆಯನ್ನು ಬಲಿ ಕೊಡುವ ಪೈಶಾಚಿ ಕಣ್ಕಟ್ಟು.

ಧಣಿಗಳ ಬೆಳ್ಳಿಲೋಟ

ಧಣಿಗಳ ಬೆಳ್ಳಿಲೋಟ ಈ ಕಥೆಯಲ್ಲಿ ಎರಡು ರಿತೀಯ ಸಂಘರ್ಷಗಳನ್ನು ನಾವು ಕಾಣಬಹುದು. ಮೊದಲನೆಯದು ಪ್ರಕೃತಿ ಮತ್ತು ಮನುಷ್ಯರ ನಡುವಿನ ಸಂಘರ್ಷವಾದರೆ ಎರಡನೆಯದು ಉಳ್ಳವರು ಮತ್ತು ಇಲ್ಲದವರ ನಡುವಿನ ಸಂಘರ್ಷ. ಈ ರೀತಿಯ ಸಂಘರ್ಷಗಳನ್ನು ನಡೆಸಲು ಪ್ರಕೃತಿಯ ಕಡೆಯಿಂದ ರಾಯಭಾರಿಯಾಗಿ ಆ ಶಾಂಭವಿ ಹೊಳೆಯು ಕಾಣಿಸಿಕೊಂಡರೆ ಮನುಷ್ಯರ ಕಡೆಯ ರಾಯಭಾರಿಯಾಗಿ ಧಣಿಗಳಂತಹ ವೆಂಕಪ್ಪಯ್ಯನವರು ಕಾಣಿಸಿಕೊಳ್ಳುತ್ತಾರೆ. ಇವರುಗಳು ನಡುವೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಂಘರ್ಷಗಳು ನಡೆಯುತ್ತಲೇ ಇರುತ್ತದೆ. ಮಳೆಗಾಲ ಬಂತೆಂದರೆ ಶಾಂಭವಿ ಹೊಳೆಯು ತನ್ನ ಯಾವ ಊರಿನ ಶಾನುಭೋಗನೆ ಬಂದು ಅಳೆದು ಸರ್ವೆ ಕಾರ್ಯ ಮಾಡುವುದಕ್ಕಿಂತ ಹೆಚ್ಚಿನ ರೀತಿಯಲ್ಲಿ ತನ್ನ ವ್ಯಾಪ್ತಿಯನ್ನು ಅದು ಅಳೆದುಕೊಂಡು ತೋರಿಸುತ್ತಿತ್ತು. ಅದೇ ರೀತಿ ತಾನೇನು ಕಡಿಮೆಯಿಲ್ಲಯೆಂಬಂತೆ ಈ ವೆಂಕಪ್ಪ ಧಣಿಗಳು ಬೇಸಿಗೆ ಕಾಲ ಬಂತೆಂದರೆ ತನ್ನ ತೋಟವನ್ನು ಹೊಳೆಯ ಒಡಲಿನ ತನಕ ಒತ್ತರಿಸಿಕೊಂಡು ನನ್ನ ಪರಿಧಿ ಇಲ್ಲಿಯವರೆಗಿದೆ ಎಂದು ಮಣ್ಣಿನಲ್ಲಿ ಗೋಡೆಯನ್ನು ನಿರ್ಮಿಸಿಕೊಳ್ಳತ್ತಿದ್ದನು.

ಈ ರೀತಿ ಒಂದೊಂದು ಕಾಲದಲ್ಲಿಯು ನಾನು ಮೇಲು ತಾನು ಮೇಲು ಎಂದು ತೋರಿಸಿಕೊಳ್ಳುತ್ತ ಒಂದು ರೀತಿಯ ಸಂಘರ್ಷವನ್ನು ಏರ್ಪಡಿಸಿಕೊಂಡಿದ್ದರು. ಅದೇ ರೀತಿ ಎರಡನೆಯದು ಉಳ್ಳವರು ಮತ್ತು ಇಲ್ಲದವರ ನಡುವಿನ ಸಂಘರ್ಷವೆಂದರೆ ಅದು ಧಣಿಗಳು ಮತ್ತು ಕುದುಪನ ಕುಟುಂಬದ ನಡುವಿನ ಸಂಘರ್ಷ. ಈ ಸಂಘರ್ಷವು ಕರಾವಳಿ ನಾಡಿನಲ್ಲಿ ದಲಿತರು ಅಥವಾ ಕೆಳವರ್ಗದವರು ಯಾವ ರೀತಿಯ ಶೋಷಣೆ,

ದೌರ್ಜನ್ಯಗಳನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಈ ಕಥೆಯಲ್ಲಿ ನಾಗವೇಣಿಯವರು ಬಹಳ ಸೊಗಸಾಗಿ ವರ್ಣಿಸಿಕೊಟ್ಟಿದ್ದಾರೆ. ಧಣಿಗಳು ಎಂದು ಕರೆಯಿಸಿಕೊಳ್ಳುವಂತಹ ಸಿರಿವಂತರು ಬಡವರು ಮತ್ತು ದಲಿತರನ್ನು ಇನ್ನಿಲ್ಲದಂತೆ ಶೋಷಣೆಗೆ ಗುರಿಪಡಿಸಿ ತಮ್ಮ ಜೀವನವನ್ನು ನಡೆಸುತ್ತಿರುತ್ತಾರೆ. ಇಂತಹವರ ಕಾಲು ತುಳಿತಕ್ಕೆ ತಮ್ಮ ಜೀವನವನ್ನೇ ಕೊಟ್ಟು ಅವಮಾನದ ಜೀವನವನ್ನು ನಡೆಸುವಂತಹ ದಲಿತರು ಅಥವಾ ಕೆಳವರ್ಗದ ಜನರುಗಳು ಅದರಲ್ಲಿಯು ಕುದುಪ ಮತ್ತು ಚೆನ್ನಮ್ಮನವರಂತಹವರು ತಮ್ಮ ಆತ್ಮ ಗೌರವಕ್ಕೆ ಧಕ್ಕೆ ಉಂಟಾದಾಗ ಅವರು ಶ್ರೀಮಂತರ ವಿರುಧ್ಧ ತಿರುಗಿ ಬೀಳುತ್ತಾರೆ. ಆದರೆ ಅವರಲ್ಲಿರುವ ರೋಷ ಕೆಚ್ಚುಗಳನ್ನು ನೇರವಾಗಿ ತಮ್ಮ ಮೇಲೆಯೇ ತೀರಿಸಿಕೊಳ್ಳುವುದಿದೆ ಮತ್ತು ಅದನ್ನು ಸಹಿಸಿಕೊಂಡು ಬಂದಂತಹ ಕಷ್ಟಗಳನ್ನು ಅನುಭವಿಸುತ್ತಾ ಜೀವನವನ್ನು ಸಾಗಿದುವುದಿದೆಯೆಲ್ಲ ಅದು ಎಂತಹವರ ಹೃದಯನ್ನೂ ಹಿಂಡುವುದು.

ಈ ಕಥೆಯಲ್ಲಿ ಕುದುಪನ ಕುಟುಂಬ ತಾವು ಮಾಡಿದೇ ಇರುವ ತಪ್ಪಿಗೆ ಶಿಕ್ಷೆಯನ್ನು ಅನುಭವಿಸುತ್ತಾ ಮುಂದೆ ಅದು ತಮ್ಮಿಂದ ಆದಂತಹ ತಪ್ಪಲ್ಲ ಎಂದು ತಿಳಿದರು ಸಹ ಅದನ್ನು ಧಿಕ್ಕರಿಸಿ ನಯವಾದ ರೀತಿಯಲ್ಲಿ ಧಣಿಗಳ ವಿರುದ್ಧ ತಿರುಗಿಬಿದ್ದು ಅವರು ಆ ಲೋಟವನ್ನು ವಾಪಸ್ಸು ಧಣಿಗಳಿಗೆ ನೀಡಿ ತಮ್ಮ ಜೀತದ ಶಿಕ್ಷೆಯಿಂದ ಪಾರಾಗಬಹುದಿತ್ತು, ಆದರೆ ಚೆನ್ನಮ್ಮ ಬಹಳ ಸ್ವಾಭಿಮಾನಿ ಆ ಲೋಟವನ್ನು ಹಿಂದಿರುಗಿಸಿದರೆ ಅವರ ಮೇಲಿದ್ದ ಅಪವಾದ ಹೋಗಿ ಅವಳ ವರ್ಷದ ದುಡಿಮೆಗೆ ಧಣಿಗಳಿಂದ ಪಡಿಯನ್ನು ಪಡೆಯಬಹುದಿತ್ತು. ಆದರೆ ಆ ಕಳೆದ ಒಂಭತ್ತು ತಿಂಗಳು ಈ ಕುಟುಂಬ ಅನುಭವಿಸಿದ ಯಾತನೆ, ನೋವಿಗೆ ಬೆಲೆ ಕಟ್ಟಲಾದೀತೇ... ಆ ನೋವಿನ ಋಣವನ್ನು ಧಣಿಗಳು ತೀರಿಸುತ್ತಾರೆಯೇ ಎಂಬುದನ್ನು ಚೆನ್ನಮ್ಮ ಯೋಚಿಸಿ ನಾನು ಅಂತಹ ಮಾನ ಮರ್ಯಾದೆ ಬಿಟ್ಟಂತಹ ಹೆಣ್ಣಲ್ಲ ಎಂಬುದನ್ನು ಆ ಲೋಟವನ್ನು ಮತ್ತೆ ಹೊಳೆಗೆ ವಾಪ್ಪಸ್ಸು ಎಸೆಯುವ ಮೂಲಕ ಚೆನ್ನಮ್ಮ ಪ್ರತಿಭಟಿಸುತ್ತಾಳೆ.

1" ಆ ಮಾನಗೇಡಿ ಹೊಳೆಗೆ ಒಂದಿಷ್ಟು ಉಗುರೆಡೆಯಲ್ಲಾದರೂ ನಾಚಿಕೆಯೆಂಬುದು ಇದ್ದಿದ್ದರೆ ತಟ್ಟನೆ ಇಂಗಿ ಹೋಗುತ್ತಿತ್ತು". ಎಂಬ ಇತ್ಯಾದಿ ಬೈಗುಳಗಳಿಂದ ಪ್ರಾರಂಭವಾಗುವಂತಹ ಈ ಕಥೆಯಲ್ಲಿ ಬರುವಂತಹ ಶಾಂಭವಿ ಹೊಳೆಯು ಕುದುಪನ ಕುಟುಂಬಕ್ಕೆ ಹಲವಾರು ರೀತಿಯ ಉಪಯೋಗಗಳನ್ನು ಮಾಡಿದೆ, ಅದೇ ರೀತಿ ಆ ಕುಟುಂಬದ ಮೇಲೆ ಕಳ್ಳತನದ ಅಪವಾದವನ್ನೂ ಸಹ ತಂದಿಟ್ಟಿದೆ. ಆ ಕುಟುಂಬಕ್ಕೆ ಮಳೆಗಾಲದಲ್ಲಿ ಅದು ಉಕ್ಕಿ ಹರಿಯುವಾಗ ಅಲ್ಲಿ – ಇಲ್ಲಿಂದ ಪಾತ್ರೆ – ಪಗೆಡೆ, ಸೌದೆ – ಕಟ್ಟಿಗೆ, ಕೋಳಿ – ಕುರಿ, ಏಣಿ – ದೋಣಿ, ರೀಪು – ಪುಕ್ಕಾಸು ಇತ್ಯಾದಿ ವಸ್ತುಗಳನ್ನು ತಂದು ಕುದುಪನ ಕೈಗೆ ಸೇರಿಸಿ ಸಣ್ಣಪುಟ್ಟ ಸಹಾಯವನ್ನು ಮಾಡುತ್ತಿತ್ತು ಮತ್ತು ಹಲವಾರು ಮೀನುಗಳನ್ನು ಅವನ ಗಾಳಕ್ಕೆ ಸಿಕ್ಕಿಸಿ ಇವರ ಆಹಾರದ ಕೊರತೆಯನ್ನು ನೀಗಿಸುತ್ತಿತ್ತು. ಈ ರೀತಿಯ ಎಲ್ಲಾ ಉಪಕಾರಗಳನ್ನು ಆ ಹೊಳೆ ಕುದುಪನ ಕುಟುಂಬಕ್ಕೆ ಮಾಡಿ ಸಾಕಾಗಿ ಸುಸ್ತಾದ ನಂತರ ಒಂದು ಕಷ್ಟವನ್ನು ತಂದೊಡ್ಡಿ ಅವರನ್ನು ಆ ಊರಿನಲ್ಲಿ ಅವಮಾನಕ್ಕೀಡುಮಾಡುತ್ತದೆ.

ಕರಾವಳಿಯ ಭಾಗದಲ್ಲಿ ದಲಿತರು ಮತ್ತು ಕೆಳವರ್ಗದ ಜನರುಗಳು ತಮ್ಮ ಪುಟ್ಟ ಪುಟ್ಟ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಅವರ ಪುಟ್ಟ ರೆಟ್ಟೆಗಳಿಗೆ ಶಕ್ತಿ ತುಂಬಿಕೊಳ್ಳುತ್ತಿದ್ದಂತೆ ಅವರನ್ನು ನೇರ ಜೀತಕ್ಕೆ ಕರೆದುಕೊಂಡು ಹೋಗಿ ಸೇರಿಸಿ ಅವರ ಬದುಕನ್ನೇ ಹಾಳು ಮಾಡುತ್ತಾರೆ. ಇದಕ್ಕೆ ಅವರಲ್ಲಿನ ಬಡತನವೇ ಮುಖ್ಯವಾದ

ಕಾರಣವಾದರೂ ಸಹ ಅಂತಹ ತಂದೆ ತಾಯಿಗಳೂ ಸಹ ಅನಕ್ಷರಸ್ಥರಾಗಿರುವುದು ಮತ್ತೊಂದು ರೀತಿಯಲ್ಲಿ ಕಾರಣವಾಗುತ್ತದೆ. ಇಂತಹ ಕಷ್ಟಕ್ಕೆ ಸಿಲುಕಿ ತನ್ನ ಜೀವನವನ್ನು ಹಾಳು ಮಾಡಿಕೊಂಡವರಲ್ಲಿ ಕುದುಪ ಮತ್ತು ಚಿನ್ನಮ್ಮರ ಮಗನಾದಂತಹ ಗುಡ್ಡ ಕೂಡ ಒಬ್ಬ. ಈ ಹುಡುಗ ತನ್ನ ತಂದೆ ತಾಯಿಯರಂತೆ ಧಣಿಗಳ ಮನೆಯಲ್ಲಿ ಮುಸುರೆ ತಿಕ್ಕುವಂತಹ ಕೆಲಸವನ್ನು ವಹಿಸಿಕೊಂಡಿದ್ದನು. ಈ ಕೆಲಸವನ್ನು ತನ್ನ ಹೆಗಲ ಮೇಲೆ ಹಾಕಿಕೊಂಡು ನಿಷ್ಠೆಯಿಂದ ಮಾಡುತ್ತಿದ್ದ, ತನ್ನ ಒಡತಿ ಕೊಡುವ ಮುಸುರೆ ಪಾತ್ರೆಗಳ ಲೆಕ್ಕವನ್ನು ಇವನು ಇಡುತ್ತಿರಲ್ಲಿಲ್ಲ ಹಾಗಾಗಿ ನೀರಿಗೆ ಬಿದ್ದಂತಹ ಪಾತ್ರೆ – ಪಗಡಿಗಳ ಲೆಕ್ಕ ಇವನಿಗೆ ತಲೆ ಕೆಡಿಸಿತ್ತು. ಹಿಂದಿನ ದಿನ ರಾತ್ರಿಯ ಹರಿಕಥೆಯನ್ನು ಮನದಲ್ಲಿ ಜಿನುಗಿಕೊಳ್ಳುತ್ತಿದ್ದ ಮಣ್ಣು ಜಾರಿ ಸಾಮಾನುಗಲ ಸಮೇತ ನೀರಿಗೆ ಜಾರಿ ಹೋದ ಮೇಲೆ ನೀರಿನಲ್ಲಿ ಹುಡುಕಿ ತನ್ನ ತಂದೆಯ ಸಹಾಯ ಬೇಡಲು ಹೋಗಿ ಕರೆತಂದು ತಂದೆಯಿಂದ ಬೈಸಿಕೊಂಡು ಆ ಬೆಳ್ಳಿಲೋಟವನ್ನು ಹೊರತುಪಡಿಸಿ ಉಳಿದೆಲ್ಲಾ ಸಾಮಾನುಗಳು ಸಿಕ್ಕ ನಂತರ ಅವುಗಳನ್ನು ತೆಗೆದುಕೊಂಡು ಹೋಗಿ ಧಣಿ ಪತ್ನಿಗೆ ನೀಡಿ ಆ ಬೆಳ್ಳಿ ಲೋಟದ ಬಗೆಗಿನ ಕಥೆಯನ್ನು ವಿವರಿಸಿದರೂ ಧಣಿಗಳು ಕೇಳದೆ ಈ ಕುಟುಂಬದ ಮೇಲೆ ಕಳ್ಳತನದ ಆರೋಪ ಹೊರಿಸಿ ಆ ಚಿಕ್ಕ ಹುಡುಗ ಗುಡ್ಡನಿಗೆ ಚಾಟಿಯಿಂದ ಹೊಡೆಯುವಾಗ ತಾಯಿ ಚಿನ್ನಮ್ಮ ತಾನು ಅದರ ಸಾಲವನ್ನು ಪಡಿಯಿಲ್ಲದೆ ದುಡಿದು ತೀರಿಸುವುದಾಗಿ ಒಪ್ಪಿಗೆ ಪಡೆಯುತ್ತಾಳೆ.

ಅಂದರೆ ನಾವು ಇಲ್ಲಿ ಚರ್ಚಿಸಬೇಕಾಗಿರುವ ಒಂದು ವಿಷಯವಿದೆ ಅದೇನೆಂದರೆ ಒಂದು ಬೆಳ್ಳಿ ಲೋಟದ ಬದಲಿಗೆ ಒಂದು ಹೆಣ್ಣು ಮೂರು ವರ್ಷಗಳ ಕಾಲ ದುಡಿಯಬೇಕು ಆ ದುಡಿತಕ್ಕೆ ಯಾವುದೇ ರೀತಿಯ ಪ್ರತಿಫಲಗಳನ್ನು ಪಡೆಯುವಂತಿಲ್ಲ ಎಂಬ ಕರಾರು. ಅಂದರೆ ಒಂದು ಬೆಳ್ಳಿ ಲೋಟ ಬಾಳುವ ಬೆಲೆಯನ್ನು ಆ ಕಾಲಕ್ಕೆ ತಕ್ಕಂತೆ ನಾವು ಲೆಕ್ಕಹಾಕುವುದಾದರೆ ಇನ್ನೂರು ರೂಪಾಯಿಯಿಂದ ಮುನ್ನೂರು ರೂಪಾಯಿಗಳು ಇರಬೇಕು ಎಂದು ಅಂದಾಜಿಸುವುದಾದರೆ ಆ ಹೆಣ್ಣು ಮಗಳ ಮೂರು ವರ್ಷದ ದುಡಿಮೆಗೆ ಕೇವಲ ಮುನ್ನೂರು ರೂಪಾಯಿಗಳು ನೀಡುವುದಾದರೆ ಆಕೆಯ ಒಂದು ದಿನದ ಕೂಲಿ ಎಷ್ಟಿರಬೇಕು ಎಂದು ಲೆಕ್ಕ ಹಾಕತೊಡಗಿದರೆ ಅದು ರೂಪಾಯಿಗಳಲ್ಲಿ ಬರುವಂತಹ ಲೆಕ್ಕವಲ್ಲ ಕೇವಲ ಪೈಸೆಗಳಲ್ಲಿ ಬರುವಂತಹ ದಿನಗೂಲಿ ಆಗುತ್ತದೆ. ಏನೂ ತಿಳಿ ಯದಂತಹ ಬಡವರಿಗೆ ಸರಿಯಾದ ಲೆಕ್ಕವು ಬರುವುದಿಲ್ಲ ಎಂಬ ಕಾರಣಕ್ಕೆ ಈ ರೀತಿಯಲ್ಲಿಯೂ ಆ ವೆಂಕಪ್ಪಶೆಟ್ಟರಂತಹ ಧಣಿಗಳು ಅಥವಾ ಒಡೆಯರು ಎಂದು ಕರೆಸಿಕೊಳ್ಳುವವರು ಈ ರೀತಿಯ ಅನ್ಯಾಯವನ್ನು ಮಾಡಬಹುದೇ?

ಮತ್ತೊಂದು ವಿಷಯವೆಂದರೆ ಒಕ್ಕಲು ಮಕ್ಕಳನ್ನು ಧಣಿಗಳು ಎಂದಿಗಾದರೂ ನಂಬಿದ್ದುಂಟೆ? ಎನ್ನುವ ಮಾತು ಬರುತ್ತದೆ ಅಂದರೆ ಬಡವರು ಅಥವಾ ನಿರ್ಗತಿಕರು ಎಂದರೆ ಸುಳ್ಳು, ಮೋಸ, ಕಳ್ಳತನ ಮಾಡುವಂತಹ ಜನಗಳು ಎಂದು ಈ ಧಣಿಗಳು ಅಥವಾ ಮೇಲ್ವರ್ಗದವರು ಯಾವ ಆಧಾರದ ಮೇಲೆ ನಿರ್ಧರಿಸಿಬಿಡುತ್ತಾರೆಯೊ ನನಗಂತೂ ತಿಳಿಯದು. ದಿನ ಬೆಳಗಾದರೆ ಕಷ್ಟಪಟ್ಟು ಮೈ ಮುರಿದು ದುಡಿಯುವಂತಹ ಜನರುಗಳಿಗೆ ಸುಳ್ಳು, ಮೋಸ, ಕಳ್ಳತನದ ಅರಿವಿರುವುದಿಲ್ಲ. ಅವರಿಗೆ ಇವುಗಳ ಅವಶ್ಯಕತೆಯೋ ಕೂಡ ಕಂಡು ಬರುವುದಿಲ್ಲ ಇವುಗಳನ್ನು ಅವರು ಕಲಿತಿದ್ದರೆ ನಿಜವಾಗಲೂ ಕಷ್ಟಪಡುತ್ತಿರಲ್ಲಿಲ್ಲ. ಯಾವತ್ತೂ ಕೂಡ ಕೂತು ತಿನ್ನುವ

ಸೋಮಾರಿಗಳ ಮನಸ್ಸಿನಲ್ಲಿ ಮತ್ತು ತಲೆಯಲ್ಲಿ ಈ ರೀತಿಯ ಸುಳ್ಳು, ಮೋಸ,ಕಳ್ಳತನಗಳಿಂದ ಜೀವನ ನಡೆಸಬಹುದೆಂಬ ಉಪಾಯ ಬರುತ್ತದೆ. ಅಂತವರು ಅವುಗಳನ್ನು ಆಚರಿಸುವುದು ಕೂಡ ಇರುತ್ತದೆ.

ಲೇಖಕಿಯವರು ಈ ಕಥೆಯನ್ನು ಬರೆದಂತಹ ಸಂದರ್ಭದಲ್ಲಿನ ಕರಾವಳಿಯ ಜನರ ಬದುಕೆ ಬೇರೆ ಈಗಿನ ಜನರ ಬದುಕೆ ಬೇರೆ, ಆ ಕಾಲದಲ್ಲಿ ದಲಿತರು ತಮ್ಮ ಜೀವನವನ್ನು ನಡೆಸಬೇಕಾದರೆ. ಅದು ಕೇವಲ ತಮ್ಮ ಧಣಿಗಳ ಮನೆಗಳಲ್ಲಿ ಜೀತವನ್ನು ಮಾಡುವುದು ಅನಿವಾರ್ಯವಾಗಿತ್ತು. ಇಂತಹ ಜೀತಕ್ಕೆ ಮಕ್ಕಳನ್ನು ನೂಕಿ ಬಿಟ್ಟರೆ ಅಂತಹ ಮಕ್ಕಳ ಜೀವಮಾನವೆಲ್ಲಾ ಧಣಿಗಳ ಮನೆಯಲ್ಲಿಯೇ ಜೀವ ಸವೆಸಬೇಕು. ಅದಕ್ಕೆ ಕಾರಣವೂ ಇದೆ. ಈ ಮುಂಚೆ ಹೇಳಿದ ಹಾಗೆ ಬಡತನ ಇಂತಹ ದಲಿತರು ಅಥವಾ ಕೆಳವರ್ಗದ ಜನರಗಳಿಗೆ ತಮ್ಮ ಸ್ವಂತದ ಜಮೀನು ಇರುವುದಿಲ್ಲ ಅವರು ಬೇರೆಯವರ ಜಮೀನಿನಲ್ಲಿ ಗೇಯುವ ಪರಿಸ್ಥಿತಿಯಿತ್ತು. ಕಾಲ ಬದಲಾದಂತೆ ಸರ್ಕಾರವು " ಉಳುವವನೇ ಭೂಮಿಯ ಒಡೆಯ " ಎನ್ನುವ ಕಾಯ್ದೆಯನ್ನು ಮತ್ತು "ಜೀತ ನಿರ್ಮೂಲನಾ ಕಾಯ್ದೆ" ಯನ್ನು ಜಾರಿಗೆ ತಂದ ನಂತರ ನಮ್ಮ ಭಾರತದ ಸಹಸ್ರಾರು ದಲಿತ ಮತ್ತು ಕೆಳ ವರ್ಗದ ಕುಟುಂಬಗಳು ಜೀತ ಪದ್ದತಿಯಿಂದ ಮುಕ್ತರಾಗಿ ಸ್ವತಂತ್ರ ಜೀವನವನ್ನು ನಡೆಸಿದವು ಮತ್ತು ಅವರುಗಳು ಉಳುಮೆ ಮಾಡಿ ಬೆಳೆ ತೆಗೆಯುತ್ತಿದ್ದಂತಹ ಜಮೀನುಗಳೆಲ್ಲಾವು ಸಹ ಅವರಿಗೆ ದಕ್ಕಿದವು, ಆಗ ಇಂತಹ ದಲಿತರ ಬದುಕು ಸ್ವಲ್ಪ ಸುಧಾರಿಸಿತು ನಂತರ ಎಲ್ಲಾ ವಲಯಗಳಲ್ಲಿಯೂ ಕೂಡ ಮೀಸಲಾತಿಗಳನ್ನು ಸರ್ಕಾರ ನೀಡುತ್ತಾ ಹೋದಂತೆಲ್ಲಾ ದಲಿತರ ಮತ್ತು ಕೆಳವರ್ಗದವರು ಬದುಕು ಒಂದು ಸಮತೋಲನದ ಮಟ್ಟಕ್ಕೆ ಬಂದು ತಲುಪಲು ಸಾಧ್ಯವಾಯಿತು.

ಆ ನಂತರ ಕರಾವಳಿ ನಾಡಿನಲ್ಲಿ ನಗರೀಕರಣವಾಗತೊಡಗಿತ್ತು, ಕೈಗಾರೀಕರಣ ತಲೆಯೆತ್ತಿತ್ತು, ಬಡವರು ದಣಿಕರು ಎನ್ನದೆ ಕೈಗಾರಿಕೆಗಳಲ್ಲಿ ಉದ್ಯೋಗಗಳು ದೊರಕಿದವು, ಅಲ್ಲಿನ ಜನರು ಈಗ ತಮ್ಮ ಜೀವನ ಶೈಲಿಯನ್ನು ಬದಲಿಸಿಕೊಂಡು ಬಡತನದಿಂದ ಒಂದು ಉತ್ತಮ ರೀತಿಗೆ ಬದಲಾಗಿದ್ದಾರೆ. ಆದರೆ ಈ ಸಾಮಾಜಿಕ ಸಮಸ್ಯೆಯಾದ ಜಾತಿ ವ್ಯವಸ್ಥೆಯು ಕರಾವಳಿ ನಾಡನ್ನು ಬಿಟ್ಟು ಹೋಗಿಲ್ಲ, ಎಷ್ಟೋ ವಿದ್ಯಾವಂತರೇ ಸುಶಿಕಿತರೇ ಜಾತಿ ಭೇದದಂತಹ ಅನಿಷ್ಟ ಪದ್ಧತಿಯನ್ನು ಆಚರಿಸಿಕೊಂಡು ಸಮಾಜಕ್ಕೆ ಮಾರಕವಾಗುತ್ತಿದ್ದಾರೆ. ಇದು ನಗರ ವಾಸಿಗಳ ಬದುಕಾದರೆ ಕರಾವಳಿಯ ಗ್ರಾಮೀಣ ಭಾಗದಲ್ಲಿ ಈಗಲೂ ಸಹ ಕೆಲವು ಕುಟುಂಬಗಳು ಬಡತನದಿಂದ ಕೂಡಿವೆ. ಅವರು ತಮ್ಮ ಧಣಿಗಳ ಹೊಲಗದ್ದೆಗಳಲ್ಲಿ ಕೆಲಸಕ್ಕೆ ಹೋಗುತ್ತಾರೆ ಆದರೆ ಜೀತಕ್ಕೆ ಹೋಗುವುದಿಲ್ಲ. ಕೂಲಿಗೂ ಮತ್ತು ಜೀತಕ್ಕೂ ವ್ಯತ್ಯಾಸವಿದೆ, ದಿನದ ಲೆಕ್ಕದಲ್ಲಿ ಕೆಲಸ ಮಾಡಿ ವಾರಕ್ಕೆ ಅಥವಾ ತಿಂಗಳಿಗೆ ತಮ್ಮ ಪಡಿಯನ್ನು ಪಡೆದರೆ ಅದು ಕೂಲಿ, ಒಂದು ವರ್ಷ ಅಥವಾ ಅದಕ್ಕಿಂತ ಮೇಲ್ಪಟ್ಟು ಕೆಲಸಕ್ಕೆ ಹೋಗಿ ಒಂದೇ ಬಾರಿ ಹಣ ಪಡೆಯುವುದು ಜೀತವಾಗುತ್ತದೆ.

ಆದರೆ ಅದು ಈಗ ಸಿನಿಮಾವಾಗಿದೆ. ಆ ಕಥೆಯಲ್ಲಿಯೂ ಸಹ ಒಂದು ಮುತ್ತಿನಿಂದ ಇಡೀ ಕುಟುಂಬ ಹಲವಾರು ತೊಂದರೆಗಳಿಗೆ ಸಿಲುಕಿ ಹಾಕಿಕೊಳ್ಳುತ್ತದೆ ಕೊನೆಗೆ ಆ ಮುತ್ತನ್ನು ಅವನು ತೆಗೆದುಕೊಂಡು ಹೋಗಿ ಸಮುದ್ರಕ್ಕೆ ಎಸೆದು ಬಿಡುತ್ತಾನೆ. ಈ ಧಣಿಗಳ ಬೆಳ್ಳಿಲೋಟ ಕಥೆಯಲ್ಲಿಯೂ ಒಂದು ಬೆಳ್ಳಿಲೋಟದ ಸಲುವಾಗಿ ಕುಮುದನ ಕುಟುಂಬ ಬಹಳ ಕಷ್ಟಕ್ಕೆ ಗುರಿಯಾಗಿ ಕಳ್ಳತನದ ಅಪವಾದವನ್ನು ಹೊರಿಸಿಕೊಂಡು ಅವಮಾನ ಪಡುವಂತೆ ಆಗುತ್ತದೆ. ಹಾಗಾಗಿ ಕೊನೆಗೆ ಬೆಳ್ಳಿಲೋಟ ಹೊಳೆಯ ಉದರದಿಂದ ಚಿನ್ನಮ್ಮನ ಕೈಗೆ ಸಿಕ್ಕರೂ ಸಹ ಅವಳು

ಅದರ ಮೈಮೇಲೆ ಎಳೆದಿದ್ದಂತಹ ಬಳ್ಳಿಗಳ ಅಂದವನ್ನು ನೋಡತ್ತಾ ನೋಡತ್ತಾ ಇದರಿಂದ ನಮ್ಮ ಜೀವನದಲ್ಲಿ ಏನೆಲ್ಲಾ ಅವಮಾನ ಎದುರಿಸಬೇಕಾಯಿತು ಎಂದು ಹೇಳಿ ಆ ಹೊಳೆಯ ನೀರಿನಲ್ಲಿ ಮೂರ್‍ನಾಲ್ಕು ಹೆಜ್ಜೆ ಮುಂದೆ ನಡೆದು ಕೈಯಲ್ಲಿದ್ದಂತಹ ಬೆಳ್ಳಿಲೋಟವನ್ನು ನೀರಿಗೆ ಎಸೆದು, ಇಲ್ಲಿಗೆ ನಮ್ಮ ಕುಟುಂಬಕ್ಕೆ ಅಂಟಿದ್ದಂತಹ ಕಳಂಕವು ಕಳೆಯಿತೆಂದು ನಿಟ್ಟುಸಿರು ಬಿಟ್ಟಳು ಆದರೆ ಇ ಪಡಿಯಿಲ್ಲದ ದುಡಿಮೆಯಿಂದಲ್ಲ ನಂತರ ಅದೇ ಹೊಳೆಯ ನೀರಿನಲ್ಲಿ ಮೂರು ಬಾರಿ ಮುಳುಗಿ ಮೇಲೆದ್ದು ಬರುತ್ತಾಳೆ.

ಈ ಎಲ್ಲಾ ದೃಶ್ಯಗಳನ್ನು ಹತ್ತಿರಕ್ಕೆ ಬಂದು ನೋಡುತ್ತಿದ್ದಂತಹ ಧಣಿಗಳು ಚಿನ್ನಮ್ಮನ ಈ ವರ್ತನೆ ಕಂಡು ಬೆರಗಾಗಿ ಬೆವತು ಹೋದರು, ಧಣಿಗಳು ಊಹೆ ಮಾಡಿರದ ಕೆಲಸವನ್ನು ಚಿನ್ನಮ್ಮ ಮಾಡಿಬಿಟ್ಟಳು, ಆ ಬೆಳ್ಳಿಲೋಟವನ್ನು ತನ್ನ ಕೈಗೆ ತಂದು ನೀಡಿ ನಾವು ಕಳ್ಳತನ ಮಾಡಿರಲಿಲ್ಲ, ಧಣಿಗಳೇ ನೀವೇ ಕಣ್ಣಾರೇ ನೋಡಿದರಲ್ಲ ಆ ಲೋಟವನ್ನು ಈ ಹೊಳೆ ನುಂಗಿತ್ತು ಈ ದಿನ ಆ ಹೊಳೆಯ ಉದರದಿಂದ ಹೊರ ತೆಗೆದದ್ದನ್ನು ಕಂಡಿರಲ್ಲ, ಹಾಗಾಗಿ ನನ್ನ ಇಷ್ಟು ದಿನದ ದುಡಿಮೆಯ ಪಡಿಯನ್ನು ನನಗೆ ನೀಡಿ ಎಂದು ಚಿನ್ನಮ್ಮ ಕೇಳುತ್ತಾಳೆಯೆಂದು ಧಣಿಗಳು ಯೋಚಿಸಿದ್ದರು. ಅದಕ್ಕೆ ತದ್ವಿರುದ್ಧವಾದಂತಹ ಕೆಲಸವನ್ನು ಚಿನ್ನಮ್ಮ ಮಾಡಿದಳು. ಧಣಿಗಳ ನಲವತ್ತು ವರ್ಷಗಳ ದಾಂಪತ್ಯ ಜೀವನದ ಜೊತೆಗಿದ್ದಂತಹ ಆ ಬೆಳ್ಳಿಲೋಟ ಕೊನೆಗೂ ಸಹ ಧಣಿಗಳ ಕೈ ಸೇರದೆ ಕಡಲ ಒಡಲು ಸೇರಿತ್ತು....

ದಾನ

ನಾಗವೇಣಿಯವರು ಬರೆದಿರುವ ಕಥೆಗಳಲ್ಲಿ ಅತ್ಯದ್ಭುತ ಕಥೆ ಎಂದರೆ ಅದು "ದಾನ" ಕಥೆ. ಈ ಕಥೆಯು ದಲಿತರು ಮೇಲ್ಜಾತಿಯವರನ್ನು ಮತ್ತು ಅವರುಗಳು ಅನಿಷ್ಟ ಆಚರಣೆಗಳನ್ನು ಪ್ರತಿಭಟಿಸಿ ವಿರೋಧಿಸುವ ಕಥೆಯಾಗಿದೆ. ಲೇಖಕಿಯವರು ಮೊದಮೊದಲು ಆ ಬಾಕ್ಕಾರು ಗುತ್ತಿನ ಬಾಣಂತನದ ವಿವರಣೆ ನೀಡುವುದು ಬಹಳ ಸೊಗಸಾಗಿದೆ ಅಂದರೆ ಸಿರವಂತರು ತಮ್ಮ ಮನೆಯಲ್ಲಿ ಮಾಡುವಂತಹ ಬಾಣಂತನವೆಂದರೆ ಅಲ್ಲಿ ಪ್ರತಿಯೊಂದು ವಸ್ತುವಿನ ಉಪಯೋಗಿಸುವಿಕೆಯು ಕಡ್ಡಾಯವಾಗಿ ಇರುತ್ತದೆ. ಬಹಳ ಸಂಪ್ರದಾಯಗಳನ್ನು ಆಚರಿಸಿಕೊಂಡು ಸಾಂಸ್ಕೃತಿಕ ಆಚರಣೆಗಳನ್ನು ಬಳಸಿಕೊಂಡು ಮಾಡುವಂತಹ ಆ ಬಾಣಂತನ ಹೇಗಿರುತ್ತಪ್ಪ ಅಂದರೆ ಊರು-ಕೇರಿಯ ಹೆಂಗಸರು ಮಾತ್ರವಲ್ಲ ಗಂಡಸರೂ ಕೂಡ ನಾವು ಒಮ್ಮೆ ಬಾಕ್ಕಾರು ಗುತ್ತಿನ ಒಡತಿ ಮಾಡುವಂತಹ ಬಾಣಂತನದ ರುಚಿಯನ್ನು ನೋಡಬೇಕು ಎನಿಸಿದ್ದು ಇದೆ.

ಈ ರೀತಿಯ ಅಚ್ಚುಕಟ್ಟಾದ ಸಾಂಪ್ರದಾಯಕ ಬಾಣಂತನದ ರುಚಿ ಸವಿಯಲು ಎಲ್ಲಾ ಮಹಿಳೆಯರಿಗೂ ಅವಕಾಶವಿಲ್ಲ, ಕೇವಲ ಗುತ್ತಿನ ಹೆಣ್ಣು ಮಕ್ಕಳಿಗೆ ಮಾತ್ರ. ಈಗ ನಡೆಯುತ್ತಿರುವುದು ಸಂಕಪ್ಪಶೆಟ್ಟರ ಕೊನೆ ಮಗಳ ಮೊದಲ ಹೆರಿಗೆಯ ಬಾಣಂತನ, ಒಮ್ಮೆ ಮಗುವಿಗೆ ಸ್ನಾನ ಮಾಡಿಸಿರುವಂತಹ ಸಂದರ್ಭದಲ್ಲಿ ಮಗು ಮೇಲುಗಣ್ಣು ಬಿಡುತ್ತಾ, ಬಾಯಲ್ಲಿ ನೊರೆಯುಕ್ಕಿ ಬಂದಾಗ ಅಲ್ಲಿದ್ದಂತಹ ಎಲ್ಲರೂ ದಿಗಿಲು, ಗಾಬರಿಯಿಂದ ಆತಂಕ ಪಡುತ್ತಿದ್ದಾಗ ಮಗುವಿನ ಗಂಟಲೊಳಗೆ ಕೈ ಬೆರಳು ಹಾಕಿ ಸರಿಪಡಿಸುತ್ತಾಳೆ ಶೆಡ್ತಿ. ಅನಂತರ

ಸಂಕಪ್ಪನವರು ಇದು ಯಾವುದೋ ದೈವದ ಮುನಿಸಿರಬೇಕು ಎಂದು ಜೋಯಿಸರ ಹತ್ತಿರ ಶಾಸ್ತ್ರ ಕೇಳಲು ಅವರ ಮನೆಗೆ ಹೋಗುತ್ತಾರೆ.

ಇನ್ನು ಈ ಜೋಯಿಸರುಯೆಂದರೆ ಹಿಂದಿನ ವರ್ಷದಲ್ಲಿ ಮುದ್ರಣಗೊಂಡಿರುವಂತಹ ಪಂಚಾಂಗವನ್ನು ನೋಡಿ, ಮತ್ತು ಕವಡೆಯನ್ನು ಬಿಟ್ಟು ಅಜ್ಞಾನದಿಂದ ಇರುವಂತಹ ಜನರುಗಳಿಗೆ ಜೋತಿಷ್ಯ, ಭಪಿಷ್ಯಗಳನ್ನು ಹೇಳಿ ಅವರಲ್ಲಿ ಇಲ್ಲಸಲ್ಲದ ಭಯವನ್ನು ಮತ್ತು ಆಸೆಗಳನ್ನು ಹುಟ್ಟಿಸಿ ಅವರಿಂದ ಅನಿಷ್ಟ ಪದ್ದತಿಗಳನ್ನು ಮಾಡಿಸಿ ತನ್ನ ಹೊಟ್ಟೆಪಾಡನ್ನು ತುಂಬಿಸಿಕೊಳ್ಳುವಂತಹ ನಯವಂಚಕರು. ಮಗುವಿನ ನೋವನ್ನು ಹೊತ್ತು ಬರುವ ಸಂಕಪ್ಪಶೆಟ್ಟರಿಗೆ ಏನೇನೋ ಇಲ್ಲಸಲ್ಲದ ಮಾತುಗಳನ್ನು ಹೇಳಿ ಶನಿಕಾಟವಿದೆ ಶನಿದೇವಸ್ಥಾನ ಮತ್ತು ಈಶ್ವರ ದೇವಸ್ಥಾನಗಳಲ್ಲಿ ಪೂಜೆ ಮಾಡಿಸಬೇಕು, ಅಮಾವಾಸೆಗೆ ಅಜಲಿನ ಕೊರತಿಗೆ ಮಗು ದಾನ ನೀಡುವ ಶಾಸ್ತ್ರವನ್ನು ಮಾಡಿಸಬೇಕು ಎಂದು ಜೋಯಿಸರು ವೆಂಕಪ್ಪನವರ ತಲೆಗೆ ಮೂಢನಂಬಿಕೆಗಳನ್ನು ಆಚರಿಸುವಂತೆ ಪ್ರೇರೇಪಣೆ ನೀಡದರು. ಅಸಲಿಗೆ ಆ ಮಗುವಿಗೆ ಯಾವ ಶನಿಕಾಟವೂ ಇಲ್ಲ ಆ ರೀತಿ ಮಗು ಬಾಯಲ್ಲಿ ನೊರೆ ಉಕ್ಕಿಸಿ ತಲೆ ತಿರುಗಲು ಕಾರಣವೇನೆಂದರೆ ಈ ಬೇಸಿಗೆಯ ಬಿಸಿಲಿನಲ್ಲಿ ಆ ಎಳೆ ಕೂಸಿಗೆ ಸ್ನಾನ ಮಾಡಿಸಿವುದು ಅದರಲ್ಲಿಯೂ ಬಿಸಿ ನೀರಿನ ಸ್ನಾನ, ಇದರಿಂದ ಮಗುವಿಗೆ ಸ್ವಲ್ಪ ತಲೆ ತಿರುಗಿದಂತಾಗಿದೆ. ಏಕೆಂದರೆ ಎಳೆಯ ಮೆದಳು ಮತ್ತು ದೇಹ ಆ ಬಿಸಿಲನ್ನು ತಡೆಯಲಾಗಲ್ಲಿಲ್ಲ ಅಷ್ಟೆ, ಇದು ವೈದ್ಯಕೀಯ ಕಾರಣ. ಅಂದರೆ ಮಗುವಿಗೆ ಆ ಬಿಸಿಲ ಕಿಡಿ ತಾಗಿದೆ ಇದ್ದಿದ್ದರೆ ಮಗು ಆ ರೀತಿ ಅನುಕರಿಸುತ್ತಿರಲ್ಲಿಲ್ಲ. ವೆಂಕಪ್ಪ ಮತ್ತು ಕುಟುಂಬದವರು ಆತಂಕಪಡುತ್ತಿರಲ್ಲಿಲ್ಲ ವಿನಾಕಾರಣ ಜೋಯಿಸರ ಮನೆಯ ಮೆಟ್ಟಿಲು ತುಳಿಯುತ್ತಿರಲ್ಲಿಲ್ಲ,

ಹಿಂದಿನ ಕಾಲದಲ್ಲಿ ಹೆರಿಗೆಗಳನ್ನು ಹಳ್ಳಿಗಳ ಮನೆಗಳಲ್ಲಿಯೇ ಸೂಲಗಿತ್ತಿಯರು ಮಾಡಿಸುತ್ತಿದ್ದರು, ಆದರೆ ಇದು ಅಷ್ಟು ಆರೋಗ್ಯ ಪೂರ್ಣವಾಗುತ್ತಿರಲ್ಲಿಲ್ಲ. ಆದ ಕಾರಣ ಕೆಲವರು ಮಕ್ಕಳುಗಳು ಮತ್ತೊ ಕೆಲವರು ತಾಯಂದಿರೇ ಸತ್ತು ಹೋಗುತ್ತಿದ್ದರು, ಅದನ್ನು ಅವರು ದೇವರ ಮುನಿಸು ಅಥವಾ ಅವರವರ ಜನ್ಮದ ಕರ್ಮ ಎಂದೆಲ್ಲಾ ವರ್ಣಿಸಿಕೊಳ್ಳುತ್ತಿದ್ದರು ಆದರೆ ಅದೆಲ್ಲಾ ನಿಜವಾಗಲು ಸಹ ತಪ್ಪು. ಹೆಣ್ಣು ಗರ್ಭಿಣಿಯಾದಾಗಿನಿಂದ ಹೆರಿಗೆಯಾಗಿ ಮಗು ಲವಲವಿಕೆಯಿಂದ ಇರುವವರೆಗೂ ಕೂಡ ಅದಕ್ಕೆ ಸರಿಯಾದ ವೈದ್ಯಕೀಯ ಚಿಕಿತ್ಸೆಯ ಅಗತ್ಯವಿರುತ್ತದೆ. ಅದನ್ನು ಕಾಲ ಕಾಲಕ್ಕೆ ತಕ್ಕಂತೆ ಸರಿಯಾದ ರೀತಿಯಲ್ಲಿ ಚಿಕಿತ್ಸೆಯನ್ನು ನೀಡಿ ಪೋಷಿಸಿದರೆ ಮಗು ಮತ್ತು ತಾಯಿ ಇಬ್ಬರು ಕೂಡ ಆರೋಗ್ಯವಾಗಿರುತ್ತಾರೆ ಅದನ್ನು ಬಿಟ್ಟು ದೈವದ ಕೋಪ, ಶನಿಕಾಟ ಎಂದು ಮೂಢನಂಬಿಕೆಗಳ ಆಚರಣೆ ಮಾಡಿದರೆ ಅದು ಸರಿಹೋಗುವುದಿಲ್ಲ.

ಮಗು ದಾನದ ಆಚರಣೆಯನ್ನು ಮಾಡಬೇಕೆಂದು ಜೋಯಿಸಿರು ಹೇಳಿದಾಗ ಎಲ್ಲಾ ಪೂಜೆಗಳನ್ನೂ ಮಾಡಿಸಬಹುದು ಆದರೆ ಕೊನೆಯಲ್ಲಿ ಹೇಳಿದ ಕೊರತಿಗೆ ಮಗು ದಾನ ನೀಡುವ ಆಚರಣೆಯ ಬಗ್ಗೆ ಸಂಕಪ್ಪ ಶೆಟ್ಟರು ಯೋಚಿಸ ತೊಡಗಿದರು.

ದಾನ ಕೊಡುವ ಪದ್ಧತಿ ಒಂದು ಮೂಢನಂಬಿಕೆ ಕರಾವಳಿ ಭಾಗದ ಜನರುಗಳಲ್ಲಿ ಈ ಆಚರಣೆ ಬಹಳ ಹಿಂದಿನ ಕಾಲದಿಂದಲೂ ಸಹ ನಡೆದುಕೊಂಡು ಬಂದಿದೆ. ಅದೇನೆಂದರೆ ಮಗುವಿಗೆ ಶನಿ ಹಿಡಿದರೆ ಆ ಶನಿಯನ್ನು ಈ

ಶಾಸ್ತ್ರದ ಮೂಲಕ ಹೀನ ಕುಲದ ದಲಿತ ಕೊರಗ ಜಾತಿಯವರಿಗೆ ದಾನ ನೀಡುವುದು ಎಂದರ್ಥ. ಇಲ್ಲಿ ಕೊರಗರು ಹೊಟ್ಟೆಗೆ ಇಟ್ಟಿಲ್ಲದ ಜನರುಗಳು ಈ ರೀತಿಯ ಶಾಸ್ತ್ರಕ್ಕೆ ಉಳ್ಳವರ ಮನೆಯಿಂದ ಕರೆ ಬಂದರೆ ಸಾಕು ನಾ ಮುಂದು ತಾಮುಂದು ಎಂದು ಮುಗಿಬಿದ್ದು ಓಡೋಡಿ ಬಂದು ಈ ದಾನದ ಪ್ರಕ್ರಿಯೆಯನ್ನು ನಡೆಸಿಕೊಡುತ್ತಿದ್ದರು, ಉಳ್ಳವರ ಸಿರಿವಂತರು ಯಾವ ಶಾಸ್ತ್ರ ಮಾಡಿಕೊಳ್ಳುತ್ತಾರು ನಮಗದು ಬೇಡದ ವಿಷಯ, ಆ ಶಾಸ್ತ್ರದ ಹೆಸರಲ್ಲಿ ನಮಗೆ ತಿನ್ನಲು ಅನ್ನ, ಸಣ್ಣ ಪುಟ್ಟ ಸಾಮಾನುಗಳು ಸಿಗುತ್ತವಲ್ಲವೆ ಅಷ್ಟೆ ಸಾಕು ಎಂದು ತಕ್ಷಣಕ್ಕೆ ಈ ದಿನದ ಹೊಟ್ಟೆ ತುಂಬಿದರೆ ಆ ಮಗುವಿನ ಶನಿ ದಾನದ ಶಾಸ್ತ್ರಕ್ಕೆ ಹಿಂದಿನ ಕಾಲದಲ್ಲಿ ಕೊರಗರು ಬರುತ್ತಿದ್ದರು.

ಈ ರೀತಿಯ ಶಾಸ್ತ್ರ ಕೇವಲ ಜೋಯಿಸರ ಕುತಂತ್ರ ಅಷ್ಟೆ. ಮಗುವಿಗೆ ಯಾವ ಶನಿಯೂ ಹಿಡಿದಿರುವುದಿಲ್ಲ ಯಾವು ರೋಗವು ಬಂದಿರುವುದಿಲ್ಲ, ಆಕಸ್ಮಾತ್ ಖಾಯಿಲೆ ಬಂದರೆ ಅದು ವೈದ್ಯರಿಗೆ ತೋರಿಸಿದರೆ ಸರಿಹೋಗುತ್ತದೆ. ಈ ಹಳ್ಳಿಯ ಮುಗ್ಧ ಜನರುಗಳು ಜೋಯಿಸಿರು ಹೇಳಿದ ಮಾತುಗಳು ನಿಜವಿರಬೇಕೆಂದು ಅವರ ಹತ್ತಿರ ಬಂದು ಆಚರಣೆಗಳ ವಿಚಾರಣೆಗೆ ತೊಡಗುತ್ತಾರೆ. ಈ ಜೋಯಿಸಿರು ತಮ್ಮನ್ನು ತಾವು ದೈವಕ್ಕೆ ಸಮ ಎಂದು ಕರೆದುಕೊಳ್ಳುವಂತಹ ಜನರು. ಇವರು ಬೇರೆ ಯಾವುದೇ ಕೆಲಸಕಾರ್ಯಗಳನ್ನು ಮಾಡುವುದಿಲ್ಲ ವ್ಯವಸಾಯ ಕೃಷಿ ಚಟುವಟಿಕೆಗಳಂತಹ ದುಡಿಯುವ ಕೆಲಸಗಳನ್ನು ಕಂಡಂರೆ ಇವರು ಬಲು ದೂರ ಹೋಗುತ್ತಾರೆ. ತಾವು ದೈವದ ಪ್ರತಿರೂಪ ಎಂದು ಬಿಂಬಿಸಿಕೊಳ್ಳುವುದರಿಂದ ಬೇರೆ ಎಲ್ಲಾ ಸಮುದಾಯದವರು ಇವರನ್ನು ಗೌರವದಿಂದ ಕಾಣಬೇಕು. ಎನ್ನುವಂತಹ ರೀತಿಯಲ್ಲಿ ಬದುಕುತ್ತಿರುತ್ತಾರೆ. ವಿದ್ಯೆ ಬುದ್ಧಿ ಇಲ್ಲದಂತಹ ಅನಕ್ಷರಸ್ಥರನ್ನು ಮೂಢನಂಬಿಕೆಗಳಿಗೆ ಗುರಿಮಾಡಿ ಅದರಿಂದ ಕೆಲವು ಆಚರಣೆಗಳನ್ನು ಮಾಡಿಸಿ ತಮ್ಮ ತಮ್ಮ ಹೊಟ್ಟೆ ತುಂಬಿಸಿ ಕೊಳ್ಳುವಂತಹವರು.

ಈ ರೀತಿಯಲ್ಲಿದ್ದಂತಹ ಜೋಯಿಸರು ಕವಡೆ ಬಿಟ್ಟು ಮಗುವಿನ ಶಾಸ್ತ್ರ ಹೇಳಿದಾಗ ಸಂಕಪ್ಪ ಶೆಟ್ಟರಿಗೆ ತಲೆನ ನೋವಾಗಿದ್ದು ಮಗು ದಾನದ ವಿಷಯ ಅಸ್ಪೃಶ್ಯತೆಯ ಕೀರಿಟವನ್ನು ಧರಿಸಿಕೊಂಡು ಹೊಟ್ಟೆಗೆ ಇಟ್ಟಿಲ್ಲದೆ ಕೈಗಳಿಗೆ ದುಡಿತವಿಲ್ಲದೆ ಭೂಮಿ–ಗೀಮಿಯಂತಹದ್ದನ್ನು ಕನಸಿನಲ್ಲಿಯೂ ಕಾಣದೆ ಕಾಡಿನ ಅಂಚಿನಲ್ಲಿ ಹೀನ–ದರಿದ್ರ– ದೀನ ಬದುಕನ್ನು ಸವೆಸುತ್ತಿದ್ದ ಶಾಪಗ್ರಸ್ಥ ಕೊರಗ ಸಂತಾನಗಳು ಇಂತಹ ಅನಿಷ್ಟ– ದುಷ್ಟ ಕುಟಿಲ ಆಚಾರಗಳ ಬಗ್ಗೆ ವಿವೇಚನೆಯಿಲ್ಲದೆ ನಾಮುಂದು ತಾಮುಂದು ಎಂದು ನುಗ್ಗಿ ಬಂದು ಆ ಮಗು ದಾನವನ್ನು ತೆಗೆದುಕೊಂಡು ಅದರಲ್ಲಿರುವ ಶನಿಯನ್ನು ತನ್ನ ಸಂತಾನಕ್ಕೆ ಎಂದು ಆ ಶಾಸ್ತ್ರವನ್ನು ನಡೆಸಿಕೊಡುವಂತಹ ಕಾಲವೊಂದಿತ್ತು. ಉಳ್ಳವರು ಅಥವಾ ಸಿರಿವಂತರು ಎಂದು ಕರೆಸಿಕೊಳ್ಳುವವರ ಮನೆಯಿಂದ ಇಂತಹ ದಾನದ ವಿಷಯವಾಗಿ ಸುದ್ದಿ ಬಂದರೆ ಸಾಕು ಆವತ್ತು ಆ ಇಡೀ ಕೊರಗ ಸಂತಾನವೇ ಎದ್ದು ಬಿದ್ದು ಓಡಿ ಬರುವಂತಹ ಒಂದು ಕಾಲವಿತ್ತು. ಆದರೆ ಇಂತಹ ಪದ್ದತಿಗೆ ಕೊರಗ ಜನಾಂಗದ ಒಬ್ಬ ವಿದ್ಯಾವಂತನು ತಡೆಗೋಡೆಯಾಗಿ ನಿಂತು ಆ ಜನಾಂಗಕ್ಕೆ ತಮ್ಮ ತಪ್ಪಿನ ಅರಿವನ್ನು ಮೂಡಿಸಲು ಪ್ರಯತ್ನಿಸುತ್ತಿದ್ದನು. ಆದರೆ ಆ ಜನಾಂಗದವರೆಲ್ಲರೂ ಕೂಡ ಮೂಢನಂಬಿಕೆಯ ಅರಿವಿನಿಂದ ಆ ಪದ್ಧತಿಯನ್ನು ಬಿಟ್ಟರಲಿಲ್ಲ. ಕೇವಲ ಆ ಕೇತುವಿನ ಭಯಕ್ಕೆ ಅಂತಹ ಪದ್ಧತಿಗೆ ಪೂರ್ಣ ವಿರಾಮ ಹಾಕಿದ್ದರು ಅಷ್ಟೇ.

ಜೋಯಿಸರು ಇಂತಹ ಪದ್ಧತಿಗೆ ಬದಲಿ ಪದ್ಧತಿಯನ್ನು ಕಂಡುಕೊಂಡು ತಮ್ಮ ಮನಸ್ಸಿನಲ್ಲಿಯೇ ಇಟ್ಟುಕೊಂಡಿದ್ದರು. ಏಕೆಂದರೆ ಆ ಪದ್ಧತಿಯನ್ನು ನಿರಾಕರಿಸುವವರಿಗೆ ಅಂಥ. ಆದರೆ ಇಡೀ ಆ ಊರಿನ ಹಿರಿಯರು ಮತ್ತು ಯಜಮಾನರಂತಿದ್ದ ಸಂಕಪ್ಪ ಶೆಟ್ಟರಿಗೆ ಕಷ್ಟ ಬಂದಿರುವುದರಿಂದ ಅವರು ಆ ಬದಲೀ ಉಪಾಯವನ್ನು ಶೆಟ್ಟರಿಗೆ ಹೇಳಲಿಲ್ಲ. ಕಾರಣವೇನೆಂದರೆ ಈ ಶೆಟ್ಟರ ದೆಸೆಯಿಂದಲಾದರೂ ಸಹ ಆ ನಿಂತು ಹೋಗಿರುವಂತಹ ಮಗುದಾನದ ಪದ್ಧತಿಗೆ ಮರು ಜೀವ ಬರಲಿ ಎಂದು ಆ ಜೋಯಿಸರು ನಿರ್ಧರಿಸಿದ್ದರು. ಕೇತು ಕೊರಗ ಜನಾಂಗದ ವಿದ್ಯಾವಂತ ಹಾಗೂ ವೃತ್ತಿಯಲ್ಲಿಯೂ ಶಿಕ್ಷಕ. ಇವನಿಗೆ ಸರ್ಕಾರಿ ಕೆಲಸ. ಇಂತಹ ಕೇತು ತನ್ನ ಜನಾಂಗದ ಉದ್ಧಾರಕ್ಕೆ ನಿಂತಿದ್ದ ಇದೇ ಶೆಟ್ರು ಮೊನ್ನೆ ಕಂಬಳ ಹಬ್ಬವನ್ನು ಸಾರಲು ಕೇತುವಿನ ತಂದೆಯ ಹತ್ತಿರ ಬಂದರೆ ಅದಕ್ಕೆ ಉತ್ತರ ನೀಡಿದವನು ಮಾತ್ರ ಈ ಕೇತು. "ನೋಡಿ ಶೆಟ್ರೆ ನನ್ನಪ್ಪನಿಗೆ ಆ ಕಾಲದಲಿ ಊರಿನ ಅಜಲಿನ ಕೆಲಸಕ್ಕೆಂದು ಕೊಟ್ಟಂತಹ ಡೋಲು ಇಲ್ಲೇ ಜೋತು ಬಿದ್ದಿದೆ. ಅದನ್ನು ಬೇಕಿದ್ರೆ ಕೊಡುತ್ತೇನೆ. ಆ ಸಾರುವ ಕೆಲಸವನ್ನು ನಿಮ್ಮಲ್ಲಿ ಯಾರಾದರೂ ಒಬ್ಬರು ಅದನ್ನು ಮಾಡಿ ಮುಗಿಸಿಬಿಡಿ. ಇನ್ನುಮುಂದೆ ಇಂತಹ ಕೆಲಸಗಳಿಗಾಗಿ ನಮ್ಮ ಕೇರಿಗೆ ಕರೆಯಲು ಬರಬಾರದು ನೋಡಿ" ಎಂದು ಎಚ್ಚರಿಕೆಯನ್ನು ನೀಡಿರುತ್ತಾನೆ. ಅಂದರೆ, ಈ ಕೊರಗರ ಕೇತುವು ಉಳ್ಳವರನ್ನು ಎದುರು ಹಾಕಿಕೊಂಡು ಅವರ ಎದೆಯಲ್ಲಿ ಭಯವನ್ನು ಹುಟ್ಟಿಸಿದ್ದನು. ಇವನೊಬ್ಬನ ಕಾರಣದಿಂದಾಗಿ ಧಣಿಗಳು ಮತ್ತು ಉಳ್ಳವರು ಆ ಕೊರಗರ ಕೇರಿಯತ್ತ ಮುಖ ಹಾಕಿರಲಿಲ್ಲ. ಶೆಟ್ಟಿಗೆ ಮತ್ತೊಂದು ಆಘಾತವೇನಾಗಿತ್ತಪ್ಪ ಎಂದರೆ, ಇಷ್ಟು ದಿನ ಉಳ್ಳಾಯ..... ಉಳ್ಳಾಯ..... (ಉಳ್ಳವರೆ) ಎಂದು ಕರೆಯುತ್ತಿದ್ದವರು ಈ ದಿನ ಶೆಟ್ರೆ ಎಂದು ಸಂಭೋದಿಸಿದ್ದು ಶೆಟ್ರ ಪಿತ್ತವನ್ನು ಕೆರಳಿಸಿತ್ತು. ಆದರೂ ಸುಮ್ಮನಿದ್ದರು. ಏಕೆಂದರೆ ಇವರ ತಂಟೆಗೆ ಹೋದರೆ ಪೊಲೀಸರಿಗೆ ಹೇಳಿದರೆ ಇವರನ್ನು ಸಾಯುವ ತನಕ ಜೈಲಿಗೆ ಹಾಕಿ ರಾಗಿ ಗಂಜಿ ಕುಡಿಸುತ್ತಾರೆ ಎಂಬ ಭಯ ಅವರನ್ನು ಕಾಡಿತ್ತು. ವಿದ್ಯಾವಂತ ಕೇತು ಜಾತಿ ನಿಂದನೆಯ ಕೇಸನ್ನು ಹಾಕಿದರೆ ಈ ಮೇಲ್ಜಾತಿಯವರು ಜೈಲಿಗೆ ಹೋಗಿ ಸೆರೆವಾಸ ಅನುಭವಿಸುವಂತಹ ಸಂದರ್ಭವು ಬರುತ್ತಿತ್ತು.

ಈ ಘಟನೆ ನಂತರ ಹೆಚ್ಚಿನ ಮೇಲ್ಜಾತಿಯವರು ಕೊರಗರ ಕೇರಿಯತ್ತ ಹೋಗುವುದನ್ನು ನಿಲ್ಲಿಸಿದ್ದರು. ಹೇಸಿಗೆ ಮೇಲೆ ಕಲ್ಲು ಹಾಕಿ ಅದನ್ನು ಮುಖಕ್ಕೆ ತಾಗಿಸಿಕೊಳ್ಳುವುದು ಬೇಡವೆಂದು ಈ ದಾನದ ಶಾಸ್ತ್ರವನ್ನೇ ನಿಲ್ಲಿಸಿ ಬಿಟ್ಟಿದ್ದರು. ಆದರೆ, ಮೇಲ್ಜಾತಿಯ ಹಿರಿಯ ಜೀವಗಳು ಕೊರಗರ ಮನಸ್ಸು ಬದಲಾಗುವುದೇನೂ ಎಂದು ಕಾಯುತ್ತಿರುತ್ತಾರೆ. ಏಕೆಂದರೆ, ಅಲ್ಲಿನ ಕೊರಗರೆಲ್ಲರೂ ಸಹ ಹೊಟ್ಟೆಗೆ ಹಿಟ್ಟಿಲ್ಲದಂತಹ ಸಮಯದಲ್ಲಿ ಈ ಮೇಲ್ಜಾತಿಯವರ ಹತ್ತಿರ ಬೇಡಿ ತಿಂದು ಬದುಕಿರುತ್ತಾರೆ. ಆ ಅನ್ನದ ಋಣಕ್ಕಾದರೂ ಅವರು ತಮ್ಮ ನಿರ್ಧಾರಗಳನ್ನು ಬದಲಿಸಬಹುದು ಎಂದು ಕಾಯುತ್ತಾರೆ.

ಈ ರೀತಿ ವಿದ್ಯೆ-ಬುದ್ಧಿ ಕಲಿತ ಆ ಊರಿನ ಮತ್ತು ಸುತ್ತಮುತ್ತಲ ಊರಿನ ದಲಿತರಲ್ಲಿ ಬರುವಂತಹ ಎಲ್ಲಾ ಉಪ ಜಾತಿಗಳ ಯುವಕರೂ ಸೇರಿ ಒಂದು ಸಂಘವನ್ನು ಕಟ್ಟಿಕೊಂಡು ಇಂತಹ ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಮೂಢ ಆಚರಣೆಗಳಿಗೆ ತಡೆಯೊಡ್ಡುವಂತಹ ಕಾರ್ಯಕ್ಕೆ ಕೈ ಹಾಕಿರುತ್ತಾರೆ. ಈ

ವಿಷಯವನ್ನು ಜೋಯಿಸರಿಗೆ ಕುಪ್ಪ ಪೂಜಾರಿ ತಿಳಿಸಿದ್ದನು. ಯಾವುದೇ ಒಂದು ಮೂಢನಂಬಿಕೆ ಅಥವಾ ಒಂದು ಸಾಮಾಜಿಕ ಸಮಸ್ಯೆಯ ವಿರುದ್ಧ ಹೋರಾಡಬೇಕು ಎಂದರೆ ಅದು ಕೇವಲ ಒಬ್ಬ ವ್ಯಕ್ತಿಯ ಮೂಲಕ ಸಾಧ್ಯವಿಲ್ಲ. ಒಂದು ಗುಂಪು ಬೇಕು ಅಂದರೆ ಒಂದು ಸಂಘಟನೆ ಬೇಕು. ಇದನ್ನು ಚೆನ್ನಾಗಿ ಅರಿತಿದ್ದ ಕೇತು.

ಈ ಮಗುದಾನದ ವಿಷಯವನ್ನು ಶೆಟ್ಟರು ತನ್ನ ಹೆಂಡತಿ ಸೀತಕ್ಕಗೆ ಮುಟ್ಟಿಸಿದರು. ಅದನ್ನು ಕೇಳಿದಂತಹ ಸೀತಕ್ಕಯವರು ಒಂದು ಕ್ಷಣ ದಂಗಾಗಿ ಹೋದರು. ಈಗಿನ ಕಾಲದಲ್ಲಿ ಎಂತಹ ರೋಗಗಳನ್ನು ಸಹ ವೈದ್ಯರು ಗುಣಪಡಿಸುತ್ತಾರೆ ಎಂದು ನಂಬಿರುವಂತಹವರು ಸೀತಕ್ಕರವರು. ಆದರೆ ಹಿಂದಿನ ಕಾಲದಿಂದಲೂ ಮಾಡಿಕೊಂಡು ಬಂದಿರುವಂತಹ ಆಚರಣೆಗಳನ್ನು ಕೈಬಿಡುವುದು ಸರಿಯಲ್ಲ ಎಂದುಕೊಂಡು ಆ ಶಾಸ್ತ್ರಕ್ಕೆ ಕೊರತಿ ಬರದಿದ್ದರೆ ಏನು ಗತಿ ಎಂದು ಯೋಚಿಸತೊಡಗಿದರು. ಅಂದರೆ, ಮೇಲ್ಜಾತಿಯವರು ಎಲ್ಲವೂ ಗೊತ್ತಿದ್ದವರೂ ಕೂಡ ಈ ರೀತಿಯ ಆಚರಣೆಗಳಿಗೆ ಪ್ರೇರಪಣೆ ನೀಡುವುದು ಸಮಂಜಸವಲ್ಲ ಎನಿಸುತ್ತದೆ. ಸೀತಕ್ಕನವರು ತಮ್ಮ ಮನೆಯ ಆಳಿನ ಕೈಯಲ್ಲಿ ಮಗು ದಾನಶಾಸ್ತ್ರದ ವಿಷಯವನ್ನು ಕೊರತಿಗೆ ಹೇಳಿ ಕಳುಹಿಸಿದಾಗ ಅದಕ್ಕೆ ಉತ್ತರ ನೀಡಿದವನು ಅವರ ಮಗ ಕೇತು. ಅದೇನೆಂದರೆ, "ಅಸ್ಪೃಶ್ಯತಾ ನಿವಾರಣಾ ಕಾಯ್ದೆಯಡಿ, ದಲಿತರ ದೌರ್ಜನ್ಯದ ಕೇಸು ಹಾಕಿ, ಗುತ್ತಿನ ಧಣಿಗಳನ್ನು ವರ್ಷಾನುಗಟ್ಟಲೆ ಜೈಲಿನಲ್ಲಿ ಕೊಳೆಸಬಲ್ಲೆ" ಎಂಬ ಉತ್ತರ.

ಅಂದರೆ, ಆ ವಿದ್ಯಾವಂತ ಕೇತುವಿಗೆ ಕೇಂದ್ರ ಸರ್ಕಾರವು ಜಾರಿಗೆ ತಂದಿದ್ದಂತಹ ಅಸ್ಪೃಶ್ಯತಾ ನಿವಾರಣಾ ಕಾಯ್ದೆಯು ಸಹಾಯ ಮಾಡಿತ್ತು. ಈ ಕಾಯ್ದೆಯು ಬರೀ ಕೇತುವಿನ ವಿಷಯದಲ್ಲಿ ಮಾತ್ರವಲ್ಲ. ಅದು ನಮ್ಮ ಭಾರತ ದೇಶದಲ್ಲಿ ಅನಾದಿಕಾಲದಿಂದಲೂ ಸಹ ಒಬ್ಬ ವ್ಯಕ್ತಿಯನ್ನು ಮುಟ್ಟುವುದಿರಲಿ ಅವರ ನೆರಳು ಸಹ ನಮ್ಮ ಮೇಲ್ಜಾತಿಯವರ ಮೇಲೆ ಬೀಳಬಾರದು ಎಂದು ಅಸ್ಪೃಶ್ಯರು ಎಂದು ಕರೆಸಿಕೊಳ್ಳುತ್ತಿದ್ದಂತಹ ದಲಿತರುಗಳು ಬಾಳಿನಲ್ಲಿ ಮಂದಹಾಸದ ನಗೆಯನ್ನು ಬೀರಲು ಈ ಅಸ್ಪೃಶ್ಯತಾ ನಿವಾರಣೆ ಕಾಯ್ದೆಯು ತನ್ನ ಕಾರ್ಯವನ್ನು ಪ್ರಾರಂಭಿಸಿತ್ತು. ಈ ಕಥೆಯಲ್ಲಿ ಬರುವಂತಹ ಕೊರಗ ಜನಾಂಗದ ನಾಯಕನೆಂದೇ ಬಿಂಬಿಸಿರುವಂತಹ ಕೇತುವು ತಾನು ಸುತ್ತಮುತ್ತಲ ಊರಿನ ಯುವಕರನ್ನು ಸೇರಿಸಿಕೊಂಡು ಸಂಘಟನೆಗಳನ್ನು ಕಟ್ಟಿಕೊಂಡು ಅದರ ಮೂಲಕ ಈ ರೀತಿಯ ಕಾಯ್ದೆಗಳನ್ನು ಅಸ್ಪೃಶ್ಯರು ಎಂದು ಕರೆಸಿಕೊಳ್ಳುವಂತಹ ಎಲ್ಲಾ ದಲಿತ ಸಮುದಾಯದ ಜನರುಗಳಿಗೆ ತಿಳಿಸುತ್ತಿದ್ದನು. ಇಂತಹ ಕಾಯಿದೆಗಳು ಶೋಷಣೆಗೆ ದೌರ್ಜನ್ಯಕ್ಕೆ ಒಳಗಾದಂತಹ ಜನರುಗಳಿಗೆ ಪ್ರಮುಖ ಅಸ್ತ್ರ ಎಂಬಂತೆ ಆಯಿತು. ಕಾನೂನಿನಲ್ಲಿ ಇಂತಹ ಕಾಯಿದೆಗಳ ಮೂಲಕ ಕೆಲವು ತಿದ್ದುಪಡಿಗಳನ್ನು ಮಾಡಿ ಬದಲಾವಣೆಯನ್ನು ಮಾಡದಿದ್ದರೆ ದಲಿತರು ಎಂದು ಕರೆಯಿಸಿಕೊಳ್ಳುವವರು ಮನುಷ್ಯರಂತೆ ವಾಸಿಸದೆ ಪ್ರಾಣಿಗಳಂತೆ ಆಗಿ ಬಿಡುತ್ತಿದ್ದರು.

ಸ್ಪೃಶ್ಯರು, ಅಸ್ಪೃಶ್ಯರು ಎಂದು ಈ ಜಾತಿ ಭೇದಗಳನ್ನು ಯಾವ ದೇವರೂ ಸಹ ಮಾಡಿಲ್ಲ. ಇವೆಲ್ಲವನ್ನು ಈ ಕೆಟ್ಟ ಜನಗಳೇ ತಮ್ಮ ತಮ್ಮ ಸ್ವಾರ್ಥಕ್ಕೆ ನಿರ್ಮಿಸಿಕೊಂಡಿರುವಂತಹ ಸಾಮಾಜಿಕ ರೇಖೆಗಳು ಇವು. ಪ್ರಸ್ತುತ ಸಂದರ್ಭದಲ್ಲಿ ಈ ಜಾತಿ ಪದ್ಧತಿಯು ಒಂದು ಸಾಮಾಜಿಕ ಪಿಡುಗು ಎಂದು ಗುರುತಿಸಿದ್ದಾರೆ. ಯಾರೋ ಒಬ್ಬರು ಇಂತಹ ಅನಿಷ್ಟ ಪಿಡುಗಿನ ವಿರುದ್ಧ ತಿರುಗಿ ಬಿದ್ದರೆ ಸಾಲದು. ಇಡೀ ಸಮಾಜವೇ ತಿರುಗಿ ಬೀಳಬೇಕು.

ಆಗ ಸಮಾಜದಲ್ಲಿ ಸಮಾನತೆ ಬರುತ್ತದೆ. ನಾವೆಲ್ಲರೂ ಒಂದೇ ಎಂಬ ಮನೋಸ್ಥಿತಿ ಎಲ್ಲರ ಮನಸ್ಸಿನಲ್ಲಿಯೂ ಬರಬೇಕು. ಪಾಪ ಗುತ್ತಿನೊಡತಿ ಸೀತಕ್ಕನವರು ಮರುದಿನ ಬೆಳಿಗ್ಗೆ ಎದ್ದು ನಾನೇ ಹೋಗಿ ಅವರನ್ನು ಕರೆಯೋಣ ಎಂದು ತೀರ್ಮಾನಿಸಿ ಅದರಂತೆ ಬೆಳಿಗ್ಗೆ ತನ್ನ ಮನೆಯ ಆಳು ಚಿನ್ನಮ್ಮನನ್ನು ಕರೆದುಕೊಂಡು ಆ ಕೊರಗರ ಮನೆಗಳಿರುವಂತಹ ಕಾಡಿನ ಅಂಚಿನ ಕಡೆ ಹೋಗಿ ನಿಲ್ಲುತ್ತಾರೆ. ಅದನ್ನು ಕಂಡಂತಹ ಕೊರಗ ಕೊರತಿಯರಿಬ್ಬರೂ ಸಹ ಅವರ ಹತ್ತಿರ ಓಡಿ ಬಂದು ಇನ್ನೂ ಕೆಲವು ಮಾರು ದೂರ ಇರುವಾಗಲೇ ಅಡ್ಡಬಿದ್ದು ನಮಸ್ಕರಿಸಿದರು. ಕೊರಗ ಮತ್ತು ಕೊರತಿಗೆ ಪ್ರೀತಿ-ಗೌರವ ಆದರಗಳಿಗೆ ಆ ಗುತ್ತಿನ ಒಡತಿಯು ಕೂಡ ತಲೆ ಬಾಗುವಂತಾಯಿತು. ಈ ಘಟನೆಗಳು ನಡೆಯುವಂತಹ ಸಮಯದಲ್ಲಿ ಕೇತು ಮನೆಯಲ್ಲಿ ಇರುವುದಿಲ್ಲ.

ಈ ಗುತ್ತಿನ ಒಡತಿಯನ್ನು ಕಂಡರೆ ಆ ಕೊರಗ ಮತ್ತು ಕೊರತಿಗೆ ಏಕೆ ಇಷ್ಟು ಪ್ರೀತಿ ಗೌರವ ಅಂದರೆ ಇವರಿಗೆ ತಿನ್ನಲು ಅನ್ನವಿಲ್ಲದಂತಹ ಕಾಲದಲ್ಲಿ ಈ ಸೀತಕ್ಕನವರು ತನ್ನ ಗಂಡನ ಕಣ್ತಪ್ಪಿಸಿ ದವಸ ಧಾನ್ಯಗಳನ್ನು ನೀಡಿ ಆ ಕುಟುಂಬವನ್ನು ಕಾಪಾಡಿದ್ದಾರೆ. ಅವರ ಋಣ ಈ ಕೊರಗರ ಕುಟುಂಬದ ಮೇಲೆ ಇದ್ದೇ ಇದೆ. ಈ ಋಣದ ವಿಷಯವನ್ನು ಕೊರಗ ಮತ್ತು ಕೊರತಿಯು ತನ್ನ ಮಗ ಕೇತುವಿಗೆ ಅದೆಷ್ಟೋ ಬಾರಿ ಹೇಳಿ ಒಡೆಯರನ್ನು ವಹಿಸಿಕೊಂಡು ಮಾತಾನಾಡಿದ್ದಿದೆ. ಅವೆಲ್ಲವನ್ನೂ ಮನಗಂಡಿದ್ದರೂ ಸಹ ಕೇತುವು ಅದನ್ನು ವಿರೋಧಿಸುತ್ತಿದ್ದನು.

ಕೊರಗರು ಅಥವಾ ದಲಿತರುಗಳು ತಮ್ಮ ಕುಲಕಸುಬಾಗಿ ಈ ಡೋಲು ಬಡಿಯುವುದನ್ನು ಹಿಂದಿನ ಕಾಲದಿಂದಲೂ ನಡೆಸಿಕೊಂಡು ಬಂದಿದ್ದಿದೆ. ಆದ್ದರಿಂದಲೇ ಎಷ್ಟೋ ಕುಟುಂಬಗಳು ತಮ್ಮ ಜೀವನವನ್ನು ಸಾಗಿಸಿದ್ದವು. ಅದನ್ನು ಕುಡ ಈ ಕೇತು ವಿರೋಧಿಸಿದ್ದನು. ಆದರೆ, ಅವರ ತಂದೆ ನಮ್ಮ ಕಾಲದವರೆಗೆ ನಾವು ಈ ಕುಲ ಕಸುಬನ್ನು ಮಾಡುತ್ತೇವೆ ನಂತರ ನಿಮ್ಮಿಷ್ಟ ಮಾಡಿದರೆ ಮಾಡಿ ಬಿಟ್ಟರೆ ಬಿಡಿ ಎಂದೂ ಸಹ ಕೇಳಿಕೊಂಡಿರುತ್ತಾನೆ. ಅದ್ಯಾವುದನ್ನೂ ಅವನು ಒಪ್ಪುವುದಿಲ್ಲ. ಏಕೆಂದರೆ ಅವನ ಕೈಯಲ್ಲಿ ಸರ್ಕಾರಿ ಕೆಲಸವಿದೆ. ಈ ಅಜಲು ಮತ್ತು ಅವರ ಎಂಜಲು ನುಂಗುವ ಮತ್ತು ಅವರ ಶನಿ ಹೊರುವಂತಹ ಶಾಸ್ತ್ರಗಳನ್ನು ನೀವು ನಿಮ್ಮ ತಾಯಿ ಹೊಟ್ಟೆಯಿಂದಲೇ ಹೊತ್ತು ತಂದಿರುವುದಾ ಅದು ಆಚರಣೆ ಮಾತ್ರವಲ್ಲ. ನಮ್ಮ ಕುಲಕ್ಕೆ ಅಂಟಿರುವಂತಹ ಶಾಪ. ಇಂತಹ ಶಾಪದಿಂದ ನಾವು ಮುಕ್ತರಾಗಬೇಕು. ಅದನ್ನು ಮುಂದುವರೆಸಿಕೊಂಡು ಹೋಗಬಾರದು ಎಂದು ಬುದ್ಧಿ ಮಾತನ್ನು ಅವನು ಹೇಳುತ್ತಾನೆ.

ತಮ್ಮ ಮನೆಯ ಮುಂದೆ ಬಂದು ನಿಂತಿರುವಂತಹ ತಮ್ಮ ಗುತ್ತಿನ ಒಡತಿಯನ್ನು ಮಾತನಾಡಲು ಬಿಡದೆ ಈ ಕೊರತಿಯು ನಾನು ನಾಳೆ ಆ ಮಗು ದಾನದ ಶಾಸ್ತ್ರವನ್ನು ನಡೆಸಿಕೊಡುತ್ತೇನೆ. ನೀವು ಧೈರ್ಯವಾಗಿ ಹೋಗಿ ಬನ್ನಿ ಎಂದು ಹೇಳಿ ಕಳುಹಿಸಿ ಮರುದಿನ ತನ್ನ ಮಗನಿಗೆ ಗೊತ್ತಾಗದ ಹಾಗೆ ಅವರು ಆ ಬ್ಯಾಕಾರು ಗುತ್ತಿನ ಒಡೆಯರ ಮನೆಯ ಎದುರಿಗೆ ಬಂದು ಕುಳಿತಿದ್ದಳು. ಆ ವಿಷಯವನ್ನು ಕೇಳಿ ಶೆಟ್ಟರಿಗೆ ನಂಬಲು ಅಸಾಧ್ಯವೆನಿಸಿತ್ತು. ಇತ್ತ ಎಲ್ಲಾ ಅಡುಗೆಗಳನ್ನು ಸಿದ್ಧ ಮಾಡಿಕೊಂಡಿರುವ ಒಡತಿಯವರು ತಂದು ಕೊರತಿಯ ಮುಂದೆ ಇಟ್ಟು ಅವರ ಕಣ್ಣಲ್ಲಿ ನೀರು ಸುರಿಸಿದರು. ಆ ಕೊರತಿಗೆ ಕಾಲಿಗೆ ಅಡ್ಡ ಬೀಳಬೇಕೆನ್ನಿಸಿತು. ಏಕೆಂದರೆ

ಬಡವರಾಗಲಿ ಅಥವಾ ಸಿರಿವಂತರಾಗಲಿ ಆಡಿದ ಮಾತುಗಳನ್ನು ಉಳಿಸಿಕೊಳ್ಳುವುದು ನಿಯ್ಯತ್ತಿನ ಪ್ರತೀಕ. ಹೀಗೆ ಗುತ್ತಿನ ಒಡತಿಯು ಯೋಚಿಸಿ ಕಣ್ಣೀರು ಸುರಿಸಿದರು.

ಅಂದರೆ, ಮನುಷ್ಯನ ನಿಯತ್ತು ಅಥವಾ ನಂಬಿಕೆಗಳನ್ನು ಉಳಿಸಿಕೊಳ್ಳುವರು ಅದು ಬಹಳ ಕಷ್ಟದ ಕೆಲಸ. ಹೀಗೆ ಬಂದಂತಹ ಕೊರತಿಗೆ ಮಗುದಾನ ನೀಡುವ ಶಾಸ್ತ್ರವು ನಡೆಯುತ್ತಿರಬೇಕಾದರೆ ಅಲ್ಲಿಗೆ ಕೊರತಿಯ ಮಗ ಕೇತು ಬಂದು ದುರುದುರು ನೋಡುತ್ತಿರುತ್ತಾನೆ. ಹಾಗೆ ಕೆಂಡಾಮಂಡಲವಾಗಿದ್ದ ಕೇತುವಿಗೆ ಹಂಗಿನ ಋಣದ ಮಾತುಗಳನ್ನು ತನ್ನ ತಾಯಿ ಹೇಳಿ ನನ್ನನ್ನು ವಿಚಲಿತಗೊಳಿಸುತ್ತಿದ್ದಾಳೆ ಎಂದೆನಿಸಿ ಆದರೂ ಅಸ್ಪೃಶ್ಯತೆಯ ಶಾಪದಿಂದ ನರಳುತ್ತಿರುವ ನನ್ನ ಜನಾಂಗವನ್ನು ಮೇಲೆ ಎತ್ತಬೇಕು ಎಂದು ಹೋರಾಡುತ್ತಿದ್ದಂತಹ ಕೇತುವಿನ ಮನಸ್ಸು ವಿಚಲಿತಗೊಂಡಿತು. ಆಗ ಮಗುವನ್ನು ಎತ್ತಿಕೊಂಡಿದ್ದಂತಹ ಗುತ್ತಿನೊಡತಿಯು ನೇರ ಕೇತುವಿನ ಹತ್ತಿರ ಬಂದು "ನೋಡಪ್ಪ ಕೇತು ನಿನ್ನ ನನ್ನ ತಾಯಿಯನ್ನು ಇಲ್ಲಿ ಕರೆತಂದದ್ದು ಈ ಮಗು ನಿನ್ನ ಕೋಪವೇನಿದ್ದರೂ ಸಹ ಇವನ ಮೇಲೆ ತೋರಿಸು. ನನ್ನ ಮೇಲಲ್ಲ" ಎಂದು ಮಗು ಕೈಗಿಟ್ಟಾಗ ಕೇತುವು ಮೂವತ್ತು ವರ್ಷಗಳ ಹಿಂದೆ ಹೊತ್ತಲ್ಲದ ಹೊತ್ತಲ್ಲಿ ಹೀಗೆ ಮಗುವನ್ನು ಮುಟ್ಟಿದ್ದರೆ ಕೈಮೇಲೆ ಕಬ್ಬಿಣದ ಬರೆ ಬೀಳುತ್ತಿತ್ತು ಎಂದು ಹಿಂದಿನ ಕಾಲದ ಶೋಷಣೆಯನ್ನು ಮೆಲುಕು ಹಾಕಿದವನೇ ಮಗುವನ್ನು ಅವರ ಕೈಗಿಟ್ಟು ಈ ಬಾರಿ ನಿಮ್ಮ ಆಸೆಯಂತೆ ಮಾಡಿ ಮುಗಿಸಿಕೊಂಡು ಬಿಟ್ಟರಿ. ಆದರೆ, ಮುಂದೆ ಹೀಗೆ ನಡೆಯಲು ನಾನು ಬಿಡುವುದಿಲ್ಲ. ಕಾಲ ಬದಲಾಗಿದೆ. ನೀವೂ ಕೂಡ ಬದಲಾಗಬೇಕು. ಆಯಸ್ಸು ಇದ್ದರೆ ಮಗುವನ್ನು ಉಳಿಸುವವರು ವೈದ್ಯರು. ಕೊರಗರಲ್ಲ ಎಂದು ಎಚ್ಚರಿಕೆಯ ಮಾತನ್ನು ಹೇಳಿ ಹೊರಟನು.

ಅಂದರೆ ಇಲ್ಲಿ ಕೇತುವೂ ಸಹ ಗುತ್ತಿನೊಡೆಯರ ಮನೆಯ ಹಂಗಿನಲ್ಲಿ ಅವರ ಋಣದಲ್ಲಿ ಮುಳುಗಿ ಎದ್ದಿದ್ದ. ಹಾಗಾಗಿ ಅದನ್ನು ಅವರ ಅಮ್ಮ ನೆನಪಿಸಿ, ಆ ಶಾಸ್ತ್ರ ನಡೆಯಲು ಅನುವು ಮಾಡಿಕೊಟ್ಟರು. ಒಂದು ರೀತಿಯಲ್ಲಿ ಅದುವೂ ಸಹ ನಿಜವೇ. ಆ ಮೇಲು ಜಾತಿಯ ಹೆಂಗಸು ತನ್ನ ಗಂಡನಿಗೆ ಕಾಣದ ಹಾಗೆ ಇವರಿಗೆ ದವಸ ಧಾನ್ಯಗಳನ್ನು ನೀಡಿ ಅಂದಿನ ದಾನದ ಋಣವನ್ನು ಉಳಿಸಿಕೊಂಡಿದ್ದರು.

ಕೊಡೆ ಇಲ್ಲ ಶಿವರಾಯ

ಮಳೆ ಬಂತು ಮರಾಯ
ಕೊಡೆ ಇಲ್ಲ ಶಿವರಾಯ
ಮಳೆ ಬಂತು ಮಾರಾಯ
ಕೊಡೆ ಇಲ್ಲ ಶಿವರಾಯ

ಎಂಬ ಹಾಡಿನೊಂದಿಗೆ ಶುರುವಾಗುವಂತಹ ಈ ಕೊಡೆ ಇಲ್ಲ ಶಿವರಾಯ ಕಥೆಯು ಒಬ್ಬ ಬಡ ಬ್ರಾಹ್ಮಣ ಶಿಕ್ಷಕನ ಜೀವನ ಮತ್ತು ಶಾಲೆಯ ವಾತಾವರಣ ಮತ್ತು ತುಳುನಾಡಿನ ಪ್ರಕೃತಿ ಸೌಂದರ್ಯವನ್ನು ವರ್ಣಿಸುವ ರೀತಿಯಲ್ಲಿ ಮೇಲ್ನೋಟಕ್ಕೆ ಕಂಡರೂ ಕೂಡ ಇಲ್ಲಿ ಜಾತೀಯತೆ, ಬಡತನ, ಭ್ರಷ್ಟಾಚಾರ, ಪಾಪಪ್ರಜ್ಞೆಗಳಂತಹ ಗಂಭೀರ ವಿಚಾರಗಳನ್ನು ಈ ಕಥೆಯು ತೆರೆದಿಡುತ್ತದೆ. ಆ ಕಣಿವೆಪುರದ ಗುಡ್ಡದ ಮೇಲಿರುವ ಶಾಲೆ, ಆ ಗುಡ್ಡದ ಸುತ್ತಲು ಹರಿಯುವ ನದಿ, ಆ ಗುಡ್ಡದ ಮೇಲೆ ಬಗೆಬಗೆಯ ಹೂಗಳನ್ನು ಬಿಡುವಂತಹ ಮರಗಳು ಮತ್ತು ಶಾಲೆಯ

ಪಕ್ಕದಲ್ಲಿಯೇ ಇದ್ದಂತಹ ಪೊಟ್ಟು ಸೀಗೆಯ ಮರ ಮತ್ತು ಅದು ಹೂ ಬಿಡುವ ಕಾಲದ ಸೊಬಗು ಇಂತಹ ಪ್ರಕೃತಿಯ ಸೌಂದರ್ಯದ ನಡುವೆ ಇದ್ದುದ್ದೇ ಆ ಶಾಲೆ.

ಅಂದು ಮೇಷ್ಟ್ರು ಶಾಲೆಗೆ ತಡವಾಗಿ ಮಳೆಯಲ್ಲಿ ನೆನೆದುಕೊಂಡೇ ಬರಲು ಅವರು ಸಾಕಿದ್ದಂತಹ ಕೆಂಪಿ ಎಂಬ ಹಸು ಕಾರಣ. ಜೊತೆಗೆ ಅವರ ಬಡತನ ಕೂಡ ಕಾರಣವೆ. ಹಸು ಹೇಗೆ ಕಾರಣ ಎಂದರೆ ಅದು ಹೋರಿಗೆ ಬಂದು ಮೂರು ದಿನಗಳಾಗಿರುವಾಗ ಅದನ್ನು ಹೋರಿಯ ಪತ್ತಿರ ಕರೆದು ಕೊಂಡು ಹೋಗಲೇ ಬೇಕಿತ್ತು. ಆದರೂ ಅವರು ತಡವಾಗಿ ಹೋರಿಯ ಪತ್ತಿರ ಕರೆದುಕೊಂಡು ಹೋಗುತ್ತಾರೆ. ಕಾರಣ ಅವರ ಬಳಿ ಹೋರಿ ಮಾಲೀಕ ವೆಂಕಪ್ಪಾಚಾರಿಗೆ ನೀಡುವಷ್ಟು ಹಣವಿಲ್ಲದ ಕಾರಣ ಅವರು ತಡ ಮಾಡಿರುತ್ತಾರೆ. ಕೊನೆಗೆ ಕರೆದೊಯ್ಯುತ್ತಾರೆ. ಈ ಎಲ್ಲ ವ್ಯವಹಾರಗಳನ್ನು ಮುಗಿಸಿ ಶಾಲೆಯ ಮುಖ ನೋಡುವುದು ಮೇಷ್ಟ್ರಿಗೆ ತಡವಾಗುತ್ತದೆ.

ಇತ್ತ ಮೇಷ್ಟ್ರು ಇಷ್ಟು ಹೊತ್ತಾದರೂ ಶಾಲೆಯ ಕಡೆಗೆ ಬಾರದಿರುವುದನ್ನು ಕಂಡ ಮಕ್ಕಳು ಸುರಿಯುತ್ತಿದ್ದ ಮಳೆಯಲ್ಲಿ ನೆನೆದು ಆಟವನ್ನು ಆಡಲು ಪ್ರಾರಂಭಿಸಿದ್ದವು. ಹೀಗೆ ಮಕ್ಕಳು ಪ್ರಕೃತಿಯ ಮಡಿಲಿನಲ್ಲಿ ಜಲ ಕ್ರೀಡೆಯನ್ನು ತೊಡಗಿದ್ದಾಗ ಮೇಷ್ಟ್ರು ಶಿವರಾಯರು ಮಳೆಯಲ್ಲಿಯೇ ನೆನೆದುಕೊಂಡು ಬರುವುದ ಕಂಡು ಮೈಮರೆತು ಅವರು ಈ ಮೇಲೆ ತಿಳಿಸಿದ ಹಾಡನ್ನು ಹಾಡುತ್ತಾ ಆಡುತ್ತಾ ನಲಿಯುತ್ತಿದ್ದವು. ಈ ರೀತಿ ಹಾಡು ಹಾಡುತ್ತ ಇದ್ದ ಮಕ್ಕಳನ್ನು ನೋಡಿ ಮೇಷ್ಟ್ರಿಗೆ ತಮ್ಮ ವೃತ್ತಿ ಗೌರವಕ್ಕೆ, ವ್ಯಕ್ತಿತ್ವಕ್ಕೆ ಎಲ್ಲೋ ಮಸಿ ಓಡಿಯುತ್ತಿದೆ ಎಂಬ ಆತಂಕ ಅವರನ್ನು ಕಾಡುತ್ತಿತ್ತು. ಅಥವಾ ಈ ಮಕ್ಕಳು ನನ್ನನ್ನು ಲೇವಡಿ ಮಾಡಿ ಅವಮಾನ ಮಾಡುತ್ತಿವೆ ಏನೋ ಅನ್ನಿಸುತ್ತಿತ್ತು. ಆದರೆ ಅವರಿಗೆ ಅಸಹಾಯಕತೆ ಇನ್ನೊಂದೆಡೆ ಇತ್ತು. ಈ ರೀತಿಯಾಗಿ ಒದ್ದೆಯಾಗಿ ಶಾಲೆಗೆ ಮೇಷ್ಟ್ರು ಬಂದರೆ, ಆ ದಿನ ಶಾಲೆಗೆ ಖಂಡಿತ ರಜಾ ಸಿಗುತ್ತದೆ ಎನ್ನುವಂತಹ ಹಂಬಲದಲ್ಲಿ ಮಕ್ಕಳಿದ್ದರು. ಇದರ ಅರ್ಥ ಏಕೋಪಾಧ್ಯಾಯರು ಇರುವಂತಹ ಶಾಲೆಗಳು ಈ ಸೀಮೆಯಲ್ಲಿ ಹಲವಾರು ಕಾರಣ ಸಿಗುತ್ತವೆ. ಅಂತಹ ಶಾಲೆಗಳ ಶಿಕ್ಷಕರುಗಳಿಗೆ ಅತ್ಯಗತ್ಯವಾದ ಕೆಲಸ ಕಾರ್ಯಗಳಿದ್ದರೆ, ಶಿಕ್ಷಕರಿಗೆ ನೆರೆ ಕೆರೆಯ ಜನರು, ಸಂಬಂಧಿಕರಲ್ಲಿ ಊಟಕ್ಕೆ ಆಹ್ವಾನವಿದ್ದರೆ ಮತ್ತು ಈ ಏಕೋಪಾಧ್ಯಾಯ ಶಾಲೆಯ ಶಿಕ್ಷಕರ ಹೆಂಡತಿಯರು ತಿಂಗಳ ರಜಾ ಎಂದು ಹೊರ ಕೂತರೂ ಸಹ ಈ ಶಾಲೆಯ ಮಕ್ಕಳಿಗೆ ಅಂದು ರಜೆ. ಹೀಗೆ ಶಾಲೆಯ ಸ್ಥಿತಿಯು ಮತ್ತು ಮಕ್ಕಳ ಸ್ಥಿತಿಗತಿಗಲು ಈ ರೀತಿ ಇರುತ್ತವೆಂದು ಈ ಕಥೆಯಲ್ಲಿ ತೋರಿಸಿದ್ದಾರೆ.

ಮತ್ತೊಂದು ವಿಷಯದ ಪ್ರಸ್ತಾಪವನ್ನು ಲೇಖಕಿಯು ಮಾಡಿದ್ದಾರೆ. ಅದೇನೆಂದರೆ ಆ ಶಿವರಾಯ ಮೇಷ್ಟ್ರು. ಮದನ ಮೂಲ್ಯ ಎಂಬ ಒಬ್ಬ ದಲಿತರ ಹುಡುಗನನ್ನು ಅವನಿಗೆ ಮೀಸೆ ಚಿಗುರುವ ವಯಸ್ಸಾದರೂ ಕೂಡ ಅವನನ್ನು ಪಾಸು ಮಾಡದೆ ಫೇಲ್ ಮಾಡಿಕೊಂಡು ಬರುತ್ತಾ, ತಮ್ಮ ಮನೆಯ ಕೆಲಸಗಳನ್ನು ಮತ್ತು ಶಾಲೆಯ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿರುತ್ತಾರೆ. ಇವುಗಳಿಗಿಂತಾ ಒಂದು ಹೆಜ್ಜೆ ಮುಂದೆ ಹೋಗಿ ಆ ಹುಡುಗನ ಕೈಯಲ್ಲಿ ತನ್ನ ಕಾಲಲ್ಲಿ ಇರುವಂತಹ ಮೊಳೆಗಳನ್ನು ಒತ್ತಿ ಅವನ ಮನಸ್ಸನ್ನು ತಣಿಸುವಂತಹ ಕೆಲಸಕ್ಕೂ ಸಹ ಶಾಲೆಯ ಮಕ್ಕಳನ್ನು ಉಪಯೋಗಿಸುತ್ತಿದ್ದರು. ಅದರಲ್ಲೂ ಸಹ ಆ ದಲಿತರ ಮದ ಮೂಲ್ಯನಿಗೆ ಮೊದಲ ಆದ್ಯತೆಯನ್ನು ನೀಡುತ್ತಿದ್ದರು.

ಹೀಗೆ ತನ್ನ ಸ್ವಾರ್ಥಕ್ಕಾಗಿ ಆ ಮೇಷ್ಟ್ರು ವಿದ್ಯಾರ್ಥಿಗಳ ಭವಿಷ್ಯದ ಜೊತೆಯಲ್ಲಿ ಆಟವಾಡುವುದು ಎಷ್ಟರಮಟ್ಟಿಗೆ ಸರಿ ಎಂದು ಯೋಚಿಸಬೇಕಾದಂತಹ ವಿಷಯ. ಒಬ್ಬ ಉತ್ತಮ ಶಿಕ್ಷಕನಿಗೆ ಇರಬೇಕಾದಂತಹ ಮುಖ್ಯ ಗುರಿ ಎಂದರೆ ತನ್ನ ವಿದ್ಯಾರ್ಥಿಗಳ ಏಳಿಗೆ ಮತ್ತು ಅವರನ್ನು ಸಮಾಜದಲ್ಲಿ ಉತ್ತಮ ಪ್ರಜೆಯನ್ನಾಗಿ ಪರಿವರ್ತಿಸುವುದಗಿರುತ್ತದೆ. ಆದರೆ, ಈ ಕರಾವಳಿ ಸೀಮೆಯಲ್ಲಿ ಮಾತ್ರವಲ್ಲದೆ, ಗ್ರಾಮೀಣ ಭಾಗದಲ್ಲಿ ಕಂಡು ಬರುವ ಇತರೆ ಪ್ರಾಥಮಿಕ ಏಕೋಪಾಧ್ಯಾಯ ಶಾಲೆಗಳಲ್ಲಿಯೂ ಸಹ ಇದು ಸರ್ವೇ ಸಾಮಾನ್ಯದ ವಿಷಯ. ಇದೊಂದು ಸಾಮಾಜಿಕ ಸಮಸ್ಯೆ ಎಂದರೆ ತಪ್ಪಾಗಲಾರದೇನೋ ಅನಿಸುತ್ತದೆ.

ಹೀಗೆ ಆ ದಿನ ಶಾಲೆಗೆ ರಜೆ ಕೊಡಬೇಕೋ ಬೇಡವೊ ಎಂಬ ಗೊಂದಲದಲ್ಲಿದ್ದಂತಹ ಶಿವರಾಯ ಮೇಷ್ಟ್ರ ನೆನಪಿಗೆ ಬಂದದ್ದು ಇನ್ಸ್‌ಪೆಕ್ಟರ್. ಏಕೆಂದರೆ ಈ ಹಿಂದೆ ಇವರ ರೀತಿಯ ಗೋಪು ಮೇಷ್ಟ್ರಿಗೆ ಅಲ್ಲಿನ ಹೊರ ಇನ್ಸ್‌ಪೆಕ್ಟರ್‌ರು ದಿಢೀರನೆ ಶಾಲೆಗೆ ಬಂದು ಆ ಶಾಲೆಯಲ್ಲಿ ಶಿಕ್ಷಕರಿಲ್ಲದ್ದನ್ನು ಕಂಡು ಅವರನ್ನು ಕರೆಸಿ ಸ್ವಲ್ಪ ತರಾಟೆಗೆ ತೆಗೆದುಕೊಂಡಿರುತ್ತಾರೆ. ಅದನ್ನು ಆ ಗೋಪು ಮೇಷ್ಟ್ರು ಈ ಶಿವರಾಯ ಮೇಷ್ಟ್ರಿಗೆ ಸಂತೆಯಲ್ಲಿ ಸಿಕ್ಕಿ ವಿವರಿಸಿರುತ್ತಾರೆ.

ಅದು ಹೇಗೆ ಎಂದರೆ "ಅವ ಬಿಸಿರಕ್ತದವನು, ಹುಡುಗ ಪ್ರಾಯದವ, ನೋಡಲು ಕರ್‍ರಗಿದ್ದಾನೆ, ಭಾಷೆ ಮೋಡಿ ಮಾತು, ಪಸೆಯಿಲ್ಲದ ಕರಿ ಮುಸುಡು ನೋಡಿದರೆ ಗಟ್ಟದ ಹೊಲೆಯನಂತಿದ್ದಾನೆ. ಅದಕ್ಕೆ ನಮ್ಮ ನಿಮ್ಮಂಥ ಬಡ ಬ್ರಾಹನರ ಕುತ್ತಿಗೆ ಅಮುಕುವ ಕೆಲಸ ಆತನದ್ದು. ನಾನೇನೋ ಸಿಕ್ಕಿಬಿದ್ದೆ ನೀವಾದರೂ ಜಾಗ್ರತೆ" ಎಂದು ಎಚ್ಚರಿಕೆಯ ವಿವರಣೆಯನ್ನು ಗೋಪು ಮೇಷ್ಟ್ರು ಶಿವರಾಯರಿಗೆ ನೀಡಿರುತ್ತಾರೆ. ಆ ಭಯ ಈ ಇವರಲ್ಲಿ ನಡುಕ ಹುಟ್ಟಿಸಿರುತ್ತದೆ.

ಆ ಇನ್ಸ್‌ಪೆಕ್ಟರ್‌ರ ಕಾರಣದಿಂದ ಆ ದಿನ ಶಾಲೆಗೆ ರಜೆಯನ್ನು ನಿರಾಕರಿಸಿರುತ್ತಾರೆ. ಈ ರೀತಿ ರಜೆ ಕೊಡದೇ ಶಾಲೆ ನಡೆಸುತ್ತಿರಬೇಕಾದರೆ ಇನ್ಸ್‌ಪೆಕ್ಟರ್‌ರು ಬಂದೇ ಬಿಡುತ್ತಾರೆ. ಬಂದು ಸೀದಾ ಕೊನೆ ಬೆಂಚಿನ ಉಸ್ಮಾನನನ್ನು ಕರೆದು ಒಂದು ಪದ್ಯ ಹೇಳೂ ಎಂದಾಗ ಆ ಹುಡುಗ ಅವನು ಅಭ್ಯಿಸಿದ್ದಂತಹ "ಅಮಲನ ಕಥೆ"ಯ ಪದ್ಯವನ್ನು ಹೇಳುತ್ತಾನೆ. ಆ ಪದ್ಯದಲ್ಲಿ ಮುಳುಗಿ ಹೋದಂತಹ ಇನ್ಸ್‌ಪೆಕ್ಟರ್‌ರು ತಾವು ಬಂದಂತಹ ಕಾರ್ಯವನ್ನು ನೆನಪಿಸಿಕೊಂಡು ಆ ಶಾಲೆಯಲ್ಲಿದ್ದಂತಹ ದಲಿತ ಮಕ್ಕಳ ವಿಷಯವನ್ನು ಕೇಳಿದಾಗ ಮೇಷ್ಟ್ರ ಎದೆಯಲ್ಲಿ ನಡುಕ ಶುರುವಾಗುತ್ತದೆ. ಆ ವಿಚಾರವನ್ನು ಅಲ್ಲಿಯೇ ಬಿಡದೆ, ಈ ಶಾಲೆಯಲ್ಲಿರುವ ಹೊಲೆ ಮಾದಿಗರ ಮಕ್ಕಳ ದಾಖಲಾತಿ ಅವರಿಗೆ ಅದೇ ಮೊದಲ ಬಾರಿಗೆ ಮಂಜೂರಾದ ವಿದ್ಯಾರ್ಥಿ ವೇತನದ ಬಗ್ಗೆ, ಆ ಹಣ ಸಾವಿರದ ಇನ್ನೂರು ರೂಪಾಯಿಯ ಹಂಚಿಕೆ ಆಗಿದೆಯೇ ಎಂದು ಏನೇನೋ ಪ್ರಶ್ನೆಗಳನ್ನು ಕೇಳಿದಾಗ ಶಿವರಾಯರ ಮನಸ್ಸಿನಲ್ಲಿ ಊರ ದೆವ್ವ ಪಿಶಾಚಿಗಳೆಲ್ಲ ಬಂದು ಲಾಗ ಹಾಕುತ್ತಿರುವಂತೆ ಅನುಭವ ಆಗಿತ್ತು.

ಯಾವ ವಿಷಯವನ್ನು ಇನ್ಸ್‌ಪೆಕ್ಟರ್‌ರು ಕೇಳಬಾರದು ಎಂದು ಮೇಷ್ಟ್ರು ದೇವರಲ್ಲಿ ಹರಕೆ ಹೊತ್ತಿದ್ದರೋ, ಇವರು ಆ ವಿಷಯಗಳನ್ನೇ ನೇರವಾಗಿ ಕೇಳಿದ್ದರಿಂದ, ಮೇಷ್ಟ್ರು ಗಡಗಡ ನಡುಗಲಾರಂಭಿಸಿದರು. ಅದಕ್ಕೆ ಕಾರಣವೇನೆಂದರೆ ಆ ದಲಿತ ಮಕ್ಕಳಿಗೆ ಎಂದು ಬಂದಿದ್ದಂತಹ ವಿದ್ಯಾರ್ಥಿ ವೇತನವನ್ನು ಶಿವರಾಯ ಮೇಷ್ಟ್ರು ಮಕ್ಕಳಿಗೆ ವಿತರಿಸದೇ ತಮ್ಮ ಸ್ವಂತ ಖರ್ಚಿಗೆ ಬಳಕೆ ಮಾಡಿಕೊಂಡಿರುತ್ತಾರೆ. ಆದರೆ, ಇದ್ಯಾವುದೇ ವಿಷಯಗಳು

ಮೇಷ್ಟ್ರು ಹೇಳದೇ ಇನ್ಸ್‌ಪೆಕ್ಟರ್‌ರಿಗೆ ಸ್ವತಃ ತಿಳಿಯಿತು. ಅಂದರೆ, ಒಬ್ಬ ಶಿಕ್ಷಕ ಯಾವ ಕೆಲಸವನ್ನು ಮಾಡಬಾರದು ಎಂದು ಮಕ್ಕಳಿಗೆ ಹೇಳಿರುತ್ತಾರೆಯೋ ಅಂತಹ ಕೆಲಸವನ್ನು ಸ್ವತಃ ತಾವೇ ಮಾಡಿದಾಗ ಅಂತಹವರಿಂದ ಗುಣಮಟ್ಟದ ಶಿಕ್ಷಣವನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಆದರೆ, ಅದು ಶಿವರಾಯ ಮೇಷ್ಟ್ರು ಬೇಕು ಬೇಕು ಎಂದು ಮಾಡಿದಂತಹ ಕೆಲಸವಲ್ಲ. ಸಂದರ್ಭದ ಬಲೆಗೆ ಸಿಕ್ಕಿ ಮೇಷ್ಟ್ರು ಆ ಹಣವನ್ನು ಬಳಸಿಕೊಳ್ಳುವಂತಾಗಿರುತ್ತದೆ. ಅದನ್ನು ವಿಚಾರಿಸಲೆಂದು ಬಂದಂತಹ ಇನ್ಸ್‌ಪೆಕ್ಟರ್‌ರು ಕೇಳಿದಾಗ ಅವರ ಎದುರಿಗೆ ನಿಂತು ಮೇಷ್‌ರು ದುಮುದುಮು ಕಣ್ಣೀರನ್ನು ಧುಮುಕಿಸುತ್ತಿರುತ್ತಾರೆ. ಅವರ ಮುಖ ನೋಡಿದ ಇನ್ಸ್‌ಪೆಕ್ಟರ್‌ರು ತಮ್ಮ ಬ್ಯಾಗನ್ನು ಹಿಡಿದು ಹೊರಡಲು ಎದ್ದು ನಿಂತು "ಏನ್ರಿ ಮೇಷ್ಟ್ರೇ ಅಳ್ತಿದ್ದೀರ, ನಿಮ್ಮೊಳಗೆ ಒಬ್ಬ ಒಳ್ಳೆಯ ಮನುಷ್ಯನಿದ್ದಾನೆ. ಅವನನ್ನು ಸಾಯಿಸ್ಬೇಡಿ, ಮತ್ತೊಮ್ಮೆ ನಿಮ್ಮಿಂದ ಇಂತಹ ತಪ್ಪಾಗ್ಬಾರ್ದು ನೋಡಿ, ಖರ್ಚು ಮಾಡಿದ ಹಣ ತಂದು ಜಮಾ ಮಾಡಿ" ಎಂದು ಹೇಳಿ ಹೊರಟು ಹೋಗುತ್ತಾರೆ. ಆದರೆ ಅವರ ಮನಸ್ಸಿನಲ್ಲಿ ಅಮಲನ ಕಥೆ ತುಳುಕಾಡುತ್ತಿರುತ್ತದೆ. ಇಂತಹ ಸಂದರ್ಭದಲ್ಲಿ ಇನ್ಸ್‌ಪೆಕ್ಟರ್‌ರಿಗೆ ಗೊತ್ತಿತ್ತು ಶಿವರಾಯ ಮೇಷ್ಟ್ರು ಒಳ್ಳೆಯವರೆಂದು. ಆದರೂ ಅವರು ತಪ್ಪು ಮಾಡಿದ್ದಾರೆ. ಅದನ್ನು ನಿಯಮದ ಪ್ರಕಾರ ವಸೂಲಿ ಮಾಡಿ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವಂತಹ ಅಧಿಕಾರ ಅವರಿಗಿತ್ತು. ಅವರು ಅದೇ ಹುಮ್ಮಸ್ಸಿನಿಂದ ಬಂದಿರುತ್ತಾರೆ. ಆದರೆ, ಇಲ್ಲಿ ಬಂದ ಮೇಲೆ ಮಕ್ಕಳ ಶೈಕ್ಷಣಿಕ ಮಟ್ಟವನ್ನು ಗಮನಿಸಿ ಅವರು ಬೆರಗಾಗಿ ಹೋಗುತ್ತಾರೆ. ಕಾರಣ ಯಾವುದೇ ಏಕೋಪಾಧ್ಯಾಯ ಶಾಲೆಗಳಲ್ಲಿ ಅಷ್ಟು ಗುಣಮಟ್ಟದ ಶಿಕ್ಷಣವು ದೊರೆಯುವುದು ಅನುಮಾನ. ಏಕೆಂದರೆ, ಒಬ್ಬರೇ ಶಿಕ್ಷಕರು ಒಂದರಿಂದ ನಾಲ್ಕನೇಯ ತರಗತಿಯವರೆಗಿನ ಎಲ್ಲಾ ಮಕ್ಕಳಿಗೂ ಕಲಿಸುವ ಹೆಚ್ಚಿನ ಹೊರೆ ಅವರ ಮೇಲಿರುತ್ತದೆ. ಆದರೆ, ವಾಸ್ತವದಲ್ಲಿ ಶಿವರಾಯ ಮೇಷ್ಟ್ರು ಅದನ್ನು ಸುಳ್ಳು ಮಾಡಿದ್ದಾರೆ.

ಜಾತಿ ವಿಷಯ ಬಂದಾಗ ಗೋಪು ಮೇಷ್ಟ್ರು ಶಿವರಾಯ ಮೇಷ್ಟ್ರು ಇಬ್ಬರೂ ಕೂಡ ಬ್ರಾಹ್ಮಣರು. ಅಂದರೆ ಮೇಲು ಜಾತಿಯವರು ಆದರೆ, ಹುದ್ದೆಯ ವಿಷಯಕ್ಕೆ ಬಂದರೆ ಇನ್ಸ್‌ಪೆಕ್ಟರ್‌ರು ಕಪ್ಪಗಿರುವ ಕಾರಣ ಅವರನ್ನು ಘಟ್ಟದ ಹೊಲೆಯನಂತಿದ್ದಾನೆ ಎಂದು ಬಿಡುತ್ತಾರೆ. ಅಂದರೆ ಅವರು ಕೆಳ ಜಾತಿಗೆ ಸೇರಿದ ವ್ಯಕ್ತಿ ಎಂಬುದು. ಇಂತಹ ವಿಷಯಗಳು ಗೋಪು ಮೇಷ್ಟ್ರು ಮತ್ತು ಶಿವರಾಯ ಮೇಷ್ಟ್ರು ತಲೆಯಲ್ಲಿ ತೂಗುತ್ತವೆ. ಆದರೆ, ಇನ್ಸ್‌ಪೆಕ್ಟರ್‌ರು ನಿಜವಾಗಲೂ ಕೆಳಜಾತಿಯ ವ್ಯಕ್ತಿಯೇ ಎಂಬುದು ಯಾರಿಗೂ ಗೊತ್ತಿಲ್ಲ. ವಾಸ್ತವದಲ್ಲಿ ಆ ಅಧಿಕಾರಿಯು ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಲನ್ನು ಗಮನಿಸಿ ಆ ಅಮಲನ ಕಥೆಯ ಅಮಲಿನಲ್ಲಿ ಅಧಿಕಾರಿಯು ಮಗ್ನರಾಗಿರುತ್ತಾರೆ. ನಿಜವಾಗಲೂ ಇಸ್ಸ್‌ಪೆಕ್ಟರ್ ಸಾಹೇಬ್ರು, ಶಿವರಾಯ ಮತ್ತು ಗೋಪು ಮೇಷ್ಟ್ರು ಅಂದುಕೊಂಡಂತೆ ದಲಿತರಾಗಿದ್ದರೆ, ಅವರು ಶಿವರಾಯ ಮೇಷ್ಟ್ರ ಮೇಲೆ ಕ್ರಮವನ್ನು ಜರುಗಿಸಬಹುದಿತ್ತು. ಅವರು ದಲಿತೇತರರಾಗಿದ್ದರೂ ಕೂಡ ಕ್ರಮ ಕೈಗೊಳ್ಳಬಹುದಿತ್ತು. ಆನರೆ, ಅವರಲ್ಲಿ ಮಾನವೀಯತೆಯ ಗುಣ ಮತ್ತು ಕಷ್ಟ ಬಡತನಗಳನ್ನು ಅರಿತಿರುವಂತಹ ಗುಣಗಳಿದ್ದವು. ಹಾಗಾಗಿ ಶಿವರಾಯ ಮೇಷ್ಟ್ರು ಮೇಲೆ ಯಾವುದೇ ರೀತಿಯ ಕ್ರಮ ಜರುಗಿಸದೆ ಎಚ್ಚರಿಕೆಯನ್ನು ನೀಡಿ ಹೊರಟು ಬಿಡುತ್ತಾರೆ.

ಇತ್ತ ತಮ್ಮ ಮನಸ್ಸಿನಲ್ಲಿ ಇನ್ಸ್‌ಪೆಕ್ಟರ್ ಎಂದರೆ ಮೊದಲೇ ವೈರಿಯಂತೆ ಭಯ ಪಡುತ್ತಿದ್ದಂತಹ ಮಕ್ಕಳ ಮನಸ್ಸಿನಲ್ಲಿ ತಮ್ಮ ಕಣ್ಣೆದುರಿಗೆ ತಮ್ಮ ಶಿವರಾಯ ಮೇಷ್ಟ್ರು ಕಣ್ಣಲ್ಲಿ ನೀರನ್ನು ತರಿಸಿದಂತಹ ಇನ್ಸ್‌ಪೆಕ್ಟರ್ ಮತ್ತಷ್ಟು

ಖಳನಾಯಕರಾದರು. ಆದರೆ, ಅದಾವುದನ್ನು ಮನಸ್ಸಿನ ಆಳಕ್ಕೆ ಇಳಿಸಿಕೊಳ್ಳದಮತಹ ಮುಗ್ಧ ಮಕ್ಕಳು ಜಿಟಜಿಟಿ ಸುರಿಯುತ್ತಿದ್ದ ಮಳೆಯಲ್ಲಿ ತಮ್ಮ ಹಳೆಯ ರಾಗವನ್ನು ಹಾಡಲಾರಂಭಿಸಿದರು.

ಜಗಲಿಯಲ್ಲಿದ್ದಂತಹ ಶಿವರಾಯ ಮೇಷ್ಟ್ರು ಮೆಲ್ಲಗೆ ಜಗುಲಿ ಇಳಿದು ಹೊರಟಾಗ ಆ ಹಾಡು ಹಾಡುತ್ತಿದ್ದಂತಹ ಮಕ್ಕಳಲ್ಲಿ ತನ್ನ ಕೊನೆ ಮಗ ಕೂಡ ಸೇರಿಕೊಂಡು ಹಾಡುವುದನ್ನು ಮೌನವಾಗಿ ದಿಟ್ಟಿಸಿ ಮುಂದೆ ನಡೆಯುತ್ತಾರೆ. ಆದರೆ, ಅಲ್ಲಿನ ಘಟನೆಗಳ ಬಗೆಗೆ ಅರಿವಿಲ್ಲದಂತಹ ಪುಟ್ಟ ಪುಟ್ಟ ಮಕ್ಕಳುಗ ಮಳೆಯ ನೀರಿನಲ್ಲಿ ಆಟವಾಡುತ್ತಾ ಲಯಬದ್ಧವಾಗಿ ಪ್ರಾಸ ಬರುವಂತೆ ಹಾಡನ್ನು ಹಾಡುತ್ತಿದ್ದರು.

ಮಳೆ ಬಂತೂ ಮಾರಾಯ......

ಕೊಡೆ ಬೇಕಾ ಶಿವರಾಯ......

ಶಿಕ್ಷೆಗಿಂತ ಮಾತಿನ ದಂಡನೆ ಮೇಷ್ಟ್ರ ಪ್ರಾಮಾಣಿಕತೆಯನ್ನು ಓರೆಗೆ ಹಚ್ಚಿದ ಕಥಾತಂತ್ರ ಚೆನ್ನಾಗಿದೆ. ತಪ್ಪಾಗುವುದು ಮಾನವ ಸಹಜ. ಆದರೆ, ಅದನ್ನು ಮನ್ನಿಸಿ ಪಶ್ಚಾತ್ತಾಪ ಪಟ್ಟವರಿಗೆ ಕಾನೂನಿಗೆ ಮೀರಿದ ಹೃದಯದ ಕಾನೂನಿನ ದಯೆ ಸ್ವಾಗತಾರ್ಹ ಎಂಬುದನ್ನು ಕಥೆ ಹೇಳಿದೆ.

ಬಸಿರು

ಬಸಿರು ಎನ್ನುವಂತಹ ಪ್ರಕೃತಿ ಕೈಂಕರ್ಯಕ್ಕೆ ಬಡವರು, ಸಿರಿವಂತರೂ ಎನ್ನುವ ಭೇಧ ಇಲ್ಲ. ಆದರೆ, ಈ ಬಸಿರು ಬಂದಂತಹ ಸಂದರ್ಭದಲ್ಲಿ ಮಹಿಳೆಯರಿಗೆ ಸಾಮಾನ್ಯವಾಗಿ ಬಯಕೆಗಳು ಕಂಡು ಬರುವುದು ಸಹಜ. ಅಂತಹ ಬಯಕೆಗಳು ಬಡತನ ಸಿರಿತನಕ್ಕೆ ತಕ್ಕಂತೆ ಇರಬೇಕು. ತಮ್ಮ ತಮ್ಮ ಶಕ್ತಿ ಸಾಮರ್ಥ್ಯಗಳನ್ನು (ಆರ್ಥಿಕವಾಗಿ) ಮೀರಿದಂತಹ ಬಯಕೆಗಳು ಬಂದರೆ ಅಂತಹ ಬಯಕೆಗಳಿಂದ ಇಕ್ಕಟ್ಟಿಗೆ ಸಿಲುಕಿಕೊಳ್ಳುವುದು ಮಾತ್ರ ಗಂಡಂದಿರು. ಈ ಬಸಿರು ಎಂಬ ಕಥೆಯಲ್ಲಿಯೂ ಸಹ ಇಂಥದ್ದೆ ಇಕ್ಕಟ್ಟು. ಕುಪ್ಪ ಎನ್ನುವಂತಹ ಕೆಳಜಾತಿಗೆ ಸೇರಿದವನ ಹೆಂಡತಿಗೆ ಬಸಿರು ಬಂದು ಅದರಿಂದ ಬಯಕೆಗಳು ಬೆಳೆದು ಆ ಬಡ ಕುಟುಂಬ ಸಂಕಷ್ಟಕ್ಕೆ ಸಿಲುಕಿ ಹಾಕಿಕೊಳ್ಳುವುದೇ ಕಥೆಯ ಮುಖ್ಯ ಆಶಯವಾದರೂ ಸಹ ತುಳುನಾಡಿನ ದಲಿತರು ಅಂದರೆ ಕೆಳ ಜಾತಿಗೆ ಸೇರಿದಂತಹವರ ಕುಟುಂಬಗಳು ಅವರ ಕುಲ ಕಸುಬುಗಳು, ಅವರ ಆಚಾರ ವಿಚಾರ ಸೇರಿದಂತೆ ಮೇಲುಜಾತಿಯವರುಗಳಿಂದ ಅನುಭವಿಸುವಂತಹ ಶೋಷಣೆ, ಅವಮಾನ ಹೀಗೆ ಅವರ ಸಂಪೂರ್ಣ ಜೀವನದ ಚಿತ್ರಣವನ್ನೇ ತೆರೆದಿಡುವ ಕಥೆ ಈ ಬಸಿರು.

ಈ ರೀತಿ ಕತೆಯ ಕೇಂದ್ರ ಬಿಂದುವಾಗಿರುವಂತಹ ಬಸಿರು ಆ ಬಡಕುಟುಂಬಕ್ಕೆ ಹೊಸದೇನು ಅಲ್ಲ. ಅದು ಮೊದಲೆಲ್ಲ ಹೀಗೆ ನಿಂತು ಸ್ವಲ್ಪ ದಿನಗಳ ನಂತರ ಅದು ಜಾರಿ ಹೋಗಿ ಬಿಡುತ್ತದೆ. ಈ ಕಥೆಯಲ್ಲಿ ತಿಳಿಸಿರುವಂತೆ ಹೀಗೆ ನೀರು ನಿಂತು ನಂತರ ಜಾರುವುದಕ್ಕೆ ಆ ಬಸುರಿಯ ಬಯಕೆಗಳನ್ನು ಸಂಪೂರ್ಣವಾಗಿ ಮತ್ತು ಸರಿಯಾಗಿ ಈಡೇರಿಸದಿರುವುದೇ ಪ್ರಮುಖ ಕಾರಣ ಎಂದು ಅಲ್ಲಿನ ಜನರುಗಳ ನಂಬಿಕೆಯಾಗುತ್ತದೆ. ಆದರೆ, ನಿಜವಾದ ಕಾರಣವೇನೆಂದರೆ ಅಂತಹ ಬಸಿರು ನಿಂತಾಗ ಅದಕ್ಕೆ ತಕ್ಕಂತೆ ಚಿಕಿತ್ಸೆಯನ್ನು ನೀಡಿಸಿ ವೈದ್ಯರ

ಬಳಿ ಹೋಗಿ ಪರೀಕ್ಷಿಸಿ ಸರಿಯಾದ ಔಷಧೋಪಚಾರಗಳನ್ನು ನೀಡಿ ಆರೈಕೆ ಮಾಡಿದರೆ, ಆ ರೀತಿ ನಿಂತ ಬಸಿರು ಆರೋಗ್ಯಪೂರ್ಣವಾದ ಹೆರಿಗೆಗೆ ಕಾರಣವಾಗುತ್ತದೆ. ಈ ಕಥೆಯಲ್ಲಿ ಒಮ್ಮೆ ಕುಪ್ಪನಿಗೆ ಗೌಡ ಡಾಕ್ಟ್ರ ಹೇಳಿದ ಮಾತು ನೆನಪಿಗೆ ಬರುತ್ತದೆ. ಅಂತ ಹೇಳಿದ್ದಾರೆ. ಅಂದರೆ ಆ ಕುಪ್ಪ ವೈದ್ಯರ ಬಳಿ ತೋರಿಸಿದ್ದಾನೆ. ಆದರೆ, ಅದರ ಔಷಧೋಪಚಾರ ಮತ್ತು ಆರೈಕೆಗಳು ಸರಿಯಾದ ರೀತಿಯಲ್ಲಿ ಆಗಿರುವುದಿಲ್ಲ. ಅದಕ್ಕೆ ಅವರ ಹೊತ್ತು ತಿನ್ನುವಂತಹ ಬಡತನ ಮತ್ತು ಅನಕ್ಷರತೆ ಪ್ರಮುಖ ಕಾರಣವಾಗಿದೆ.

ಸಾಮಾನ್ಯವಾಗಿ ದಲಿತರ ಮಹಿಳೆಯರೂ ಕೂಡ ಆಗಾಗ ಮದ್ಯಪಾನವನ್ನು ರೂಡಿಸಿ ಕೊಂಡಿರುತ್ತಾರೆ. ಅದು ಕೆಲವರಿಗೆ ಚಟವಾಗಿ ಪರಿಣಮಿಸಿ ಪ್ರತಿದಿನದ ಕಾಯಕವಾಗಿ ಬಿಟ್ಟಿರುತ್ತದೆ. ಇನ್ನೂ ಕೆಲವರಿಗೆ ಆಗಾಗ ಮಾತ್ರ. ಇಲ್ಲಿ ಬಸಿರು ನಿಂತಿರುವಂತಹ ಕುಪ್ಪನ ಹೆಂಡತಿ 'ಜೀಯಲು'ವಿಗೂ ಕೂಡ ಕಳ್ಳು (ತೆಂಗಿನ ಅಥವಾ ಈಚಲು ಮರ ಅಥವಾ ತಾಳೆ ಮರದ ಹೆಂಡ) ವನ್ನು ಕುಡಿಯಬೇಕು ಎನ್ನುವಂತಹ ಬಯಕೆಯಿಂದ ಆಕೆಯ ಗಂಡ ಕುಪ್ಪನು ಕಳ್ಳು ಇಳಿಸುವಂತಹ ಈರಪ್ಪೂಜಾರಿಯ ಹತ್ತಿರ ಅದನ್ನು ತೆಗೆದುಕೊಂಡು ಬಂದು ಕುಡಿಸಿರುತ್ತಾನೆ. ನಂತರ ಕಬ್ಬಕ್ಕೆ ತಿನ್ನುವ ಬಯಕೆ, ನಂತರ ಕೋಳಿ ತಿನ್ನುವ ಬಯಕೆ, ಕೋಳಿ ತರಲು ಹಣ ಬೇಕು. ಹಾಗಾಗಿ ನೀರು ಕೋಳಿಗಳನ್ನು ಹಿಡಿದು ತರುವುದನ್ನು ಈರಪ್ಪೂಜಾರಿಯ ಹೆಂಡತಿ ಅಕ್ಕಣ್ಣೆಯವರು ನಗುತ್ತಾ ನೋಡಿರುತ್ತಾರೆ. ಹೀಗೆ ಆಕೆಯ ಬಯಕೆಗಳಿಂದ ದಿನ ತನ್ನ ಕೆಲಸ ಬಿಟ್ಟು ಅವಳ ಬಯಕೆ ಪೂರೈಸುವಂತಹ ಕೆಲಸವನ್ನೇ ಖಾಯಂ ಮಾಡಿಕೊಂಡಿರುತ್ತಿದ್ದ ಕುಪ್ಪ. ಏಕೆಂದರೆ ಕುಪ್ಪನಿಗೆ ತನ್ನ ಹೆಂಡತಿಗೆ ನೀರು ನಿಂತಿರುವ ವಿಷಯ ಕೇಳಿ ಸಂತಸ ತಡೆಯಲಾಗದೆ ಸಿಕ್ಕ ಸಿಕ್ಕವರ ಹತ್ತಿರ ಆ ವರದಿಯನ್ನು ಒಪ್ಪಿಸುತ್ತಿರುತ್ತಿದ್ದ. ಹೀಗೆ ನೀರು ನಿಂತಿದ್ದು ಇದೇ ಮೊದಲೇನಲ್ಲ. ಅದು ಹಲವು ಬಾರಿ ಜಾರಿ ಹೋಗಿದೆ. ಈ ರೀತಿ ಬಯಕೆಗಳ ಸರಮಾಲೆಯಲ್ಲಿ ಮುಳುಗಿ ಏಳುತ್ತಿದ್ದಂತಹ ಕುಪ್ಪನಿಗೆ ತನ್ನ ಹೆಂಡತಿಯ ಒಂದು ಬಯಕೆ ಆತನ ಉಸಿರು ಗಟ್ಟುವ ಹಾಗೆ ಮಾಡಿತ್ತು. ಅದೇನೆಂದರೆ ಒಂದು ತೊಟ್ಟಿಲಿನ ಆಸೆ. ಅದೂ ಕೂಡ ಸುಬ್ಬಣ್ಣನವರ ಮನೆಯಲ್ಲಿರುವಂತಹ ತೊಟ್ಟಿಲು ಬೇಕು ಅಂತ. ಅದಕ್ಕೆ ಈತ ಇಲ್ಲಿ ಸಲ್ಲದ ಕಥೆಗಳನ್ನೂ ಹೇಳಿದರೂ ಅವಳು ಆ ರೀತಿಯ ತೊಟ್ಟಿಲು ಬೇಕು ಎಂದು ಹಠ ಹಿಡಿದಿದ್ದಳು.

ಒಬ್ಬ ಮನುಷ್ಯ ತನ್ನ ಶಕ್ತಿ ಮೀರಿದ್ದು ಬೇಕು ಎಂದಾಗ ಸಂಪಾದಿಸಲು ಸಾಧ್ಯವಾಗದೇ ಹೋದಾಗ ಅಂತಹವನು ನೇರ ಹಿಡಿಯುವುದು ಕಳ್ಳತನದ ಹಾದಿಯನ್ನ. ಆ ರೀತಿ ಕುಪ್ಪ ಕೂಡ ಸಣ್ಣ ಪುಟ್ಟ ಕಳ್ಳತನಕ್ಕೂ ಕೈ ಹಾಕಿದ್ದನಂತೆ. ಆದರೆ ಈ ತೊಟ್ಟಿಲ ವಿಷಯದಲ್ಲಿ ಕುಪ್ಪನು ಕಳ್ಳತನದಂತಹ ಕೆಲಸಕ್ಕೆ ಕೈ ಹಾಕಲಿಲ್ಲ. ತನ್ನ ಕುಲಕಸುಬಿಗೆ ಆಧಾರವಾಗಿದ್ದಂತಹ ಮತ್ತು ತನ್ನ ತುತ್ತು ಅನ್ನಕ್ಕೆ ದಾರಿಯಾಗಿದ್ದಂತಹ ಡೋಲನ್ನು ಅಡವು ಇಡುವಂತಹ ಧೈರ್ಯವನ್ನೇ ಮಾಡಿಬಿಡುತ್ತಾನೆ. ಕುಪ್ಪನಂತರ ಕಡು ಬಡತನವನ್ನು ಎದುರಿಸುವವರಿಗೆ ಇರುವಂತಹದ್ದು ಇದೊಂದೇ ದಾರಿ. ತಮ್ಮ ಜೀವನಕ್ಕೆ ಆಧಾರವಾಗಿರುವಂತಹದ್ದನ್ನು ಮಾರುವುದು ಅಥವಾ ಅಡಪಿಡುವುದು. ಇಲ್ಲಿ ಕುಪ್ಪ ತನ್ನ ಡೋಲನ್ನು ಅಡವಿಡಲೆಂದು ಸುಬ್ಬಣ್ಣನಂತಹ ಬ್ರಾಹ್ಮಣರ ಮನೆಗೆ ಬಂದಾಗ ಈತನಿಗೆ ಆ ಸುಬ್ಬಣ್ಣನ ಹೆಂಡತಿಯಾದಂತಹ ಜಾನಕಮ್ಮನವರು ಅವಮಾನವನ್ನೇ ಮಾಡಿಬಿಡುತ್ತಾರೆ. ಕುಪ್ಪನ ಹೆಂಡತಿ ಜೀಯಲುವಿನ ತೊಟ್ಟಿಲಿನ ಆಸೆ ಕೇಳಿದಂತಹ ಬ್ರಾಹ್ಮಣ್ತಿಯು 6"ಏನಾ..... ನಾಯಿ ಬೂದಿ ಹೊಂಡದಲ್ಲಿ

ಮಲಗ್ಬೇಕೆ ಹೊರತು, ಅದನ್ನು ದಂಡಿಗೆಯಲ್ಲಿ ಮಲಗಿಸ್ಲಿಕ್ಕಾಗುತ್ತನಾ.....? ದೇವರು ಜಾತಿಗೆ ತಕ್ಕ ಹಾಗೇ ಜಾಗ ಮಾಡಿಕೊಟ್ಟಿರುವುದು ಮತ್ತ್ಯಾಕನಾ?"6 ಎಂದು ತೊಟ್ಟಿಲನ್ನು ಅಡಪಿಡುವುದಕ್ಕೆ ಬಂದಂತಹ ಕುಪ್ಪನು, ಪಡೆದುಕೊಂಡಿದ್ದು ಮಾತ್ರ ಅದೇ ಅವಮಾನ, ಹೀಯಾಳಿಕೆಯ ಮಾತುಗಳನ್ನು. ಅಂದರೆ, ಇಲ್ಲಿ ಜಾನಕಮ್ಮನವರ ಮಾತಿನ ಪ್ರಕಾರ ದಲಿತರು ಅಥವಾ ಬಡವರು ತಮ್ಮ ಯೋಗ್ಯತೆಗಳಿಗೆ ತಕ್ಕಂತೆ ಆಲೋಚನೆ ಮಾಡಿ ಇರುವುದರಲ್ಲಿಯೇ ತೃಪ್ತಿಯನ್ನು ಪಟ್ಟುಕೊಳ್ಳಬೇಕು ಎಂಬುದು ಮತ್ತು ದಲಿತರನ್ನು ನಾಯಿಗಳ ಉದಾಹರಣೆಯನ್ನು ನೀಡಿ ಹೇಳುತ್ತಿರುವುದು ನೋಡಿದರೆ ನೀವು ಅದಕ್ಕಿಂತ ಕಡಿಮೆ ಎನ್ನುವ ಮಾತು. ಮತ್ತೊಂದು ವಿಷಯವನ್ನೂ ಅವರು ಹೇಳುತ್ತಾರೆ. ದೇವರು ಜಾತಿಗೆ ತಕ್ಕಂತೆ ಜಾಗ ಮಾಡಿಕೊಟ್ಟಿದ್ದಾನೆ ಎನ್ನುತ್ತಾರೆ. ಆದರೆ ಅದು ಸುಳ್ಳು... ದೇವರು ಜಾತಿ ಭೇಧ ವರ್ಣಭೇದಗಳನ್ನು ಮಾಡಿಲ್ಲ. ಅವುಗಳನ್ನೆಲ್ಲಾ ಮಾಡಿಕೊಂಡಿರುವುದು ಈ ಹುಲು ಮಾನವರೆ. ಅದರಲ್ಲೂ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಈ ಬ್ರಾಹ್ಮಣರು ಎನ್ನುವಂತಹರು ತಮ್ಮನ್ನು ತಾವು ಅಗ್ರಸ್ಥಾನದಲ್ಲಿಟ್ಟುಕೊಮಡು ಉಳಿದವರನ್ನು ಅವರವರ ವೃತ್ತಿ, ಕುಲ ಕಸುಬುಗಳಿಗೆ ಅನುಗುಣವಾಗಿ ಈ ಜಾತಿ ವ್ಯವಸ್ಥೆ ಎನ್ನುವ ದೊಡ್ಡ ಸಮಾಜಘಾತುಕ ಬೀಜವನ್ನು ಬಿತ್ತಿದರು. ಅಲ್ಲಿಂದ ತಾವು ಮೇಲು ತಾವು ಮೇಲು ಎಂದು ಜಾತಿಗಳು ಹುಟ್ಟಿಕೊಂಡವು. ಆದರೆ, ಈ ದಲಿತರನ್ನು ಅಸ್ಪೃಶ್ಯರು ಎಂದು ಅವರ ನೆರಳನ್ನೂ ಕೂಡ ನಾವು ಸ್ಪರ್ಶಿಸಬಾರದು ಎಂದು ದೂರವಿಟ್ಟರು. ಕಾರಣ ಅವರುಗಳು ಸತ್ತ ದನ, ಎಮ್ಮೆಗಳ ಮಾಂಸವನ್ನು ತಿನ್ನುತ್ತಾರೆ ಎಂಬುದಿರಬಹುದು. ಆದರೆ, ಇತ್ತೀಚಿನ ಜಾಗತೀಕರಣ, ನಗರೀಕರಣದಂತಹ ಸಮಯದಲ್ಲಿ ದಲಿತರುಗಳು ದನ, ಎಮ್ಮೆಗಳನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಆದರೆ, ದಲಿತೇತರರು ಎಂದು ಕರೆಸಿಕೊಳ್ಳುವಂತಹವರು. ಇಂದು ದನದ ಮಾಂಸವನ್ನು ತಿನ್ನುತ್ತಿದ್ದಾರೆ. ಮತ್ತು ನಮ್ಮ ಭಾರತದಂತಹ ಸಂಪ್ರದಾಯ ದೇಶವನ್ನು ಬಿಟ್ಟು ಹೊರದೇಶಗಳಲ್ಲಿ ಈ ಗೋಮಾಂಸವನ್ನು ಪ್ರಮುಖ ಆಹಾರ ಎಂದು ಸೇವಿಸುವವರಿದ್ದಾರೆ. ಆದರೆ, ಸಂಪ್ರದಾಯಗಳ ಸರಮಾಲೆಯಲ್ಲಿರುವಂತಹ ದೇಶದಲ್ಲಿ ಮಾತ್ರ ಗೋಮಾಂಸ ತಿಂದರೆ ಕೀಳು ಜಾತಿಯವರೆಂದು ನಂಬಿದ್ದಾರೆ. ಆದರೆ. ಅಂತಹ ನಂಬಿಕೆಗಳು ಕಾಲಕ್ರಮೇಣ ಅಳಿಸಿಹೋಗುತ್ತದೆ. ಈ ಜಾತಿ ಪದ್ಧತಿ ಎನ್ನುವಂತಹ ಸಾಮಾಜಿಕ ಸಮಸ್ಯೆಯು ನಿರ್ಮೂಲನೆಯಾಗಬೇಕೆಂದರೆ ಪ್ರತಿಯೊಬ್ಬರೂ ಕೂಡ ಶಿಕ್ಷಣವನ್ನು ಪಡೆದು ಅಕ್ಷರಸ್ಥರಾಗಿ, ಹಳೆಯ ತಲೆಮಾರಿನ ಜನರುಗಳು ಮುಗಿದು ಹೋದ ಮೇಲೆ ಹೊಸ ತಲೆಮಾರಿನ ಜನಕ್ಕೆ ಜಾತಿ ಎಂಬುದು ಹುಟ್ಟಿಗಂಟಿ ಬಂದುದಲ್ಲ. ಅದು ಕೇವಲ ಮಾನವ ನಿರ್ಮಿತ ಎಂಬಮತಹ ವಾಸ್ತವ ಸತ್ಯ ಅರ್ಥವಾದಾಗ ಮಾತ್ರ ನಮ್ಮ ಭಾರತ ಜಾತ್ಯಾತೀತ ರಾಷ್ಟ್ರವಾಗಿ ಮುಂಧುವರೆದ ರಾಷ್ಟ್ರವಾಗುತ್ತದೆ.

ಈ ರೀತಿ ತನ್ನ ಡೋಲನ್ನು ಅಡವಿಡಲು ಬಂದು ಕುಪ್ಪ ಅವಮಾನಕ್ಕೊಳಗಾಗುವ ಸಂದರ್ಭದಲ್ಲಿ ಆ ಸುಬ್ಬಣ್ಣನವರು ತಮ್ಮ ವ್ಯಾಪಾರಿ ಬುದ್ಧಿಯನ್ನು ಚುರುಕುಗೊಳಿಸಿಕೊಳ್ಳುತ್ತಾರೆ. ಅದೇನೆಂದರೆ, ಅಡವಿಟ್ಟುಕೊಳ್ಳುವ ಬದಲು ಅದನ್ನು ಖರೀದಿಸಿಯೇ ಬಿಡುವುದು. ಆ ಊರಿಗೆ ಕುಲಕಸುಬಿನವರ ಕೈಯಲ್ಲಿ ಉಳಿದಿದ್ದ ಡೋಲು ಎಂದರೆ ಅದು ಈ ಕುಪ್ಪನ ಡೋಲು ಮಾತ್ರ. ಆ ಮಾದಿಗ ಕೇರಿಯ ಜನರುಗಳೆಲ್ಲಾ ತಮ್ಮ ತಮ್ಮ ಕಷ್ಟದ ದಿನಗಳಲ್ಲಿ ತಮ್ಮ ಕುಲ ಕಸುಪಿನ ಸಂಕೇತವಾಗಿದ್ದಂತಹ ಡೋಲುಗಳನ್ನು ಮಾರಿಕೊಂಡು ಬಿಟ್ಟಿರುತ್ತಾರೆ. ಈ ಕುಲ

ಕಸುಬು ಎಂದರೆ ಅದು ಡೋಲು ಬಾರಿಸುವುದು. ಅದು ದಲಿತರ ಕಾರ್ಯ ಊರಿನಲ್ಲಿ ತೋಟಿಗಳು ಎಂದು ಒಬ್ಬರನ್ನು ನೇಮಿಸುತ್ತಾರೆ. ಅಂತಹ ತೋಟಿಗಳು ಊರಿನ ಯಾವುದೇ ಒಳ್ಳೆಯ ಸುದ್ದಿಯಾಗಲೀ ಅಥವಾ ಕೆಟ್ಟ ಸುದ್ದಿಯಾಗಲಿ ಅದನ್ನು ಈ ಡೋಲು ಬಾರಿಸಿಕೊಂಡು ಸಾರಬೇಕು ಹಾಗೂ ಊರಿನಲ್ಲಿ ಯಾರೇ ಸತ್ತು ಇದೇ ಡೋಲುಗಳನ್ನು ಬಾರಿಸಬೇಕು. ಹಬ್ಬ ಹರಿದಿನಗಳಲ್ಲಿ ಇಂತಹ ಡೋಲು ತಮಟೆಗಳೇ ಪ್ರಮುಖ ಆಕರ್ಷಣೆಗಳಾಗಿರುತ್ತವೆ. ಹೀಗೆ ಆ ಕೇರಿಯಲ್ಲಿ ಯಾರು ಇಟ್ಟುಕೊಳ್ಳದ ಡೋಲನ್ನು ಕುಪ್ಪನು ಇಟ್ಟುಕೊಂಡಿದ್ದನು. ಆದರೆ, ಅದನ್ನು ಖರೀದಿಗೆ ಸುಬ್ಬಣ್ಣನವರು ಕೇಳಿದಾಗ ಒಂದು ಕ್ಷಣ ಕುಪ್ಪನ ಉಸಿರು ಹಾರಿ ಹೋದಂತೆ ಆಗಿತ್ತು. ಆದರೆ ಕುಪ್ಪನಿಗೆ ತನ್ನ ಹೆಂಡತಿಯ ಬಸಿರ ಮುಂದೆ ಇವೆಲ್ಲವೂ ಸಹ ಕೇವಲ ಯಕಶ್ಚಿತ್ ಆದವು.

ಹೀಗೆ ದಲಿತರ ಅಥವಾ ಬಡವನ ದೌರ್ಬಲ್ಯವನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳಲು ಯೋಚಿಸಿದವರು ಸುಬ್ಬಣ್ಣನವರು. ಅದಕ್ಕೆ ಒಪ್ಪಿ ಕುಪ್ಪ ತನ್ನ ಡೋಲನ್ನು ನೀಡಿ ಒಂದೂವರೆ ಮುಡಿ ಅಕ್ಕಿ ತೆಗೆದುಕೊಂಡು ಒಂದು ತೊಟ್ಟಿಲು ಮಾಡಿಸಿಕೊಳ್ಳುವ ಎನ್ನುವ ಕೋರಿಕೆ ಮೇರೆಗೆ ಅಲ್ಲಿಂದ ಕಾಲ್ಕಿತ್ತವನು. ನಿಜವಾಗಲೂ ಕುಗ್ಗಿ ಹೋಗಿದ್ದನು ಕುಪ್ಪ. ಈ ಕಥೆಯಲ್ಲಿ ಮತ್ತೊಂದು ಕುಲಕಸುಬಿನ ಬಗ್ಗೆ ಕೂಡ ತಿಳಿಸಿದ್ದಾರೆ. ಅದು ಬುಟ್ಟಿ ಹೆಣೆಯುವುದು. ಈ ಕೆಲಸವನ್ನು ಜೀಯಲು ತನ್ನ ಮನೆ ಎದುರಿನ ಹಲಸಿನ ಮರದಡಿ ಕುಳಿತು ಬೀಳ ಬುಟ್ಟಿ ಹೆಣೆಯುತ್ತಿದ್ದಳು ಎಂದು ಹೇಳುತ್ತಾರೆ. ಅಂದರೆ, ಅದೂ ಕೂಡ ಅವರ ಸಂಸಾರದ ಸಣ್ಣಪುಟ್ಟ ತೂತುಗಳನ್ನು ಮುಚ್ಚುತ್ತಿತ್ತು ಎಂದು ನೋಡಬಹುದು. ಈ ರೀತಿ ತನ್ನ ಕುಟುಂಬದ ಆಧಾರವಾಗಿದ್ದಂತಹ ಡೋಲನ್ನು ಕುಪ್ಪನು ಬಿಕ್ಕಿ ಬಿಕ್ಕಿ ಅಳುತ್ತಾ ನೀಡಲು ಹೋದಾಗ ಆ ಜಾನಕಮ್ಮ ಅವನನ್ನು ಮತ್ತೂ ಅವಮಾನಿಸುತ್ತಾಳೆ. ಅದೇನೆಂದರೆ, "ಆ ಡೋಲನ್ನು ಮಡಿಕೆರೆಯಲ್ಲಿ ಇಟ್ಟು ಬಾ. ನಮ್ಮ ದೇವರ ನೀರನ್ನು ಚಿಮುಕಿಸಿ ನಂತರ ಒಳಗಡೆ ತರುವಾ, ಅದು ಮಾದಿಗರ ಮನೆಯಲ್ಲಿದ್ದ ಡೋಲು" ಎಂದು ಮತ್ತೆ ತನ್ನ ಜಾತಿಭೇದದ ಬುದ್ಧಿಯನ್ನು ಮತ್ತೆ ಪ್ರದರ್ಶಿಸುತ್ತಾಳೆ. ಆಗ ಡೋಲು ಬಿಟ್ಟು ಹೋಗುವ ಕುಪ್ಪ ಸುಮಾರು ದಿನಗಳವರೆಗೆ ಕಾಣಿಸುವುದಿಲ್ಲ. ಆ ಬ್ರಾಹ್ಮಣರ ಮನೆಯ ಹೊಲಗದ್ದೆಯ ಕೆಲಸಗಳನ್ನೆಲ್ಲಾ ಮಾಡಿಕೊಡುವಂತಹ ಕುಪ್ಪನಿಗೆ ಒಂದು ತೊಟ್ಟಿಲನ್ನು ಸುಬ್ಬಣ್ಣನವರು ಹಾಗೆ ಉಚಿತವಾಗಿ ಮಾಡಿಸಿ ಕಾಣಿಕೆಯಾಗಿ ನೀಡಬಹುದಿತ್ತು. ಆದರೆ, ತಮ್ಮ ವ್ಯಾಪಾರಿ ಬುದ್ಧಿಯನ್ನು ಪ್ರದರ್ಶಿಸಿ ತೊಟ್ಟಿಲಿಗೆ ಬದಲಾಗಿ ಡೋಲನ್ನು ಪಡೆಯುತ್ತಾರೆ. ತೊಟ್ಟಿಲು ತಯಾರಾದ ನಂತರ ಅದನ್ನು ಪಡೆಯಲು ಕುಪ್ಪ ಮಾತ್ರ ಬರುವುದಿಲ್ಲ. ಬ್ರಾಹ್ಮಣರಿಗಿಂತ ಜಾತಿಯಲ್ಲಿ ಕೆಳವರ್ಗದಲ್ಲಿರುವ ಜಾರಪ್ಪಶೆಟ್ಟರು ಒಂದು ಕಡೆ ತಮ್ಮ ಮಾನವೀಯತೆಯನ್ನು ಮೆರೆಯುತ್ತಾರೆ. ಆದರೆ, ಅದರಿಂದ ಕುಪ್ಪನಿಗೆ ಯಾವುದೇ ಪ್ರಯೋಜನವಾಗುವುದಿಲ್.

ಜಾರಪ್ಪಶೆಟ್ಟರು ಸುಬ್ಬಣ್ಣನವರ ಮನೆಗೆ ಬಂದು ನಮ್ಮ ಕುಪ್ಪನ ತೊಟ್ಟಿಲನ್ನು ಮತ್ತು ಡೋಲನ್ನು ಕೊಟ್ಟುಬಿಡಿ. ಅದರ ದುಡ್ಡೆಷ್ಟಾಯ್ತು ಹೇಳಿ ನಾನೇ ಕೊಡುತ್ತೇನೆ ಎಂದು ಹೇಳಿ ದುಡ್ಡನ್ನು ಮತ್ತು ಎರಡು ಮುಡಿ ಅಕ್ಕಿಯನ್ನು ಸುಬ್ಬಣ್ಣನವರಿಗೆ ಹಿಂತಿರುಗಿಸಿ ತೊಟ್ಟಿಲು ಮತ್ತು ಡೋಲನ್ನು ಬೇರೆ ಆಳುಗಳಲ್ಲಿ ಹೊರೆಸಿಕೊಂಡು ಕುಪ್ಪನು ವಾಸಪಿದ್ದಂತಹ ಮಾದಿಗರ ಕೇರಿಯ ಹತ್ತಿರಕ್ಕೆ ಬರುತ್ತಿದ್ದಂತೆ ಒಬ್ಬ ಆ ಡೋಲನ್ನು ಬಾರಿಸತೊಡಗಿದಾಗ ಕುಪ್ಪನ ಮನೆಯ ಹತ್ತಿರ ಜನರು ಸೇರುತ್ತಾರೆ. ಅವರೆಲ್ಲರಿಗೂ ಆ ವಿಷಯ ತಿಳಿದಿರುತ್ತದೆ. ಆದರೆ,

ಜಾರಪ್ಪಶೆಟ್ಟರಿಗೆ ಆಗ ಆ ವಿಷಯ ತಿಳಿಯುತ್ತದೆ. ಅದೇನೆಂದರೆ ಕುಪ್ಪನಿಗೆ ಅಂಗಾಂಗ ವಿಕಾರವಾಗಿರುವಂತಹ ರಾಕ್ಷಸ ಮಗು ಹುಟ್ಟಿತ್ತು. ಅದನ್ನು ನೋಡಿ ಕುಪ್ಪನು ತಲೆ ತಿರುಗಿ ಬಿದ್ದಾಗ ಅವರ ಸಂಬಂಧಿಯೊಬ್ಬ ಅದನ್ನು ಮಡಿಕೆ ಮುಗುಚಿ ಕೊಂದನೆಂದು ಪೂರ್ತಿ ನಡೆದ ವಿಷಯವನ್ನು ಬೀತುರು ಜಾರಪ್ಪಶೆಟ್ಟರಿಗೆ ಒಪ್ಪಿಸಿದ್ದಳು.

ಬಡ, ಮುಗ್ಧ, ಹಳ್ಳಿ ಜನರುಗಳ ಮನಸ್ಸು ಯಾವ ರೀತಿ ಮೂಢನಂಬಿಕೆಗೆ ಒಗ್ಗಿಕೊಂಡಿರುತ್ತದೆ ಎಂದರೆ ಕುಪ್ಪನ ಹೆಂಡತಿ ಬೀಯಲುಪಿಗೆ ಬಸುರಿ ಯಾವಾಗಿನಿಂದ ಸರಿಯಾದ ಚಿಕಿತ್ಸೆ ಆರೈಕೆಗಳು ಇಲ್ಲದ ಕಾರಣದಿಂದಾಗಿ ಮಗು ಅಂಗಾಂಗ ವೈಫ್ಯಲ್ಯತೆ ಅಥವಾ ವಿಕಾರರೂಪವಾಗಿ ಜನಿಸಿದೆ. ಆದರೆ, ಅದನ್ನು ವೈದ್ಯರ ಬಳಿ ತೋರಿಸಿ ಸರಿಯಾದ ಶಸ್ತ್ರ ಚಿಕಿತ್ಸೆಗಳನ್ನು ಮಾಡಿಸಿದ್ದರೆ ಅದು ಸರಿ ಹೋಗುತ್ತಿತ್ತೇನೋ. ಆದರೆ, ಅದನ್ನು ಮಡಿಕೆ ಅವುಚಿ ಸಾಯಿಸುವುದು ಮತ್ತು ಅವರ ಮನಸ್ಸಿನಲ್ಲಿದೆಯಲ್ಲ, ಮೂಢನಂಬಿಕೆ, ಆ ಮಗು ರಾಕ್ಷಸನಂತೆ ಬೆಳೆದು ತನ್ನ ತಾಯಿಯನ್ನೇ ನುಂಗಿಬಿಡುತ್ತದೆ ಎನ್ನುವುದು ಇವುಗಳಿಂದ ಒಂದು ಜೀವವನ್ನು ತೆಗೆಯುವಂತಾಯಿತು.

ಇದು ಬೀಯಲು ಬಸುರಿಯಾದಾಗ ಅತಿಯಾದ ಬಯಕೆಗಳಿಂದಾಗ ಕಣ್ಣಿಗೆ ಕಾಣಿಸಿದ್ದನ್ನೆಲ್ಲ ಆಸೆ ಪಟ್ಟು ತಿಂದು ತನ್ನ ಹೊಟ್ಟೆಯಲ್ಲಿನ ಮಗುವಿನ ವಿಕಾರ ಜನನಕ್ಕೆ ಕಾರಣವಾದಳು. ಅವಳ ಬಸಿರು ಬಯಕೆಗಳಿಗೆ ಇದು ಪ್ರಕೃತಿಯೇ ನೀಡಿದಂತಹ ತೀರ್ಪು. ಮಾನವೀಯತೆ ತೋರಲು ಬಂದ ಶೆಟ್ಟರು ಈ ವಿಷಯವನ್ನು ಕೇಳಿ ಹೃದಯ ಅಧೀರವಾಗಿ, ಕಣ್ಣಳಲ್ಲಿ ಹನಿ ತುಂಬಿಸಿಕೊಂಡು, ಡೋಲನ್ನು ಕುಪ್ಪನ ಅಂಗಳದಲ್ಲಿಯೇ ಬಿಟ್ಟು, ತೊಟ್ಟಿಲನ್ನು ತೆಗೆಸಿಕೊಂಡು ಹೊರಟರು. ಶೆಟ್ಟರು ತೊಟ್ಟಿಲನ್ನು ತರಿಸಿಕೊಂಡು ಹೊರಟದ್ದರ ಅರ್ಥ, ನಿಮ್ಮಂಥವರಿಗೆ ಏತಕ್ಕೆ ಮಕ್ಕಳು. ಅವುಗಳನ್ನು ಮೊಳಕೆಯಿಂದ ಹೇಗೆ ಆರೈಕೆ ಮಾಡಬೇಕು ಎನ್ನುವಂತಹ ವಿಷಯವನ್ನು ಅರಿಯದಂತಹವರು ನೀವು. ಮುಗ್ಧರು ಮತ್ತು ಮುಖ್ಯವಾಗಿ ಮೂಢರು ಎಂಬಂತಹ ಅಭಿಪ್ರಾಯವನ್ನು ಶೆಟ್ಟರು ತಮ್ಮ ನಡವಳಿಕೆಯಿಂದ ತೋರಿಸಿದ್ದಾರೆ. ಯಾವುದೇ ಆಸೆಯಾಗಲೀ, ಬಯಕೆಯಾಗಲೀ ಒಂದು ಮಿತಿಯಲ್ಲಿ ಇರಬೇಕು. ಅತಿಯಾದರೆ ಅಮೃತವೂ ವಿಷಯವಾಗುತ್ತದೆ" ಎಂಬಂತಹ ಈ ಗಾದೆಯು ಈ ಕಥೆಯಲ್ಲಿ ಪ್ರಸ್ತುತ ಎನಿಸುತ್ತದೆ. ಮತ್ತು ಕರಾವಳಿಯಲ್ಲಿ ವಾಸಿಸುವಂತಹ ದಲಿತರು ಅಥವಾ ಕೆಳವರ್ಗಕ್ಕೆ ಸೇರಿದಂತಹ ಜನರು ಎಂದು ಕರೆಸಿಕೊಳ್ಳುವಂತಹ ಜನ ಸಮುದಾಯಗಳು ಆರ್ಥಿಕವಾಗಿ ಹಿಂದುಳಿದಿರುವಿಕೆಯಿಂದಾಗಿ, ಈ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಮೌಢ್ಯ ಅದಕ್ಕಿಂತ ಹೆಚ್ಚಾಗಿ ಬಡತನ ಮನುಷ್ಯನನ್ನು ಯಾವ ಸ್ಥಿತಿಗೆ ತಂದು ನಿಲ್ಲಿಸುತ್ತದೆ. ತನಗಾಧಾರವಾದ ಡೋಲನ್ನೇ ಮಾರಿ ತನ್ನ ಅಸ್ತಿತ್ವವನ್ನು ಪ್ರಶ್ನಿಸಿಕೊಳ್ಳುವ ಸ್ಥಿತಿಗೆ ಬಡತನ ಮನುಷ್ಯನನ್ನು ದೂಡುತ್ತದೆ ಎಂಬುದು ಕುಪ್ಪ ಬೀಲು ಪಾತ್ರದಲ್ಲಿ ನಿರೂಪಿಸಿದ್ದಾರೆ. ಲೇಖಕಿ ಜಡ ಹಾಗೂ ಮೂಢ ಜನರ ಒಡನಾಡಿಯಾಗಿದ್ದು ಅವರ ಭಾವನೆಗಳಿಗೆ ಸ್ಪಂದನೆಯು ಕಥೆಗಳಾಗಿ ಮೂಡಿವೆ. ಲೇಖಕಿಯ ಭಾವಸೂಕ್ಷ್ಮತೆ ಪಾತ್ರಗಳ ಹೃದಯಗಳ ಮಿಡಿತಗಳಲ್ಲಿ ಮೀಟಿದ್ದಾರೆ.

ಬಗ್ಗುಂಡಿ ಪ್ರಸಂಗ

ಬಗ್ಗುಂಡಿ ಪ್ರಸಂಗವೆಂಬ ಹೆಸರಿನಿಂದ ನಾಗವೇಣಿಯವರು ಹೆಣೆದಿರುವ ಈ ಕಥೆಯಲ್ಲಿ ಕರಾವಳಿ ನಾಡಿನಲ್ಲಿ ಧಣಿಗಳು ಮತ್ತು ಒಕ್ಕಲ ಮಕ್ಕಳು ಎಂದು ಕರೆಸಿಕೊಳ್ಳುವಂತಹ ಜೀತದಾಳುಗಳ ನಡುವೆ ಆಕಸ್ಮಿಕವಾಗಿ

ಜಗಳಗಳೇನಾದರೂ ನಡೆದರೆ ಅಥವಾ ಆ ಜೀತದಾಳುಗಳು ತಮ್ಮ ಧಣಿಗಳ ವಿರುದ್ಧ ಏನಾದರೂ ಸಹ ತಿರುಗಿಬಿದ್ದರೆ, ಅಂತಹ ಸಮಯದಲ್ಲಿ ಧಣಿಗಳು ಒಕ್ಕಲ ಮಕ್ಕಳ ನಾಶಕ್ಕೆ ಸಂಚು ರೂಪಿಸುವಂತಹ ವಿಷಯವನ್ನು ಕೇಂದ್ರೀಕರಿಸಿಕೊಂಡು ನಾಗವೇಣಿಯವರು ಒಂದು ಸುಂದರವಾದಂತಹ ಕಥೆಯನ್ನು ತಯಾರಿಸಿದ್ದಾರೆ. ಈ ಕಥೆಯಲ್ಲಿ ಬರುವಂತಹ ವೆಂಕಪ್ಪ ಆಳ್ವರೇ ಧಣಿಗಳು. ಈ ವೆಂಕಪ್ಪರ ಮನೆಯ ನಿಯತ್ತಿನ ನಾಯಿಯಂತೆ ಇದ್ದವನೇ ಆ ಕರಿಯ. ಅವನು ಆ ಮನೆಯ ಒಬ್ಬ ಸದಸ್ಯನಾಗಿ ಹೋಗಿದ್ದವನು. ಆ ಮನೆಯ ಮಕ್ಕಳಿಗೆ ಸಿಗಬೇಕಾಗಿದ್ದಂತಹ ನಿಜವಾದ ಪ್ರೀತಿಯನ್ನು ಕರಿಯ ನೀಡಿದ್ದನು. ಮನೆಯ ಮಕ್ಕಳೆಲ್ಲಾ ಕರಿಯನ ಹೆಗಲ ಮೇಲಿಯೇ ಆಡಿ ಬೆಳೆದವರು. ತನ್ನ ತಂದೆ ಎಂದರೆ ಭಯಪಡುತ್ತಿದ್ದಂತಹ ಮಕ್ಕಳು ತನ್ನ ಮನೆಯ ಕೆಲಸದ ಕರಿಯನನ್ನು ಬಹಳ ಪ್ರೀತಿ ವಾತ್ಸಲ್ಯದಿಂದ ಹಚ್ಚಿಕೊಂಡಿದ್ದವು. ಅದರಲ್ಲಿಯೂ ಪಾಪ ಆ ನಾಲ್ಕರ ಹರೆಯದ ಜಗ್ಗನಿಗೆ ಕರಿಯನನ್ನೇ ಅಪ್ಪ ಎಂದು ಬಿಡಲೇ ಎನ್ನುವಷ್ಟರ ಮಟ್ಟಿಗೆ ಪ್ರೀತಿ ಬಾಂಧವ್ಯದಲ್ಲಿ ಮುಳುಗಿ ಹೋಗಿರುವಂತಹವನು.

ಅಂತಹ ಮುಗ್ಧ ಮಕ್ಕಳಿಗೆ ಜಾತಿ ಭೇದಗಳೆಂಬ ಭೇದಭಾವಗಳಿರಲಿಲ್ಲ. ಅವನು ನಮ್ಮ ಹಾಗೆಯೇ ಮನುಷ್ಯ ಎಂಬಂತಹ ಭಾವನೆ. ನಮ್ಮ ರಾಷ್ಟ್ರ ಕವಿ ಕುವೆಂಪುರವರು ಹೇಳಿದ "ವಿಶ್ವಮಾನವ ಕಲ್ಪನೆ" ಇದೆ. ಮಗು ಹುಟ್ಟುತ್ತಾ ವಿಶ್ವಮಾನವ, ಅದು ಬೆಳೆಯುತ್ತ ಬೆಳೆಯುತ್ತಾ ಅಲ್ಪಮಾನವನನ್ನಾಗಿ ಮಾಡುತ್ತದೆ ಈ ಸಮಾಜ ಎನ್ನುತ್ತಾರೆ. ಅವರ ಈ ಮಾತಿನಂತೆ ಆ ಜಗ್ಗನಿಗೂ ಕೂಡ ಯಾವುದೇ ಭೇದಭಾವಗಳ ಅರಿವಿಲ್ಲದೇ ಕರಿಯನ ಜೊತೆ ಸಲಿಗೆಯಿಂದ ಇರುತ್ತಿದ್ದ. ಆದರೆ ಅವನು ಬೆಳೆಯುತ್ತಾ ಬೆಳೆಯುತ್ತಾ ಅವನ ತಲೆಯಲ್ಲಿ ಈ ಜಾತಿಗಳ ಬೀಜವನ್ನು ಬಿತ್ತಿ ಅದು ಸಸಿಯಾಗಿ ಹೆಮ್ಮರವಾಗುವಂತೆ ವೆಂಕಪ್ಪ ಆಳ್ವರು ನೋಡಿಕೊಳ್ಳುತ್ತಿದ್ದರು ಅನ್ನಿಸುತ್ತದೆ. ಏಕೆಂದರೆ ಆ ನಾಲ್ಕರ ಪ್ರಾಯದ ಹುಡುಗನ ತಲೆಯಲ್ಲಿ ಏನೇನೋ ತುರುಕಲಾರಂಭಿಸಿದ್ದರು. ಕರಾವಳಿಗಳಲ್ಲಿ ಈ ರೀತಿಯ ಒಕ್ಕಲ ಮಕ್ಕಳು ಎಂಬ ಜೀತದ ಆಳುಗಳನ್ನು ಪ್ರತಿ ಮನೆಯವರು ಇಟ್ಟುಕೊಂಡಿರುತ್ತಿದ್ದರು. ಪ್ರಸ್ತುತದ ಸಮಯದಲ್ಲಿ ಈ ಜೀತ ಪದ್ಧತಿ ಇಲ್ಲ. ಆದರೆ, ಹಿಂದೆಲ್ಲಾ ಇದು ನಡೆದುಕೊಂಡು ಬರುತ್ತಿತ್ತು. ಇಂತಹ ಜೀತದಾಳುಗಳು ತಮ್ಮ ಧಣಿಯ ಮನೆಯ ಬೆಳವಣಿಗೆಗಳನ್ನು ಏಳಿಗೆಗಳನ್ನು ಸಾವಿರಾರು ವರುಷಗಳ ಕಾಲ ಮಾಡಿ ಅಂತಹ ಧಣಿಗಳನ್ನು ಉದ್ಧಾರ ಮಾಡಿ ತಮ್ಮ ಜೀವನವನ್ನು ಧಣಿಗಳ ಮನೆಯಲ್ಲಿಯೇ ಕಳೆಯುತ್ತಿದ್ದರು. ಆದರೆ, ಇಂತಹ ಜೀತದ ಆಳುಗಳ ತಮ್ಮ ಜೀವಮಾನದಲ್ಲಿ ಎಂದೂ ಸುಖವನ್ನು ಸರಿಯಾಗಿ ಅನುಭವಿಸಿದವರಲ್ಲ. ತಮ್ಮ ಮನೆ ಹೆಂಡತಿ ಮಕ್ಕಳ ಜೀವನಕ್ಕಿಂತಲೂ ಈ ಜೀತದ ಆಳುಗಳಿಗೆ ತಮ್ಮ ಧಣಿಗಳ ಏಳಿಗೆಯೇ ಮುಖ್ಯವಾಗಿರುತ್ತದೆ. ಧಣಿಗಳು ಮಾನವೀಯತೆಯ ದೃಷ್ಟಿಯಿಂದಲೂ ಕೂಡ ಜೀತದಾಳುಗಳನ್ನು ನಡೆಸಿಕೊಳ್ಳುವುದಿಲ್ಲ. ಪ್ರಾಣಿಗಳಂತೆ ಕಾಣುತ್ತಾರೆ. ಅವರೂ ನಮ್ಮ ಹಾಗೆ ಮನುಷ್ಯರು ಎನ್ನುವುದನ್ನು ಮರೆತಿರುತ್ತಾರೆ. ಆದರೆ, ಇಲ್ಲಿ ಕರಿಯ ಹದಿನೇಳು ವರ್ಷಗಳಿಂದ ಈ ವೆಂಕಪ್ಪ ಆಳ್ವರ ಮನೆಯ ಮತ್ತು ಮನೆಮಂದಿಯ ಏಳಿಗೆಗೆ ತನ್ನ ಜೀವನವನ್ನೇ ಸವೆಸಿರುತ್ತಾನೆ. ಆದರೆ, ಅಂತಹ ಕರಿಯನನ್ನು ಕೇವಲ ನನ್ನ ವಿರುದ್ಧ ತಿರುಗಿ ಬಿದ್ದನಲ್ಲ ಎನ್ನುವ ಒಂದೇ ಕಾರಣಕ್ಕೆ ವಿಷ ಹಾಕಿಕೊಂಡು ಬಿಡುವಂತಹ ಗಟ್ಟಿ ನಿರ್ಧಾರವನ್ನು ವೆಂಕಪ್ಪ ಆಳ್ವರು ಮಾಡಬಾರದಿತ್ತು. ಮನುಷ್ಯರಿಗೆ ಪಾಪ ಪುಣ್ಯಗಳ ಲೆಕ್ಕಾಚಾರವಿಲ್ಲದಿರಬಹುದು. ಸರಿಯಾದ ರೀತಿಯಲ್ಲಿ ಲೆಕ್ಕವಿರುತ್ತದೆ ಎನ್ನುವುದಕ್ಕೆ ಕರಿಯ ಬಗ್ಗುಂಡಿಯಿಂದ ಮೀನುಗಳನ್ನು ತಂದು ಉಮ್ಮಕ್ಕೆಗೆ ಕೊಟ್ಟು ತನ್ನ

ಗಂಟುಮೂಟೆಯನ್ನು ಕಟ್ಟಿಕೊಂಡು ತನ್ನ ಊರಿಗೆ ಹೋಗುವುದು ಸಾಕ್ಷಿಯಾಗಿದೆ. ಆದರೆ, ಕರಿಯನನ್ನು ಕೊಲ್ಲಬೇಕೆಂದು ಇಟ್ಟಿದ್ದ ಸೌತೆಯಲ್ಲಿನ ಇಲಿ ಪಾಷಾಣ ಧಣಿಗಳ ಪ್ರೀತಿಯ ಕುಸ್ತಿಪಟುವಾದಂತಹ ಕಡಲೇ ಹುಂಜವು ತಿಂದು ತನ್ನ ಪ್ರಾಣವನ್ನು ಬಿಟ್ಟು, ಧಣಿಯ ಈ ಹೇಸಿಗೆತನದ ಬುದ್ಧಿಯನ್ನು ಎಲ್ಲರಿಗೂ ತಿಳಿಯುವಂತೆ ಮಾಡಿತ್ತು. ಅದಕ್ಕೆ ಹಿರಿಯರು ಹೇಳಿರುವುದು "ತಾನೊಂದು ಬಗೆದರೆ ದೈವವೊಂದು ಬಗೆಯಿತು" ಎಂಬ ಗಾದೆ ಮಾತನ್ನು.

ಕರಿಯನು ಈ ಹಿಂದೆಯು ಧಣಿಗಳ ವಿರುದ್ಧ ಕೋಪ ಮಾಡಿಕೊಂಡಿದ್ದಿದೆ. ಅವರ ಹತ್ತಿರ ಮನಸೋ ಇಚ್ಛೆ ಬಯ್ಯಿಸಿಕೊಂಡಿದ್ದಿದೆ. ಧಣಿಗಳು ಏನು ಕಡಿಮೆ ಇಲ್ಲ ಪ್ರತಿದಿನ ಕೂಡ ಕರಿಯನ ಜಾತಿಯ ಹೆಸರನ್ನು ಹಿಡಿದು ಜಾತಿನಿಂದನೆ ಮಾಡಿದ್ದೂ ಇದೆ. ಆದರೆ, ಇವೆಲ್ಲವೂ ಕರಿಯನ ತಲೆ ಕೆಡಿಸಿರಲಿಲ್ಲ. ಆದರೆ, ಕೆಲವು ಬಾರಿ ಕರಿಯ ಮಾಡಿದ ತಪ್ಪಿಗಾಗಿ ಧಣಿಗಳಾದಂತಹ ವೆಂಕಪ್ಪ ಆಳ್ವರು ತನ್ನ ಹೆಂಡತಿ ಉಮ್ಮಕ್ಕೆಯ ಜುಟ್ಟು ಹಿಡಿದು ಮನಬಂದಂತೆ ಥಳಿಸುವುದಿದೆ. ಇದನ್ನು ಕರಿಯ ಸಹಿಸಲಾರದೆ ತಡೆದಿರುವ ಉದಾಹರಣೆಯೂ ಇವೆ. ಕರಿಯನು ಉಮ್ಮಕ್ಕೆಯ ತವರು ಮನೆಯ ಒಕ್ಕಲಿನ ಮಗ. ಅಲ್ಲಿಂದ ಇಲ್ಲಿಗೆ ವೆಂಕಪ್ಪ ಆಳ್ವರ ಮನೆಗೆ ಜೀತಕ್ಕೆಂದು ಬಂದಂತವನು. ಹೆಚ್ಚು ಕಡಿಮೆ ಉಮ್ಮಕ್ಕೆಯ ವಯಸ್ಸಿನವನೇ. ಕುಡಿದ ಮತ್ತಿನಲ್ಲಿ ಧಣಿಗಳು ಹೆಂಡತಿಗೆ ಬಯ್ಯುವಂತಹ ಸಮಯದಲ್ಲಿ ಕರಿಯ ಮತ್ತು ತನ್ನ ಹೆಂಡತಿಯಾದಂತಹ ಉಮ್ಮಕ್ಕೆಗೆ ಸಂಬಂಧ ಕಲ್ಪಿಸಿ ಬಯ್ಯುವುದಿದೆ.

ಈ ಕಥೆಯ ಕೇಂದ್ರಬಿಂದುವೇ ಈ ಬಗ್ಗುಂಡಿ. ಇಲ್ಲಿ ಮೀನನ್ನು ಹಿಡಿಯುವುದು ಒಂದು ವಾಡಿಕೆಯಾಗಿದೆ. ಅದನ್ನು ಒಂದು ಸಾಂಪ್ರದಾಯಿಕ ಹಬ್ಬದಂತೆ ಆಚರಣೆಗೆ ಬಂದು ಬಿಟ್ಟಿತ್ತು. ಮೊದಲೆಲ್ಲ ವೆಂಕಪ್ಪಶೆಟ್ಟರೇ ಖುದ್ದು ಹೋಗುತ್ತಿದ್ದರು. ತಮ್ಮ ಹರಕು ಬಾಯಿಯಿಂದ ಅಲ್ಲಿ ಮಾರಪ್ಪ ಶೆಟ್ಟರ ಹತ್ತಿರ ಜಗಳವನ್ನು ತಂದುಕೊಂಡು ಅಲ್ಲಿಗೆ ಹೋಗುವುದನ್ನು ಬಿಟ್ಟ ನಂತರ ಇವರು ಹೋಗುತ್ತಿದ್ದಂತಹ ಹಲವಾರು ಹಬ್ಬ ಹರಿದಿನ ಕಾರ್ಯಕ್ರಮಗಳಿಗೆ ಕರಿಯನೇ ಈ ಮನೆಯ ಪ್ರತಿನಿಧಿಯಾಗಿ ಹಾಜರಿರುತ್ತಿದ್ದವನು. ಇಂತಹ ಕರಿಯ ಈ ವರ್ಷದ ಬಗ್ಗುಂಡಿಗೆ ಹೋಗುವ ಸಿದ್ಧತೆಯಲ್ಲಿರಬೇಕಾದರೆ ಧಣಿಗಳ ಚಿಕ್ಕಮಗ ಜಗ್ಗನದೇ ತಲೇ ನೋವು. ಆ ಚಿಕ್ಕ ಹುಡುಗನನ್ನು ಅಂತಹ ರಾತ್ರಿಯಲ್ಲಿ ಕರೆದುಕೊಂಡು ಹೋದರೆ ಧಣಿಗಳ ಕೋಪಕ್ಕೆ ಗುರಿಯಾಗಬೇಕಲ್ಲ. ಕರೆದುಕೊಂಡು ಹೋಗದಿದ್ದರೆ ಆ ಚಿಕ್ಕ ಹುಡುಗ ತನ್ನ ಮನಸ್ಸಿನಲ್ಲಿ ನೊಂದುಕೊಳ್ಳುವುದನ್ನು ಯೋಚಿಸಿ ಕರಿಯನು ಇಂಥಾ ಸಂದಿಗ್ಧ ಪರಿಸ್ಥಿತಿಯಲ್ಲ ಸಿಕ್ಕಿಕೊಂಡಿರುವಾಗ ವೆಂಕಪ್ಪ ಶೆಟ್ಟರು ಕರಿಯನ ಆ ಸಿದ್ಧತೆಗನ್ನು ಕುಡಿದು ಬಂದು ನೋಡಿ ಕುಪಿತಗೊಂಡು ಆ ಮೀನು ಹಿಡಿಯುವಂತಹ ಬಲೆಯನ್ನು ಮತ್ತು ಕುತ್ತರಿಯನ್ನು ಅಟ್ಟದಿಂದ ಕೆಳಗೆ ತೆಗೆದಿದ್ದು ಯಾರು ಎಂದು ತನ್ನ ಹೆಂಡತಿ ಉಮ್ಮಕ್ಕೆಯನ್ನು ಕರೆದು ಮನಬಂದಂತೆ ಬಡಿಯತೊಡಗಿದಾಗ ಅದನ್ನು ಬಿಡಿಸಿಕೊಳ್ಳಲು ಕರಿಯನು ಅಡ್ಡ ಬಂದು ಅವರನ್ನು ಹಿಡಿದು ಜಾಡಿಸಿ ತಳ್ಳಿದಾಗ ಅಲ್ಲಿಂದ ಎದ್ದು 7"ಹಡಬೇ ಮಾದಿಗ ಮಗ್ನೇ ಹಟ್ಟಿಯಿಂದ ನನ್ನ ಭೂತದ ಚಾವಡಿಗೆ ತಳ್ಳುವ ತಾಕತ್ತು ಬಂತೇನೋ? ನನ್ನ ಎಂಜಲು ನೆಕ್ಕ ನನ್ನೇ ಎದುರು ನಿಲ್ತಿಯೇನೋ ಬೇವರ್ಸಿ"7 ಎಂದು ಬಯ್ಯುತ್ತಾ ಹೊಡೆಯಲು ಕೈಯೆತ್ತಿದಾಗ ಕರಿಯನು "ವೆಂಕಪ್ಪಾಳ್ವರೇ" ಎಂದು ಘರ್ಜಿಸಿದಿದ್ದು ಧಣಿಗಳು ದಂಗಾಗಿ

ಹೋಗುತ್ತಾರೆ. ಏಕೆಂದರೆ, ಕರಿಯನು ತನ್ನ ವೆಂಕಪ್ಪಾಳ್ವರನ್ನು ಎಂದು ಕೂಡ ಹೆಸರಿಡಿದು ಕರೆಯದಂತಹವನು. ತನ್ನ ಮತ್ತು ತನ್ನ ಧಣಿ ಒಡತಿಯ ನಡುವೆ ಅನೈತಿಕ ಸಂಬಂಧವನ್ನು ಕಲ್ಪಿಸಿ ಮಾತನಾಡಿದಾಗ ಮತ್ತು ಅವರಿಗೆ ತನ್ನಿಂದಾಗಿ ಸುಖಾಸುಮ್ಮನೆ ಏಟುಗಳು ಬೀಳುತ್ತಿರುವುದನ್ನು ಕರಿಯ ಸಹಿಸಿಕೊಂಡಿರಲಾರದೆ ಧಣಿಗಳ ವಿರುದ್ಧ ತಿರುಗಿ ಬೀಳುತ್ತಾನೆ. ನಿಜವಾಗಲೂ ಧಣಿಯೊಡತಿ ಉಮ್ಮಕ್ಕೆ ಮತ್ತು ಕರಿಯನ ನಡುವೆ ತಾಯಿ ಮಗನ ಪ್ರೀತಿ ಮಮಕಾರಗಳು ಇದ್ದವು. ಸಾಮಾನ್ಯವಾಗಿ ಕರಾವಳಿ ಭಾಗವಾಗಲೀ ಬೇರೆ ಸೀಮೆಗಳಲ್ಲಾಗಲಿ ಒಬ್ಬ ವ್ಯಕ್ತಿ ತನ್ನ ಹೆಂಡತಿ ಮತ್ತು ತನ್ನ ಮನೆಯ ಕೆಲಸದಾಳಿಗೆ ಮೇಲೆ ಅನುಮಾನಪಡುವಂತಹುದು. ಸರ್ವೇಸಾಮಾನ್ಯ. ಆದರೆ ಅದು ಬಹಳ ಕೆಟ್ಟ ಆಲೋಚನೆ. ಯಾರೇ ಒಬ್ಬ ಮನೆ ಕೆಲಸದಾಳು ತನಗೆ ಅನ್ನ ಹಾಕುವ ಕೈಗಳನ್ನು ತನ್ನ ಹೆತ್ತತಾಯಿಗಿಂತ ಹೆಚ್ಚಿನ ರೀತಿಯಲ್ಲಿ ಗೌರವಿಸುತ್ತಾರೆ. ಇದು ಪ್ರಸ್ತುತ ವಾಸ್ತವ. ಆದರೆ ಧಣಿಗಳಿಗೆ ಅನುಮಾನ ಎಂಬುದು ಸಹಜ. ಆದರೆ ಅದಕ್ಕೆ ಇತಿಮಿತಿಗಳ ಅಗತ್ಯವಿದೆ. ಆದರೆ, ಇಲ್ಲಿ ತನ್ನಿಂದಾದ ತಪ್ಪಿನಿಂದ ತನಗೆ ಊಟ ಹಾಕಿದಂತಹ ಒಡತಿಗೆ ಏಟು ಬೀಳುತ್ತಿರುವುದು ಕರಿಯನಿಂದ ಸಹಿಸಲಾಗಲಿಲ್ಲ.

ಹೀಗೆ ಒಬ್ಬ ವ್ಯಕ್ತಿ ಹೆದರಿದರೆ ಹೆದರಿಸುತ್ತಾರೆ. ಆದರೆ, ತಿರುಗಿ ಬಿದ್ದರೆ ಸುಮ್ಮನಾಗುತ್ತಾರೆ ಎನ್ನುವ ಹಾಗೆ ಇಲ್ಲಿ ಒಮ್ಮೆ ತನ್ನ ಧಣಿಗಳ ವಿರುದ್ಧ ತಿರುಗಿ ಬಿದ್ದಂತಹ ಕರಿಯನಿಗೆ ಏನೋ ಒಂಥರ ಭಂಡ ಧೈರ್ಯ ಬಂದು ಎಚ್ಚರಗೊಂಡಿದ್ದಂತಹ ಜಗ್ಗನನ್ನು ಕರೆದು ಹೆಗಲ ಮೇಲೆ ಕೂರಿಸಿಕೊಂಡು ಬಗ್ಗುಂಡಿಗೆ ಹೊರಟೆ ಬಿಡುತ್ತಾರೆ. ಯಾರಿಗೆ ಆಗಲಿ ಒಬ್ಬ ವ್ಯಕ್ತಿಗೆ ನಾವು ಮರ್ಯಾದೆ ಗೌರವಗಳನ್ನು ನೀಡಬೇಕು ಎಂದರೆ ಅಂತಹ ವ್ಯಕ್ತಿಯು ನಾವು ನೀಡುವಂತಹ ಗೌರವ ಮರ್ಯಾದೆಗಳಿಗೆ ತಕ್ಕಂತಹ ಯೋಗ್ಯತೆಗಳನ್ನು ಪಡೆದಿರಬೇಕು. ಅದನ್ನು ಕಳೆದುಕೊಂಡಾಗ ಅಂಥವರ ವಿರುದ್ಧ ತಿರುಗಿ ಬೀಳುವುದು ಅನಿವಾರ್ಯವಾಗುತ್ತದೆ. ಒಬ್ಬ ವ್ಯಕ್ತಿ ಮಾತಿನಲ್ಲಿ ಗೆಲ್ಲಲು ಸಾಧ್ಯವಾಗದೇ ಹೋದಾಗ ಅವನು ಸಹನೆಯನ್ನು ಕಳೆದುಕೊಂಡು ಕೈ ಮಾಡುವ ನಿರ್ಧಾರ ತೆಗೆದುಕೊಳ್ಳುತ್ತಾನೆ. ಇದು ದಡ್ಡನ ನಿರ್ಧಾರಗಳು. ಆದರೆ, ಅದೇ ವ್ಯಕ್ತಿ ಬುದ್ಧಿವಂತಿಕೆಯನ್ನು ಉಪಯೋಗಿಸಲು ಹೊರಟನೆಂದರೆ ಕೈಮಾಡುವುದನ್ನು ಬಿಟ್ಟು ತನ್ನ ಅಪರಾಧಿ ಮನೋಭಾವವನ್ನು ತೋರ ಹೊರಡುತ್ತಾನೆ. ಇಲ್ಲಿ ವೆಂಕಪ್ಪ ಆಳ್ವರು ಮಾಡಿದ್ದು ಇದನ್ನೇ. ತನ್ನ ವಿರುದ್ಧ ತಿರುಗಿ ಬಿದ್ದಂತಹ ಕರಿಯ ಮೇಲೆ ತನ್ನ ಶಕ್ತಿಯನ್ನು ಉಪಯೋಗಿಸಲು ಸಾಧ್ಯವಾಗದೆ ಅವರು ಯುಕ್ತಿಯನ್ನು ಉಪಯೋಗಿಸಲು ಮುಂದಾಗಿ, ಅವನನ್ನು ನಯವಾಗಿ ಮಾತನಾಡಿಸಿ ವಿಷ ಹಾಕಿ ಮುಗಿಸಿ ಬಿಡಬೇಕು ಎಂಬಂತಹ ತೀರ್ಮಾನಕ್ಕೆ ಬರುತ್ತಾರೆ. ಯಾರೇ ಆಗಲಿ ಒಬ್ಬ ಮನುಷ್ಯನನ್ನು ಅಥವಾ ಒಂದು ಪ್ರಾಣಿಯನ್ನಾಗಿ ಅದರ ಪ್ರಾಣ ತೆಗೆಯುವಂತಹ ಹಕ್ಕು ಯಾರಿಗೂ ಇಲ್ಲ. ಸುಮಾರು ಹದಿನೇಳು ವರ್ಷಗಳಿಂದ ತನ್ನ ಮನೆಯಲ್ಲಿ ಎಲ್ಲ ಕಷ್ಟಪಟ್ಟು ಮಾಡುವಂತಹ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಅದೇ ಮನೆಯ ಸದಸ್ಯನೆಂಬಂತೆ ಇರುವ ಒಬ್ಬ ವ್ಯಕ್ತಿಯನ್ನು ಕೇವಲ ತನ್ನ ವಿರುದ್ಧ ತಿರುಗಿ ಬಿದ್ದನಲ್ಲ ಕೀಳು ಜಾತಿಯವನು ಎಂದುಕೊಂಡು ಅವನನ್ನು ಸಾಯಿಸುವ ಹಂತಕ್ಕೆ ಯೋಚನೆ ಮಾಡಬಾರದಿತ್ತು.

ಎಂಥ ಹೀನ ಕುಲಸ್ಥರೇ ಆದರೂ ಸಹ ಒಬ್ಬ ವ್ಯಕ್ತಿಗೆ ತನ್ನ ಆತ್ಮಗೌರವ ಮತ್ತು ವ್ಯಕ್ತಿತ್ವಕ್ಕೆ ಅವಮಾನಗಳು ಆಗಬೇಕಾದರೆ ಅದನ್ನು ಅವರು ಸಹಿಸುವುದಿಲ್ಲ. ತನ್ನ ಕೈಲಾದ ಮಟ್ಟಿಗೆ ಅಂತಹ ಸಂದರ್ಭದಲ್ಲಿ ತಿರುಗಿ ಬೀಳುತ್ತಾರೆ. ಆದರೆ. ಕೊಲ್ಲುವವನೊಬ್ಬನಿದ್ದರೆ ಕಾಯುವವನೊಬ್ಬನಿರುತ್ತಾನೆ ಎಂಬ ಮಾತು ಈ ಕಥೆಯಲ್ಲಿ

ಬಹಳ ಚೆನ್ನಾಗಿ ಹೊಂದುತ್ತದೆ. ವೆಂಕಪ್ಪಯ್ಯರ ಎಲ್ಲ ಯೋಜನೆಗಳು ಅವರಿಗೆ ಕೈಕೊಟಟು ಉಲ್ಟಾ ಹೊಡೆದವು. ಅವರು ಕರಿಯನನ್ನು ಸಾಯಿಸಿಬಿಡಬೇಕು ಎಂದುಕೊಂಡು ಆ ಮುಳ್ಳು ಸೌತೆಕಾಯಿಯಲ್ಲಿ ವಿಷವನ್ನು ಬೆರೆಸಿ ಜಗ್ಗನ ಕೈಯ್ಯಲ್ಲಿ ಕಳಿಸಿದಾಗ ಅವರ ಪ್ರೀತಿಯ ಹುಂಜ ಅದನ್ನು ತಿಂದು ವಿಲ ವಿಲ ಒದ್ದಾಡುವಾಗ ಅತ್ತ ಇವರುಗಳಿಗೆ ಮೀನಿನ ಸಾರು ಊಟವನ್ನು ಬಡಿಸುತ್ತಿದ್ದಂತಹ ಉಮ್ಮಕ್ಕಯವರು ಏನದು ಎಂದು ಓಡಿ ಬಂದು ನೋಡಿ ಆ ಹುಂಜವನ್ನು ಎತ್ತಿ ಹಿಡಿದುಕೊಂಡಿದ್ದಾಗ ಅವರ ಮಡಿಲಿನಲ್ಲಿ ಆ ಹುಂಜವು ತನ್ನ ಪ್ರಾಣಬಿಟ್ಟಿತ್ತು. ಅಷ್ಟೊತ್ತಿಗೆ ಕರಿಯನು ತನ್ನ ಊರನ್ನು ಸೇರಿಕೊಂಡಿದ್ದನು. ಇತ್ತ ಕರಿಯನ ಪಾಲಿಗೆ ಬಂದಿದ್ದಂತಹ ಸಾವನ್ನು ಆ ಹುಂಜವು ತೆಗೆದುಕೊಂಡು ಹೋಯಿತು.

ಬೆಲ್ಲ

ಬೆಲ್ಲ ಎನ್ನುವಂತಹ ಈ ಕಥೆಯಲ್ಲಿ ದಲಿತರು ಅಥವಾ ಅವರ ಮೇಲಿನ ಬೆಸ್ತರು, ಗೌಡರು, ಶೆಟ್ಟರು ಹೀಗೆ ಮುಂತಾದ ಜಾತಿಗಳಿಗೆಲ್ಲ ಈ ಬ್ರಾಹ್ಮಣರು ಎನ್ನುವವರು ಅತ್ಯಧಿಕ ಮೇಲು ಜಾತಿಯವರು ಆದರೆ ಈ ಕಥೆಯಲ್ಲಿ ದಲಿತರನ್ನು ಕಂಡರೆ ಅವರನ್ನು ಹೊರತುಪಡಿಸಿ ಬೇರೆ ಎಲ್ಲರೂ ಕೂಡ ಅವರನ್ನು ಬಹಳ ಅ ಮನುಷ್ಯ ರೀತಿಯಲ್ಲಿ ನಡೆಸಿಕೊಳ್ಳುವುದಾಗಲಿ ಅವರನ್ನು ಶೋಷಣೆ ಮಾಡುವುದು ಖಂಡನೀಯ. ಆದರೆ, ಒಬ್ಬ ವಿದ್ಯಾವಂತ ಮೇಷ್ಟ್ರು ಆದರೂ ಕೂಡ ಅಲ್ಲಿನ ಜನರುಗಳಿಗೆ ಅವನ ವೃತ್ತಿಗಿಂತ ಅವನ ಜಾತಿಯೇ ಮುಖ್ಯವಾಗಿ ಬಿಡುತ್ತದೆ. ಆದರೆ, ಅವನು ವಿದ್ಯಾವಂತನಾದ್ದರಿಂದ, ಈ ರೀತಿಯ ಜಾತಿ-ಗೀತಿಗಳನ್ನು ಧಿಕ್ಕರಿಸಿ ಜಾತಿಯಲ್ಲಿಯೇ ಮೇಲುಸ್ತರದಲ್ಲಿ ಇದ್ದೀವಿ ಅಂತ ಕರೆದುಕೊಳ್ಳುವಂತಹ ಬ್ರಾಹ್ಮಣರ ಹುಡುಗಿಯನ್ನು ಕರೆದುಕೊಂಡು ಹೋಗುವಂತಹದು ಜಾತ್ಯಾತೀತ ನಿಲುವು. ಈ ಕಥೆಯಲ್ಲಿ ಬರುವಂತಹ ಅಪ್ಪಣ್ಣನಿಗೆ ಆ ಮಾಷ್ಟ್ರು ಹೊಲೆಯರು ಎಂದು ತಿಳಿಯುವ ಮೊದಲು ಅವರು ನೀಡಿದಂತಹ ಬೆಲ್ಲವು ಬಹಳ ರುಚಿಕರವಾಗಿರುತ್ತದೆ. ಆ ನಂತರ ಅವರು ಹೊಲೆಯರ ಜಾತಿಗೆ ಸೇರಿದ ವ್ಯಕ್ತಿ ಎಂದು ತಿಳಿದ ನಂತರ ಅವರು ಇನ್ನುಳಿದ ಆ ಬೆಲ್ಲದ ಗಟ್ಟಿಯನ್ನು ಅವನ ಮುಖಕ್ಕೆ ಎಸೆದು ಬರಬೇಕು. ಅದು ಸಾಧ್ಯವಾಗದಿದ್ದರೆ ಅದನ್ನು ಕಡಲಿಗೆ ಎಸೆಯಬೇಕು ಎನ್ನುವ ಆಲೋಚನೆ ಮೂಡಿಬರುವುದು. ಜಾತೀಯತೆಯ ದೃಷ್ಟಿಕೋನವನ್ನು ಎತ್ತಿ ತೋರಿಸುತ್ತದೆ. ಅಂತಹ ಹೊಲೆಯ ಮಾಷ್ಟ್ರ ತನ್ನ ಮನೆಯ ಅಂಗಳವನ್ನು ತುಳಿದಿದ್ದಕ್ಕೆ ತನ್ನ ಮನೆಯಲ್ಲಿರುವ ಭೂತ ದೇವರಿಗೆ ಮೈಲಿಗೆಯಾಗಿಬಿಟ್ಟಿದೆ. ಆದ ಕಾರಣ ನಮ್ಮ ಮನೆಯಲ್ಲಿ ಗಂಡ ಹೆಂಡತಿಯರ ನಡುವೆ ಮನಸ್ತಾಪ, ಜಗಳ ಇವುಗಳು ಕಂಡು ಬರುತ್ತಿವೆ. ಅದಕ್ಕೆ ಮುಂಚೆ ನಾವು ಸುಖವಾಗಿದ್ದೆವು ಎಂದು ಅವನು ಯೋಚಿಸುವುದು ಮತ್ತು ಅವರುಗಳ ಜೋಯಿಸರನ್ನು ಕರೆ ತಂದು ಮನೆಯಲ್ಲಿ ಶಾಂತಿ ಪೂಜೆಯನ್ನು ಮಾಡಿಸಿ ಶುದ್ಧ ಮಾಡಿಬಿಟ್ಟರೆ ಸಾಕು ಅವರಿಗೆ ಅವರ ಮನೆಗೆ ಅದರಲ್ಲೂ ವಿಶೇಷವಾಗಿ ಅವರ ಭೂತ ದೇವರಿಗೆ ಆಗಿರುವಂತಹ ಮೈಲಿಗೆ ಸರಿಯಾಗಿ ಬಿಡುತ್ತದೆ ಎಂದು ಮೂಢ ನಂಬಿಕೆಗಳ ಸುಳಿಯಲ್ಲಿ ಸಿಲುಕಿ, ಅನವಶ್ಯಕವಾಗಿ ಬೇರೆ ಬೇರೆ ವ್ಯಕ್ತಿಗಳಿಗೆ ಅನುಮಾನದ ಮಾತುಗಳನ್ನು ಆಡುವುದು ಎಷ್ಟು ಸರಿ.

ಈ ರೀತಿಯಾಗಿ ಜೋಯಿಸರನ್ನು ಕಾಣಲು ಅಪ್ಪಣ್ಣ ನಡೆದು ಹೋಗುವಾಗ ಅವನಿಗೆ ಸರಿಯಾದ ಜೊತೆಗಾರನೇ ಸಿಗುತ್ತಾನೆ. ಅವನೇ ವಾಂಟೀರಾಮ. ಇವನದು ಅದೇ ರೀತಿಯ ಮತ್ತೊಂದು ಕಥೆ. ಇವರ ಮನೆಯಲ್ಲಿ ಆ ಮೇಷ್ಟ್ರು ತನ್ನ ಉಪ್ಪಿನಕಾಯಿ ತುಂಬಿದ ಭರಣಿಯನ್ನು ಇಟ್ಟು ಹೋಗಿದ್ದಾನೆ. ಆದರೆ, ಈ ವಾಂಟೀರಾಮನ ಹೆಂಡತಿ ಅದರಲ್ಲಿನ ಉಪ್ಪಿನಕಾಯಿಯನ್ನು ಈ ರಾಮನಿಗೆ ಊಟದ ಜೊತೆಗೆ ದಿನವೂ ತಿನ್ನಿಸಿದ್ದಾಳೆ. ಅದು ಆದಷ್ಟು ಬೇಗ ಖಾಲಿಯಾಗಬೇಕೆಂಬುದು ಅವಳ ಹಂಬಲವಾಗಿರುತ್ತದೆ. ಈ ರೀತಿ ದಿನವೂ ಉಪ್ಪಿನಕಾಯಿಯನ್ನು ಚಪ್ಪರಿಸಿಕೊಂಡು ತಿನ್ನುವಾಗ ರಾಮನಿಗೆ ಆ ಮೇಷ್ಟ್ರು ಹೊಲೆಯವರ ಜಾತಿಗೆ ಸೇರಿದವನೆಂದು ತಿಳಿದಿದ್ದಿದ್ದರೆ ಅವನು ಆ ಉಪ್ಪಿನ ಕಾಯಿಯನ್ನು ತಿನ್ನುವುದಿರಲಿ! ಆ ಜಾಡಿಯನ್ನು ತನ್ನ ಮನೆಯ ಒಳಗೆ ಇಡಲು ಜಾಗವನ್ನೇ ಕಲ್ಪಿಸಿಕೊಡುತ್ತಿರಲಿಲ್ಲ. ಆದರೆ, ಅವನು ಉಪ್ಪಿನಕಾಯಿಯನ್ನು ಅರ್ಧಕ್ಕಿಂತರ ಹೆಚ್ಚು ತಿಂದು ಖಾಲಿ ಮಾಡಿಯಾಗಿದೆ. ಆದರೆ, ಈಗ ತಿಳಿಯಿತು. ಆ ಮೇಷ್ಟ್ರು ಜಾತಿಯ ಬಗೆಗೆ ಇದನ್ನು ಅರಿತು ಹೆಂಡತಿಗೆ ಹೊಡೆದು ಅವಳು ತನ್ನ ತಂದೆ ಮನೆಗೆ ಹೋದ ಮೇಲೆ ಈ ವಾಂಟೀ ರಾಮನು ಜೋಯಿಸರ ಮನೆಯ ಕಡೆಗೆ ಹೊರಟದ್ದಂತಹ ಅಪ್ಪಣ್ಣನ ಕೈಗೆ ಸಿಕ್ಕಿದ್ದೇ ತಡ, ಅವನ ಪೂರ್ವಾಪರಗಳನ್ನು ವಿಚಾರಿಸಿಕೊಂಡಂತಹ ಅಪ್ಪಣ್ಣ ಈ ವಾಂಟೀ ರಾಮನಿಗೂ ಕೂಡ ತಲೆಯನ್ನು ಕೆಡಿಸಿ, ಆ ಹೊಲೆಯ ಮೇಷ್ಟ್ರು ನಮ್ಮಗಳ ಮನೆಯನ್ನು ಹೊಕ್ಕಿ ಮೈಲಿಗೆ ಮಾಡಿರುವುದರಿಂದಲೇ ನಮ್ಮ ಭೂತ ದೇವರಿಗೆ ಕೋಪ ಬಂದು ಇಂತಹ ಘಟನೆಗಳು ನನ್ನ ನಿನ್ನ ಮನೆಯಲ್ಲಿ ಜರುಗಲು ಕಾರಣವಾಗಿದೆ. ಈಗ ಜೋಯಿಸರನ್ನು ಕಂಡು ಒಳ್ಳೆಯ ದಿನವನ್ನು ವಿಚಾರಿಸಿಕೊಂಡು ಅವರ ಸಂಬಂಧಿಯನ್ನು ಮನೆಗಳಿಗೆ ಕರೆದುಕೊಂಡು ಬಂದು ಶುದ್ಧದ ಕಾರ್ಯವನ್ನು ಮಾಡೋಣ ಎಂದು ರಾಮನನ್ನು ಕರೆದುಕೊಂಡು ನೇರ ಜೋಯಿಸರ ಮನೆಯ ದಾರಿ ಹಿಡಿಯುತ್ತಾರೆ. ಇಂತಹ ಮುಗ್ಧ ಜನರುಗಳ ತಲೆಯಲ್ಲಿ ಎಂತಹ ಮೂಢನಂಬಿಕೆ ಹಾಸು ಹೊಕ್ಕಾಗಿ ಮನೆ ಮಾಡಿಕೊಂಡು ಬಿಟ್ಟಿದೆ ಎಂದರೆ ಕೆಳಜಾತಿಗೆ ಸೇರಿದ ವ್ಯಕ್ತಿಯು ಮೈಲಿಗೆಯಿಂದ ದೇವರಿಗೆ ಕೋಪ ಬಂದಿದೆ ಎನ್ನುವುದು. ಈ ಜಾತಿ – ಭೇದಗಳನ್ನು ಕೇವಲ ಮಾನವರು ನಿರ್ಮಿಸಿಕೊಂಡಿರುವಂತಹ ಸಂಕೋಲೆಗಳು ಇವುಗಳಿಗೂ ದೇವರಿಗೂ ಸಂಬಂಧವೇ ಇಲ್ಲ. ಆ ದೇವರಿಗೆ ಯಾವ ಜಾತಿಯವನು ಬಂದು ಪೂಜೆ ಮಾಡಿದರೂ ಸಹ ಪೂಜೆ ಮಾಡಿಸಿಕೊಳ್ಳುತ್ತಾನೆ ಹೊರತು, ಕೆಳಜಾತಿಯವನು ಎಂದು ಆತನನ್ನು ನೀನು ಪೂಜೆ ಮಾಡಬೇಡ ಎಂದು ಹೇಳುವುದಿಲ್ಲ. ಹೀಗಿರುವಾಗ ಅಪ್ಪಣ್ಣನು ತನ್ನ ದೇವರಿಗೆ ಮೈಲಿಗೆಯಾಗಿದೆ ಎನ್ನುವುದು ಸತ್ಯಕ್ಕೆ ದೂರವಾದಂತಹುದು.

ವಿಪರ್ಯಾಸವೇನೆಂದರೆ, ತನ್ನ ದೇವರ ಮೈಲಿಗೆಯನ್ನು ತೊಳೆದು ಹಾಕಲು ಪೂಜೆ ಮಾಡಬೇಕಾಗಿರುವಂತಹ ಜೋಯಿಸರ ಮನೆಯನ್ನೇ ಮಾಷ್ಟ್ರು ಅಶುದ್ಧಗೊಳಿಸಿದ್ದಾರಲ್ಲ. ಅಂದರೆ, ಆ ಜೋಯಿಸರ ಮಗಳು ಈ ಮಾಷ್ಟ್ರ ಜೊತೆ ಓಡಿ ಹೋಗಿದ್ದಳು. ಇಂತಹ ಸುದ್ದಿಯನ್ನು ಕೇಳಿದ ಅಪ್ಪಣ್ಣ ವಾಪಸ್ಸು ತನ್ನ ಮನೆಯ ದಾರಿಯನ್ನು ಹಿಡಿಯುತ್ತಾನೆ. ಆದರೆ, ಅವರು ಬರುವುದನ್ನು ಭಯದಿಂದ ನೋಡಲಾರಂಭಿಸಿದ ಜೋಯಿಸರು ಏಕೆಂದರೆ, ಅವರು ಆ ಮಾಷ್ಟ್ರನನ್ನು ಕೈಕಾಲು ಮುರಿದು ಬಿಡಿ ಎಂದು ಭಾಡನಿಗೆ ನೂರು ರೂಪಾಯಿ ಹಣವನ್ನು ಕೊಟ್ಟು ಕಳುಹಿಸಿರುತ್ತಾನೆ. ಅವರ ಹತ್ತಿರ ಹಣವನ್ನು ಪಡೆದ ಭಾಡನು ಅವರ ಗೋಜಿಗೆ ಹೋಗದೆ ಆ ಹಣವನ್ನು ಖರ್ಚು ಮಾಡಿಕೊಂಡಿದ್ದನು. ಈ ಹಣದ ವಿಷಯದಲ್ಲಿ ಜೋಯಿಸರ ಮಗಳು ಓಡಿ

ಹೋಗಿರುವುದನ್ನೇ ಈ ಭಾಡ ಮತ್ತು ಪಂಗು ಎನ್ನುವಂತಹ ಹೊಲೆಯರಿಬ್ಬರು ಈ ವಿಷಯವನ್ನೇ ತಮ್ಮ ಸಾರಾಯಿಯ ಬಂಡವಾಳವನ್ನಾಗಿ ಮಾಡಿಕೊಂಡಿದ್ದರು. ಅವರ ಸಾರಾಯಿಯ ಬಂಡವಾಳಕ್ಕೆ ಜೋಯಿಸರು ದಿನವೂ ಎರಡು ರೂಪಾಯಿ ಹಣವನ್ನು ನೀಡಿ ನೀಡಿ ಸಾಕಾಗಿ ಹೋಗಿತ್ತು.

ಈ ಕಥೆಯಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದದ್ದು ಏನೆಂದರೆ, ಅಪ್ಪಣ್ಣನು ಮಾಪ್ಳ ತನ್ನ ಮನೆಗೆ ಹೊಕ್ಕಿದಾಗಿನಿಂದ ತನ್ನ ಭೂತ ದೇವರಿಗೆ ಮೈಲಿಗೆಯಾಗಿದೆ ಆದ ಕಾರಣ ಜೋಯಿಸರ ಕೈಯಿಂದ ಶುದ್ಧ ಮಾಡಿಸಬೇಕು ಎಂದು ತೀರ್ಮಾನಿಸಿದಾಗ ಜೋಯಿಸರ ಮನೆಯೇ ಅಶುದ್ಧದ ಕೊಳದಲ್ಲಿ ಮಿಂದು ಮೀಯುತ್ತಿದೆ ಎಂದು ಗೊತ್ತಾದಾಗ ಅವನು ತನ್ನ ಎಲ್ಲಾ ಅಶುದ್ಧಗಳನ್ನು ಮರೆತು ವಾಪಸ್ಸು ಹೋಗುವ ಸಂದರ್ಭ ಅವನಿಗೆ ಜ್ಞಾನೋದಯವಾದರೂ ಸಹ ಅವನು ತೋರ್ಪಡಿಸುವುದಿಲ್ಲ. ಯಾರ ಹತ್ತಿರವೂ ಹೇಳಿಕೊಳ್ಳುವುದಿಲ್ಲ. ಆ ಬೆಲ್ಲದ ಚೀಲವನ್ನು ಸಮುದ್ರಕ್ಕೆಸೆದು ಬಿಟ್ಟು ಈ ವಿಷಯವನ್ನು ಜನರ ಬಾಯಿಗೆ ಹಾಕಬಾರದು ಹಾಕಿದರೆ ತನ್ನ ಮರ್ಯಾದೆಯು ಹೋಗುತ್ತದೆ ಎಂದು ಯೋಚಿಸುತ್ತಾನೆ. ಇಲ್ಲಿ ಅಪ್ಪಣ್ಣ ನಿಜವಾಗಿಯೂ ಹೆದರಿಕೊಳ್ಳುತ್ತಿರುವುದು ಕೇವಲ ಮನುಷ್ಯರಿಗೆ ಮತ್ತು ಸಮಾಜಕ್ಕೆ, ದೇವರಿಗಲ್ಲ. ಅವನು ದೇವರಿಗೆ ಹೆದರಿಕೊಳ್ಳುವವನಾಗಿದ್ದರೆ, ತನ್ನ ಊರ ಜೋಯಿಸರು ಇಲ್ಲದಿದ್ದರೆ ಬೇರೆ ಊರಿನ ಜೋಯಿಸರನ್ನು ಕರೆಯಿಸಿ ತನ್ನ ಅಶುದ್ಧವಾದ ಮನೆ ಮತ್ತು ಮೈಲಿಗೆಯಾದ ದೇವರನ್ನು ಪರಿಶುದ್ಧದ ಕೆಲಸವನ್ನು ಮಾಡಬಹುದಿತ್ತು. ಆದರೆ ಅವನು ನಿಜವಾಗಲೂ ಕೂಡ ಈ ಸಮಾಜಕ್ಕೆ ಸಮುದಾಯಕ್ಕೆ ಹೆದರುತ್ತಿರುವುದರಿಂದ ಆ ವಿಷಯವನ್ನು ಮುಚ್ಚಿ ಹಾಕುವ ನಿರ್ಧಾರಕ್ಕೆ ಬರುತ್ತಾನೆ. ಮತ್ತು ಅದನ್ನು ಕಡಲಿಗೆ ಎಸೆದರೆ ಆಗುವಂತಹ ಲಾಭವಾದರೂ ಏನೂ ಇಲ್ಲ. ಅಂಗಡಿಗೆ ಕೊಟ್ಟರೆ ಅದರಿಂದ ಬರುವಂತಹ ಹಣದಲ್ಲಿ ತನ್ನ ಒಂದು ದಿನದ ಸಾರಾಯಿಯ ಬಂಡವಾಳಕ್ಕೆ ದಾರಿಯಾದೀತು ಎಂದು ಯೋಚಿಸುತ್ತಾನೆ.

ದಲಿತರು ಅಥವಾ ಕೆಳವರ್ಗದ ಕರಾವಳಿ ಭಾಗದಲ್ಲಿ ಮತ್ತು ಇನ್ನಿತರ ಬೇರೆ ಭಾಗಗಳಲ್ಲಿಯೂ ಸಹ ಹಲವಾರು ರೀತಿಯಲ್ಲಿ ಮೇಲ್ವರ್ಗದವರಿಂದ ಶೋಷಣೆಗೆ ಒಳಗಾಗಿರುತ್ತಾರೆ. ಅದರಲ್ಲಿಯೂ ಈ ಕರಾವಳಿಯ ಭಾಗದಲ್ಲಿ ಈ ದಲಿತರನ್ನು ಮೇಲ್ವರ್ಗದವರು ಹೆಚ್ಚು ಕಡಿಮೆ ಜಾತಿ ನಿಂದನೆಯ ನ್ನೇ ಮಾಡುತ್ತಾರೆ. ಅವರಿಗೆ ಬಯ್ಯುವಂತಹ ಸಂದರ್ಭದಲ್ಲಿ ಹೊಲೆಯನೇ ಅಥವಾ ಮಾದಿಗನೇ ಎಂದು ನೇರವಾದ ಮಾತುಗಳಿಂದ ಅಂತಹವರ ನಿಂದನೆಯನ್ನು ಮಾಡುತ್ತಾರೆ. ಆದರೆ ಇಂತಹ ಜಾತಿನಿಂದನೆಗಳಿಗೆಲ್ಲ ಆ ದಲಿತರು ಸ್ವಲ್ಪವೂ ತಲೆಕಡಿಸಿಕೊಳ್ಳುವುದಿಲ್ಲ. ಏಕೆಂದರೆ, ಅವರಲ್ಲಿನ ಬಡತನ, ಜೀವನದ ಕಷ್ಟಗಳಿಂದ ಅವರು ಹೈರಾಣಾಗಿ ಹೋಗಿರುತ್ತಾರೆ ಮತ್ತು ತಮಗೆ ಅನ್ನ ನೀಡುವಂತಹ ಧಣಿಗಳನ್ನು ದೇವರುಗಳೂ ಎಂದೇ ಭಾವಿಸಿರುತ್ತಾರೆ. ಇಂತಹ ಧಣಿಗಳ ಮನೆಯ ದನಕರುಗಳ ಕೆಲಸದಿಂದ ಹಿಡಿದು ಮನೆಯ ಕೆಲಸ ಈ ರೀತಿಯ ಪ್ರತಿಯೊಂದು ಕೆಲಸವನ್ನು ಅವರೇ ಮಾಡುತ್ತಾರೆ. ಈ ರೀತಿಯಾಗಿ ದುಡಿಸಿಕೊಳ್ಳುವಂತಹ ಧಣಿಗಳು ಅಥವಾ ಉಳ್ಳವರುಗಳು ಅವರ ದುಡಿಮೆಗೆ ತಕ್ಕಂತಹ ಪಡೆಯನ್ನು ನೀಡುವುದಿಲ್ಲ. ಇದರರ್ಥ ಆಳುಗಳಿಂದ ಗರಿಷ್ಠ ಕೆಲಸವನ್ನು ಮಾಡಿಸಿಕೊಂಡು ಕನಿಷ್ಠ ಕೂಲಿಯನ್ನು ನೀಡುವುದಿಲ್ಲ. ಕೆಲವೊಮ್ಮೆ ಎರಡು ಹೊತ್ತು ಊಟವನ್ನು ಬಿಟ್ಟರೆ, ಅವರಿಗೆ ಪಡಿ ಎಂದು ನಯ ಪೈಸೆ ಹಣವನ್ನಾಗಲೀ, ದವಸ ಧಾನ್ಯಗಳನ್ನಾಗಲೀ ಅವರು ನೀಡುವುದಿಲ್ಲ.

ಇಂತಹ ಶೋಚನೀಯ ಸ್ಥಿತಿಯಲ್ಲಿ ಅಲ್ಲಿನ ಕೆಳ ವರ್ಗದ ಜನರು ಎಂದು ಕರೆಯಿಸಿಕೊಳ್ಳುವಂತಹ ದಲಿತರುಗಳು ಸದಾ ಅನುಭವಿಸುತ್ತಿರುತ್ತಾರೆ.

ಇಲ್ಲಿ ಬರುವಂತಹ ಮಾಕಾಳಿ ಮಾಸ್ತರನು ಬ್ರಾಹ್ಮಣ್ತಿಯಾದಂತಹ ಜೋಯಿಸರ ಮಗಳನ್ನು ಕರೆದುಕೊಂಡು ಹೋಗಿ ತನ್ನ ಶಾಲೆಯ ಬೇಸಿಗೆ ರಜೆಯನ್ನು ಮುಗಿಸಿಕೊಂಡು ಮತ್ತೆ ಅದೇ ಊರಿಗೆ ತನ್ನ ಹೆಂಡತಿಯನ್ನು ಕರೆದು ಬರುವಂತಹ ಧೈರ್ಯ ಮಾಡುತ್ತಾನಲ್ಲ. ಅದು ಮತ್ತು ಅವನು ಆ ಹುಡುಗಿಯನ್ನು ಮದುವೆಯಾಗುವುದು ಇವುಗಳು ಒಬ್ಬ ದಲಿತರ ಹುಡುಗ ವಿದ್ಯೆಯನ್ನು ಕಲಿತರೆ ಹೇಗೆ ಸಮಾಜದ ಈ ವ್ಯವಸ್ಥೆ ವಿರುದ್ಧ ತಿರುಗಿ ಬೀಳಬಹುದು ಎಂಬುದನ್ನು ಇಲ್ಲಿ ತೋರಿಸುತ್ತದೆ. ಅದಕ್ಕೆ ಹೇಳುವುದು ಸಮಾಜದಲ್ಲಿನ ಸಮಸ್ಯೆಗಳು ತೊಲಗಬೇಕು ಎಂದರೆ ಅದಕ್ಕೆ ಈ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ವಿದ್ಯಾವಂತರಾದಾಗ ಒಂದು ಸುಶಿಕ್ಷಿತ ಸಮಾಜ ನಿರ್ಮಾಣವಾಗಿ ಈ ಸಾಮಾಜಿಕ ಪಿಡುಗು ಅಥವಾ ಸಮಸ್ಯೆಗಳು ಎಂದು ಕರೆಯಲ್ಪಡುವಂತಹವುಗಳೆಲ್ಲವೂ ತನ್ನಷ್ಟಕ್ಕೆ ತಾನೇ ನಿವಾರಣೆಯಾಗುತ್ತವೆ.

ಈ ಅಪ್ಪಣ್ಣ ಮತ್ತು ವಾಂಟೇ ರಾಮರಿಗೆ ತಮ್ಮ ತಮ್ಮ ಮನೆಯಲ್ಲಿ ಆ ಹೊಲೆಯ ಮಾಷ್ಟ್ರು ಬಂದು ಒಂದೊಂದು ವಸ್ತುವನ್ನು ಇಟ್ಟು ನಮ್ಮ ಮನೆ ಮತ್ತು ದೈವವನ್ನು ಅಶುದ್ಧ ಮಾಡಿದ್ದಾನೆ ಎಂದು ಕೋಪವಾದರೆ ಅವರ ಹೆಂಡತಿಯರಿಗೆ ಈ ಮೈಲಿಗೆಯ ಚಿಂತೆಗಿಂತ ಅವುಗಳನ್ನು ಕಾಯುವ ಕೆಲಸ ಬಲು ಕಷ್ಟವಾಗಿತ್ತು. ಹಾಗಾಗಿ ಚಿನ್ನಮ್ಮ ತನ್ನ ಗಂಡ ಅಪ್ಪಣ್ಣ ಜೋಯಿಸರ ಮನೆಯಿಂದ ಬರುವುದರೊಳಗೆ ಆ ಬೆಲ್ಲದ ಮೂಟೆಯನ್ನು ತರುತ್ತಿರುವುದು ಅಪ್ಪಣ್ಣನಿಗೆ ಕಾಣುತ್ತದೆ. ಅವಳು ಸೀದ ಆ ಬೆಲ್ಲದ ಮೂಟೆಯನ್ನು ನಾಯಕರ ಅಂಗಡಿಯಲ್ಲಿ ತೂಕಕ್ಕೆ ಹಾಕಿ ನಡೆಯುತ್ತಾಳೆ. ಇತ್ತ ಅಪ್ಪಣ್ಣನ ಕೈಗೆ ಬಂದ ತುತ್ತು ಬಾಯಿಗೆ ಬರದ ಹಾಗೆ ಸಪ್ಪೆ ಮೋರೆ ಹಾಕಿಕೊಂಡು ವಾಂಟೇರಾಮನ ಬರುವಿಕೆಗಾಗಿ ಕಾಯುತ್ತಿದ್ದಾಗ ಆತನೂ ಕೂಡ ಬರಿಗೈಯಲ್ಲಿ ಅಪ್ಪಣ್ಣನಿರುವ ಜಾಗಕ್ಕೆ ಬರುತ್ತಾನೆ. ಏಕೆಂದರೆ ವಾಂಟೇರಾಮನ ಹೆಂಡತಿ ರುಕುಮಿ ತನ್ನ ತವರು ಮನೆಗೆ ಹೋಗುವಾಗ ಆ ಉಪ್ಪಿನಕಾಯಿಯ ಜಾಡಿಯನ್ನು ಮನೆಯಲ್ಲಿಯೇ ಹೊಡೆದು ಚೂರು ಚೂರು ಮಾಡಿ ಹೋಗಿರುತ್ತಾಳೆ. ವಾಂಟೇ ರಾಮ ಈ ವಿಷಯ ಅಪ್ಪಣ್ಣನಿಗೆ ಹೇಳಿದಾಗ ಇಬ್ಬರೂ ನಗುತ್ತಾ ಸಾರಾಯ ಅಂಗಡಿ ಕಡೆಯ ದಾರಿ ಹಿಡಿಯುತ್ತಾರೆ. ಇಂತಹ ಸಮಯದಲ್ಲಿ ಅವರ ಮನೆ, ದೈವ ಎಲ್ಲವೂ ತನ್ನಷ್ಟಕ್ಕೆ ತಾನೇ ಶುದ್ಧವಾಗಿಬಿಟ್ಟಿತೇ ಎಂಬ ಪ್ರಶ್ನೆ ಈ ಸಮಾದಲ್ಲಿನ ಹುಳುಕನ್ನು ಎತ್ತಿ ತೋರಿಸುತ್ತದೆ.

ಮೀಯುವ ಆಟ

"ಮೀಯುವ ಆಟ" ಈ ಹೆಸರಿನಲ್ಲಿಯೂ ಆ ಭಗವಂತನು ಆಡಿಸುವಂತಹ ಆಟವನ್ನು ತೋರಿಸಬಹುದು. ಅಂದರೆ ಈ ಕಥೆಯು ದಲಿತರನ್ನು ಕೇವಲ ಒಂದೆರಡು ಕಡೆ ಮಾತ್ರ ತಿಳಿಸುತ್ತದೆ. ಅದೇ ರೀತಿ ಅಲ್ಪಸಂಖ್ಯಾತರು ಎಂದು ಗುರುತಿಸಲ್ಪಡುವಂತಹ ಮುಸ್ಲಿಂ ವಯೋವೃದ್ಧನಾದಂತಹ ಖಾದ್ರಿಬ್ಯಾರಿಯ ಸುತ್ತ ಸುತ್ತುವಂತಹ ಕಥೆ. ಈ ಕಥೆಗೆ ಇವರ ಪಾತ್ರವೇ ಪ್ರಮುಖ ಆಕರ್ಷಣೆ ಮತ್ತು ಕೇಂದ್ರ ಬಿಂದು.

ಕರಾವಳಿ ನಾಡಿನಲ್ಲಿ ಮೀಯುವುದು ಎಂದರೆ ಸ್ನಾನ ಮಾಡುವುದು ಎಂದು ಅರ್ಥೈಸುತ್ತಾರೆ. ಈ ರೀತಿ ದೇವರು ಆಡಿಸುವಂತಹ ಈ ಮೀಯುವ ಆಟದಲ್ಲಿ ಖಾದಿ ಬ್ಯಾರಿಯವರು ಕೊನೆಯವರೆಗೂ ಕೂಡ

ಗೆಲ್ಲುವುದಿಲ್ಲ. ಅವರು ಜೀವನದಲ್ಲಿ ಗೆದ್ದಿರುತ್ತಾರೆ. ಆದರೆ, ಈ ಮೀಯುವ ಆಟದಲ್ಲಲ್ಲ. ಈ ಬ್ಯಾರಿ ಸಾಹೇಬರು ಊರಿನ ಜನರುಗಳ ಹತ್ತಿರ ಮತ್ತು ಸುತ್ತಮುತ್ತಲ ಊರುಗಳಲ್ಲಿ ಬಹಳ ಉತ್ತಮ ವ್ಯಕ್ತಿ ಎನಿಸಿಕೊಂಡು ಬದುಕಿದಂತಹ ವ್ಯಕ್ತಿ.

ನಾಫಿಲ್ಲಿ ಪ್ರಮುಖವಾಗಿ ಗಮನಿಸಬೇಕಾದಂತಹ ವಿಷಯವೇನೆಂದರೆ, ಅದು ಖಾದ್ರಿ ಬ್ಯಾರಿ ಎನ್ನುವ ಕೆಳವರ್ಗದವರ ಜೀವನದ ಶೈಲಿ ಮತ್ತು ಘಟನೆಗಳನ್ನು ಏಕೆಂದರೆ ಖಾದ್ರಿಯವರು ಊರಿನಲ್ಲಿ ಯಾರ ಕೈಯ್ಯಲ್ಲೂ ದುರ್ನಡತೆಯ ವ್ಯಕ್ತಿ ಎನಿಸಿಕೊಂಡವರಲ್ಲ. ಅವರ ಏಕೈಕ ಗಂಡು ಸಂತಾನವು ಅವನ ಹೆಂಡತಿಯ ಸೆರಗು ಹಿಡಿದು ತನ್ನ ಜೀವನವನ್ನು ನಡೆಸುತ್ತಾ ತನ್ನ ಹೆತ್ತ ತಂದೆ ತಾಯಿಯರನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ. ಆದ ಕಾರಣ ಅವರ ತಾಯಿ ಖಾಯಿಲೆಯಿಂದ ಸಾವಿಗೀಡಾದರು. ಖಾದ್ರಿಯವರಿಗೆ ಇವನೊಬ್ಬನೇ ಮಗನಲ್ಲ. ಇವರ ಮುಂದೆ ಬರೋಬ್ಬರಿ ಆರು ಜನ ಹೆಣ್ಣು ಮಕ್ಕಳು. ಈ ಆರು ಜನ ಹೆಣ್ಣುಗಳ ನಂತರ ಹುಟ್ಟಿದವನೇ ಈ ಗಂಡು ಮಗ. ಹಾಗಾಗಿ ಅವನನ್ನು ಬಹಳ ಪ್ರೀತಿಯಿಂದ ಸಾಕಿರುತ್ತಾರೆ. ಆದರೆ ಹೆಂಡತಿ ಬಂದ ನಂತರ ಅವನು ಅಮ್ಮವರ ಗಂಡನಾಗಿ ಬಿಡುತ್ತಾನೆ. ಈ ಮುಸಲ್ಮಾನ್ ಧರ್ಮದಲ್ಲಿ ಬಹುಪತ್ನಿತ್ವ ಅಧಿಕೃತವಾಗಿಯೇ ನಡೆಯುತ್ತದೆ. ಏಕೆಂದರೆ ಅವರ ಜನಸಂಖ್ಯೆಯು ಬೇಗ ಬೇಗ ಬೆಳೆಯಲಿ ಎಂಬ ಕಾರಣವನ್ನು ನೀಡುತ್ತಾರೆ. ಆದರೆ ಈ ಖಾದ್ರಿ ಬ್ಯಾರಿಯವರು ಬಹುಪತ್ನಿತ್ವವನ್ನು ಹೊಂದಿರಲಿಲ್ಲ. ಆದರೆ ಮಕ್ಕಳನ್ನು ಯಥೇಚ್ಛವಾಗಿಯೇ ಮಾಡಿಕೊಂಡರು. ಹೀಗೆ ಬಯಸಿ ಬಯಸಿ ಮಾಡಿಕೊಂಡಂತಹ ಗಂಡು ಸಂತಾನದ ಹೆಂಡತಿಯ ಹರಕು ಬಾಯಿಯಿಂದ ಆ ಮನೆಯ ಹೆಣ್ಣು ಮಕ್ಕಳುಗಳು ತನ್ನ ತವರು ಮನೆಯ ಆಸೆಯನ್ನೇ ಮರೆತುಬಿಟ್ಟವು.

ಖಾದ್ರಿಯವರು ತಮ್ಮ ಕೈ ನಡೆಯುವಾಗಲೇ ತಮ್ಮ ಎಲ್ಲ ಮಕ್ಕಳಿಗೂ ಮದುವೆ ಮತ್ತು ಬಾಣಂತನಗಳನ್ನು ಯಶಸ್ವಿಯಾಗಿ ಮಾಡಿದ್ದರು. ಮುಸಲ್ಮಾನರು ಅಂದರೆ ಅವರು ಎಂತಹ ಕೆಲಸವಾದರೂ ಸರಿ ಅದನ್ನು ಮಾಡುತ್ತಾರೆ. ಏಕೆಂದರೆ ಬದುಕಲು ಏನಾದರೊಂದು ಮಾಡಬೇಕಲ್ಲ ಎಂಬುದು ಅವರ ಮಾಥು ಆದರೆ ಈ ಖಾದ್ರಿಬ್ಯಾರಿಯವರು ಛತ್ರಿ ರಿಪೇರಿಯಿಂದ ಹಿಡಿದು ಹೆಂಗಸರ ಕುಬುಸ ಹೊಲೆಯುವವರೆಗಿನ ಎಲ್ಲಾ ಕೆಲಸಗಳನ್ನು ಮಾಡಿ ಅವುಗಳಿಂದ ಭಾರಿ ಜನ ಮನ್ನಣೆಯನ್ನು ಪಡೆದಿದ್ದವರು. ಹೀಗೆ ಜೀವನದ ಚಕ್ರವನ್ನು ಉರುಳಿಸುತ್ತಿದ್ದವರಿಗೆ ತನ್ನ ಹೆಂಡತಿ ಸತ್ತ ನಂತರ ಒಂದು ವಾತದ ಖಾಯಿಲೆ ಅವರ ಜೊತೆಗಿತ್ತು. ಅದಕ್ಕೆ ಬಿಸಿ ನೀರ ಸ್ನಾನವೇ ಸರಿಯದ ಮದ್ದು. ಆದರೆ, ತನ್ನ ಸೊಸೆಯ ದೌಲತ್ತಿನಲ್ಲಿ ಇವರು ದಿನವೂ ಬಿಸಿನೀರ ಸ್ನಾನ ಮಾಡುವುದಾದರೂ ಎಲ್ಲಿ. ಅವರು ಒಮ್ಮೆ ತನ್ನ ಮೊಮ್ಮಕ್ಕಳ ಕೈಯಲ್ಲಿ ಸೊಸೆಗೆ ಈವತ್ತಿನ ಊಟ ಬೇಡ ಬಿಸಿನೀರ ಸ್ನಾನ ಬೇಕು ಅಂತ ಹೇಳಿ ಕಳುಹಿಸುವ ಪ್ರಸಂಗವೂ ನಡೆಯುತ್ತದೆ. ಅಂದರೆ ಅವರ ಹೊಟ್ಟೆ ತುಂಬುವ ಊಟಕ್ಕಿಂತ ತನ್ನ ವಾತ ರೋಗಕ್ಕೆ ಬಿಸಿನೀರು ಸಕ್ಕರೆ ಸಾಕು ಎನ್ನುವುದು ಅವರ ಹಂಬಲವಾಗಿತ್ತು. ಇತ್ತ ಕಡೆ ವೆಂಕಪ್ಪ ಶೆಟ್ಟರ ಮಗಳು ಸುಮತಿ ಹೆರಿಗೆಯ ಸಮಯ ಹತ್ತಿರ ಬರುತ್ತದೆ. ಅದು ಮಳೆಗಾಲವಾದ್ದರಿಂದ, ಅಂತಹ ದಿನಗಳಲ್ಲಿ ಈ ಬಿಸಿ ನೀರನ್ನು ಕಾಯಿಸಿಕೊಳ್ಳುವುದೇ ಒಂದು ದೊಡ್ಡ ಸಮಸ್ಯೆ. ಏಕೆಂದರೆ, ಸೌದೆಗಳು, ತೆಂಗಿನ ಗರಟೆಗಳನ್ನು ಸಂಗ್ರಹಿಸಿರುತ್ತಾರೆ. ಅವು ಮಳೆಗಾಲ ಮುಗಿಯುವವರೆಗೂ ಕೂಡ ಬರಬೇಕು. ಅವು ಖಾಲಿ ಆದರೆ ಮತ್ತೆ ಮಳೆಯ ನೀರಿನಲ್ಲಿ ನೆನೆದಿರುವವು ಬೆಂಕಿಯಲ್ಲಿ ಉರಿಯುವುದಿಲ್ಲ.

ಇಂತಹ ಮಳೆಗಾಲದಲ್ಲಿ ಸುಮತಿಯ ಬಾಣಂತನವು ಬಂದೇ ಬಿಡುತ್ತದೆ. ಅದಕ್ಕೆ ಬಾಣಂತಿ ನೀರು ಕಾಯಿಸಿ ಕೊಡಲು ಒಬ್ಬ ವ್ಯಕ್ತಿಯನ್ನು ಹುಡುಕಿ ತನ್ನ ಒಕ್ಕಲ ಮಕ್ಕಳನ್ನೂ ಕೇಳಿ ಅವರಿಂದ ಇಲ್ಲ ಎಂಬ ಉತ್ತರವನ್ನು ಕೇಳಿಕೊಂಡು ಬರುತ್ತಾರೆ. ಕೊನೆಗೆ ತನ್ನ ತಂದೆಯ ವಯಸ್ಸಾಗಿರುವ ತಂದೆಯ ಸ್ನೇಹಿತರೂ ಆಗಿರುವ ಈ ಬ್ಯಾರಿಯವರನ್ನು ಸಲಹೆ ಕೇಳಿ ಪರಿಹಾರ ಕಂಡುಕೊಳ್ಳೋಣವೆಂದು ವೆಂಕಪ್ಪ ಶೆಟ್ಟರು ಈ ಬಾಣಂತಿ ನೀರು ಕಾಯಿಸುವಿಕೆಯ ವಿಷಯವನ್ನು ಅವರಿಗೆ ತಿಳಿಸಿದಾಗ ಅಲ್ಲಿ ಸ್ವತಃ ಖಾದ್ರಿ ಬ್ಯಾರಿಯವರೇ ಒಪ್ಪಿಗೆ ಸೂಚಿಸುತ್ತಾರೆ. ಅದಕ್ಕೆ ಕಾರಣವೆಂದರೆ ಬಿಸಿ ನೀರಿನಲ್ಲಿ ಬಾಣಂತಿಯು ಮಿಂದು ಆದ ಮೇಲೆ ಉಳಿದ ನೀರಿನಲ್ಲಿ ನೀವು ಮೀಯಬಹುದು ಎಂಬ ಆಸೆಯನ್ನೆ ವೆಂಕಪ್ಪ ಶೆಟ್ಟರು ಖಾದ್ರಿಯವರಿಗೆ ತೋರಿಸಿದ್ದಕ್ಕೆ ಅವರು ಹಿಂದು ಮುಂದು ನೋಡದೇ ಒಪ್ಪಿಗೆಯನ್ನು ಸೂಚಿಸಿ ನಾನೇ ಬಾಣಂತಿ ನೀರನ್ನು ಕಾಯಿಸಿ ಕೊಡುತ್ತೇ ಎಂದು ಹೇಳುತ್ತಾರೆ. ಅದೇ ರೀತಿ ಅವರು ಬಾಣಂತಿ ನೀರನ್ನು ಪ್ರತಿ ದಿನವೂ ಕಾಯಿಸಿಕೊಡುತ್ತಾರೆ. ಆದರೆ ಯಾವತ್ತೂ ಕೂಡ ಅವರು ಮೀಯುವ ಅವಕಾಶವನ್ನು ವೆಂಕಪ್ಪ ಶೆಟ್ಟರ ಹೆಂಡತಿ ಉಮ್ಮಕ್ಕೆಯವರು ಈ ಖಾದ್ರಿ ಬ್ಯಾರಿಯವರಿಗೆ ನೀಡಿಯೇ ಇರಲಿಲ್ಲ. ಆದ ಮಾತ್ರಕ್ಕೆ ಉಮ್ಮಕ್ಕೆಯವರು ಬಹಳ ಕೆಟ್ಟವರು ಎಂದೇನಲ್ಲ. ಅವರು ತುಂಬ ಒಳ್ಳೆಯ ಹೆಂಗಸು. ಈ ಬ್ಯಾರಿಯವರದು ಉಮ್ಮಕ್ಕೆಯ ತಂದೆಯ ವಯಸ್ಸು ಮತ್ತು ಅವರಿಗೆ ಬಹಳ ಪರಿಚಯವಾಗಿದ್ದಂತಹ ವ್ಯಕ್ತಿಯಾಗಿದ್ದರು.

ಈ ರೀತಿ ದಿನವೂ ಬಾಣಂತಿ ನೀರನ್ನು ಕಾಯಿಸಿಕೊಡುತ್ತಿದ್ದಂತಹ ಖಾದ್ರಿಯವರಿಗೆ ಮೀಯುವಂತಹ ಒಂದೇ ಒಂದು ಅವಕಾಶವೂ ಸಿಗದೇ ಇರಲು ಪ್ರಮುಖ ಕಾರಣವಿದೆ. ಮೊದಲೇ ಹೇಳಿದಂತೆ ಅದು ಮಳೆಗಾಲ ಶೇಖರಿಸಿಟ್ಟಿರುವಂತಹ ಗೆರಟೆ ಸೌದೆಗಳೆಲ್ಲವೂ ಮಳೆಗಾಲ ಮುಗಿಯುವವರೆಗೆ ಬರಬೇಕು. ಹಾಗಾಗಿ ಕೇವಲ ಸ್ವಲ್ಪ ಉಗುರು ಬೆಚ್ಚಗಾಗುವ ಹಾಗೆ ನೀರು ಕಾದರೆ ಸಾಕು, ಬಿಡಿ ಎಂದು ಹೇಳಿ ಬಾಣಂತಿಯನ್ನು ಕರೆದುಕೊಂಡು ಮಗುವನ್ನು ಎತ್ತಿಕೊಂಡು ಬಚ್ಚಲು ಮನೆಗೆ ಕರೆದುಕೊಂಡು ಬರುತ್ತಿದ್ದರು. ಆಗ ಖಾದ್ರಿಯವರು ಎದ್ದು ನೇರವಾಗಿ ತಮ್ಮ ಮನೆಯ ದಾರಿ ಹಿಡಿಯುತ್ತಿದ್ದರು. ಮೊದಲೇ ಹೇಳಿದಂತೆ ವಾತಕ್ಕೆ ಬಿಸಿ ನೀರ ಸ್ನಾನವೇ ನಿಜವಾದ ಮದ್ದು ಎನ್ನುವ ಹಾಗೆ. ಖಾದ್ರಿಯವರ ಈ ಬಿಸಿನೀರ ಮೀಯುವ ಆಸೆಗೆ ಊರಿನ ಹಲವಾರು ಜನರುಗಳ ಬಚ್ಚಲು ಮನೆಗಳು, ಮೂಕ ಸಾಕ್ಷಿಯಾಗಿವೆ. ಅದು ಕೇವಲ ಮಳೆಗಾಲವನ್ನೆ ಹೊರತುಪಡಿಸಿ ಮಳೆಗಾಲದಲ್ಲಿ ಮಾತ್ರ ಯಾರುಊ ಕೂಡ ಇಂತಹ ಉದಾರ ಹೃದಯವನ್ನು ತೋರಿಸುತ್ತಿರಲಿಲ್ಲ. - ಹಾಗಾಗಿ ಸಾಹೇಬರು ಈ ಬಾಣಂತಿ ನೀರು ಕಾಯಿಸಿ ತಾನು ಕೂಡ ದಿನವೂ ಬಿಸಿ ನೀರಲ್ಲಿ ಮೀಯುವ ಆಸೆಯನ್ನು ಚಿಗುರಿಸಿಕೊಂಡಿದ್ದರು. ಹೀಗೆ ನೀರು ಕಾಯಿಸುವಾಗ ಉಮ್ಮಕ್ಕೆಯ ಮಾತಿಗೆ ತನ್ನ ಮನಸ್ಸಿನಲ್ಲೆ "ಹೊಗೆ ಘಾಟಿನ ಏಟನ್ನಾದರೂ ಸಹಿಸಿಕೊಳ್ಳಬಲ್ಲೆ – ಆದರೆ ಈ ಶೆಟ್ಟಿಯವರ ಮಾತಿನ ಏಟನ್ನು ಸಹಿಸಿಕೊಳ್ಳಲಾರೆ ಎಂದು ಅಂದುಕೊಂಡದ್ದಿದೆ. ಹೀಗೆ ಸುಮಾರು ದಿನಗಳವರೆಗೆ ನೀರು ಕಾಯಿಸಿ ಒಂದು ದಿನವೂ ಅದರಲ್ಲಿ ಮೀಯದ ಖಾದ್ರಿಯವರು ಬಹಳಷ್ಟು ದುಃಖವನ್ನು ತುಂಬಿಕೊಂಡು ಶೆಟ್ಟರ ಮನೆಯಲ್ಲಿ ತನ್ನ ಆತ್ಮಗೌರವಕ್ಕಾದ ಪುಟ್ಟ ಪೆಟ್ಟನ್ನು ನೆನೆದು ಅದನ್ನು ಮರೆಯಲೆಂದು ಮನೆಗೆ ಬಂದು ತನ್ನ ಮೊಮ್ಮಕ್ಕಳ ಜೊತೆ ಮಾತಿಗೆ ಇಳಿದಿದ್ದರು. ಆವರ ಮೊಮ್ಮಗಳು ಜೋಹರ ಅಜ್ಜನಿಗೆ ತಿನ್ನಲು ಊಟ ತಂದಿಟ್ಟು ತನ್ನ ಅಜ್ಜನ ವಾತದ ಕಾಲುಗಳನ್ನು

ಇಸುಕುತ್ತಿದ್ದಾಗ ಬ್ಯಾರಿಯವರು ತನ್ನ ಕಣ್ಣುಗಳಲ್ಲಿ ಹನಿಗಳನ್ನು ತುಂಬಿಕೊಂಡು ಒಂದೆರಡು ತುತ್ತು ತಿಂದು ಒಂದೇ ಒಂದು ತೇಗು ಬಂದಂತ್ತಾಯ್ತು ತಲೆ ತಿರುಗತೊಡಗಿತು. ಆ ಖಾದ್ರಿಯವರು ಬಾಯಲ್ಲಿ ಅನ್ನದ್ದು ತುತ್ತಿಟ್ಟು ಕೊಂಡೆ ತನ್ನ ಮೊಮ್ಮಗಳು ಜೋಹರಾಳ ತೊಡೆಯ ಮೇಲೆ ತಲೆ ಒರಗಿಸಿ ಮಲಗೇ ಬಿಟ್ಟರು. ಆಗ ಅವರು ಶಾಶ್ವತವಾಗಿ ಮಲಗಿದ್ದು. ಹೀಗೆ ತನ್ನ ಮೊಮ್ಮಗಳ ಮಡಿಲಿನಲ್ಲಿ ತನ್ನ ಪ್ರಾಣವನ್ನು ಬಿಟ್ಟಂತಹ ಖಾದ್ರಿ ಬ್ಯಾರಿಯವರು ಆ ಮೀಯುವ ಆಟದಲ್ಲಿ ಆಡಿ ಗೆಲ್ಲುವುದಿರಲಿ, ಕೇವಲ ಭಾಗವಹಿಸಲೇ ಇಲ್ಲ. ಆ ಮೀಯುವ ಆಟದಲ್ಲಿ ಭಾಗವಹಿಸಲು ಅರ್ಹತೆ ಪಡೆಯುವಂತಹ ಹಂತದಲ್ಲಿಯೇ ಸೋತುಬಿಟ್ಟರು. ಆದರೆ, ಕಡೆಗೆ ಅವರನ್ನು ಅಂದರೆ ಜೀವವಿಲ್ಲದ ಅವರನ್ನು ಸುಡುಸುಡು ಸುಡುವಂತಹ ಬಿಸಿ ನೀರನಲ್ಲಿ ಮೀಯಿಸಿದರು. ಈ ಕೊನೆಯ ಆಟ ಕೇವಲ ಅವರ ದೇಹಕ್ಕೆ ಹೊರತು, ಅವರ ಆತ್ಮಕ್ಕಲ್ಲ.

ಖಾದ್ರಿಯವರ ಆ ಸಾವಿನ ಸುದ್ದಿ ತಿಳಿದಂತೆ ಊರಿನ ಜಾರಿ ಜನಸ್ತೋಮವೇ ಬಂದು ಸೇರಿ, "ಇದು ಎಂಥಾ ಸಾವು, ಹೂವೆತ್ತಿದಷ್ಟು ಹಗುರ! ಲಕ್ಷದಲ್ಲೊಬ್ಬರಿಗೆ ಇಂಥ ಸಾವು ಮಾರಾಯ್ರೆ! ನಾಕು ಮಂದಿಗೆ ಬೇಕಾಗಿ ಬದುಕಿದ ಜೀವಕ್ಕೆ ಇಂಥ ಸಾವಲ್ಲದೆ ಆ ಅಲ್ಲಾಹು ಬೇರೆಂಥಾ ಸಾವು ಕರುಣಿಸುತ್ತಾನೆ. ಇವರು ಪುಣ್ಯಾತ್ಮರಪ್ಪ! ನಮಗೂ ಇಂಥ ಸಾವು ಬರಲಿ" ಎಂದು ಅಲ್ಲಿ ನೆರೆದಿದ್ದಂತಹ ಜನಸ್ತೋಮವು ಜಾತಿ ಭೇದವಿಲ್ಲದೇ ಕಣ್ಣೀರು ಸುರಿಸುತ್ತಾ ಹೀಗೆ ಮಾತನಾಡಿಕೊಳ್ಳುತ್ತಿದ್ದರು. ಖಾದ್ರಿಯವರ ಸಾವಿನ ಸುದ್ದಿ ಸುತ್ತಲ ಹಳ್ಳಿಗಳಿಗೂ ತಲುಪಿತು. ಆದರೆ ಅದು ವೆಂಕಪ್ಪ ಶೆಟ್ಟರ ಕುಟುಂಬ ತಲುಪುವುದು ಸ್ವಲ್ಪ ತಡವಾಗಿತ್ತು. ಏಕೆಂದರೆ ಕುಟುಂಬ ಸಮೇತ ದೇವಸ್ಥಾನಕ್ಕೆ ಹೋಗಿರುತ್ತಾರೆ. ಅಲ್ಲಿಂದ ಬಂದ ನಂತರ ಈ ಸುದ್ದಿ ತಲುಪುತ್ತದೆ. ಉಮ್ಮಕ್ಕೆ ಮತ್ತು ಸುಮತಿ ಮೌನಕ್ಕೆ ಶರಣಾದರು. ಏಕೆಂದರೆ ಬ್ಯಾರಿಯವರು ಈ ಮುದಿ ವಯಸ್ಸಿನಲ್ಲಿಯೂ ಪುಟ್ಟ ಮಗುವಿನಂತೆ ನಿಷ್ಕಳಂಕ ಮನಸ್ಸಿಟ್ಟುಕೊಂಡು ಪ್ರೀತಿ ವಿಶ್ವಾಸಗಳನ್ನು ತೋರಿಸುತ್ತಿದ್ದರು. ಈ ಸಾವಿರ ಸುದ್ದಿ ಕೇಳಿ ಉಮ್ಮಕ್ಕೆ ಜಗತ್ತಿನ ಪ್ರೀತಿಯನ್ನೆಲ್ಲಾ ಕಳೆದುಕೊಂಡಂತಹ ಅನುಭವವಾಗುತ್ತದೆ. ಇಂತಹ ಸಂದರ್ಭದಲ್ಲಿ ಉಮ್ಮಕ್ಕೆ ತಾನು ಬವಳಿಗ್ಗೆ ಸಾಹೇಬರಿಗೆ ಆಡಿದ ಮಾತುಗಳನ್ನು ನೆನೆದು ಪಶ್ಚಾತ್ತಾಪಗೊಂಡು ತನ್ನ ತಂದೆ ಹೇಳಿದ ಮಾತನ್ನು ನೆನಪಿಸಿಕೊಂಡರು. 8"ನಮ್ಮ ವಯಸ್ಸು ಹೆಚ್ಚಿದಂತೆಲ್ಲ, ನಮ್ಮ ಮನಸ್ಸು ಬೆಳೆಯಬೇಕು. ಬುದ್ಧಿಯೂ ಬೆಳೆಯಬೇಕು, ಭಾವವೂ ಬೆಳೆಯಬೇಕು. ಆದರೆ, ನಮ್ಮ ಒಳಗಿನ ಗುಣ ಸ್ವಭಾವಗಳು ಎಳಸಾಗಿಯೇ ಉಳಿಯಬೇಕು"8 ಎಂಬ ಈ ಅರ್ಥಪೂರ್ಣ ಸಾಲುಗಳನ್ನು ನೆನೆದು ಕಣ್ಣೀರ ಧಾರೆ ಸುರಿಸತೊಡಗಿದರು. ಇತ್ತ ಶೆಟ್ಟರು ಆ ಶವ ಸಂಸ್ಕಾರದಲ್ಲಿ ಭಾಗವಹಿಸಲು ಬರುತ್ತಾರೆ.

ಅಲ್ಲಿ ಜಾತಿ ಭೇದವಿಲ್ಲದೇ ನೂರಾರು ಜನರು ಬಂದು ನೆರೆದಿರುತ್ತಾರೆ. ಇನ್ನೇನು ಹೆಣಕ್ಕೆ ಮೀಯಿಸಬೇಕು. ಆದರೆ ನೀರೇ ಬಿಸಿಯಾಗಿರುವುದಿಲ್ಲ. ಮೊಮ್ಮಕ್ಕಳು ಆ ಹಸಿ ಸೌದೆಗಳಲ್ಲಿ ನೀರನ್ನು ಕಾಯಿಸಲು ಹರಸಾಹಸ ಪಡುತ್ತಿರುತ್ತಾರೆ. ಆದರೆ, ಸೊಸೆ ನಫೀಸಮ್ಮ ತನ್ನ ಮಾವ ಬದುಕಿದ್ದಾಗಲಂತು ಬಿಸಿ ಬಿಸಿ ನೀರು ಕಾಯಿಸಿ ಮೀಯಲು ನೀಡಲಿಲ್ಲ. ಆದರೆ, ಸತ್ತಾಗಲಾದರೂ ನೀರು ಕಾಯಿಸಲು ಸೌದೆಗಳನ್ನು ನೀಡದೇ ತನ್ನ ದೌಲತ್ತನ್ನು ನೆರೆದಿದ್ದಂತಹ ಜನರುಗಳ ಎದುರು ತೋರಿಸುತ್ತಿರುವಾಗ ಶೆಟ್ಟರು ನೇರ ತನ್ನ ಮನೆಯ ಕೊಟ್ಟಿಗೆಯಲ್ಲಿ ಇದ್ದಂತಹ ಸೌದೆಗಳನ್ನು ಸ್ವತಃ ತಾವೆ ತಂದು ಆ ಮಕ್ಕಳನ್ನು ಎಬ್ಬಿಸಿ ಅವರೇ ನೀರು

ಕಾಯಿಸಿ, ಬ್ಯಾರಿಯವರ ದೇಹಕ್ಕೆ ಸ್ನಾನ ಮಾಡಿಸುತ್ತಿರಬೇಕಾದರೆ ಬೇರೆ ಬೇರೆ ಜಾತಿಯ ಜನರುಗಳು ಸಾಹೇಬರಿಗೆ ತಮ್ಮ ಅಂತಿಮ ನಮನಗಳನ್ನು ಸಲ್ಲಿಸಿ ಅಲ್ಲಿಂದ ತಮ್ಮ ತಮ್ಮ ಮನೆಗಳ ಹತ್ತಿರ ಹೋಗುವಾಗ ಅಲ್ಲಿಗೆ ಬಂದಂತಹ ಉಮ್ಮಕ್ಕೆಯವರು ಕಣ್ಣೀರು ಸುರಿಸುತ್ತಾ ತನ್ನ ಗಂಡ ಬೆಳಿಗ್ಗೆ ಅವರಿಗೆ ಅಂದಿದ್ದ ಮಾತನ್ನು ನೆನೆಸಿಕೊಳ್ಳುತ್ತಾರೆ. ಅದೇನೆಂದರೆ, ಆನೆ ಹೋದ ದಾರಿಯಲ್ಲಿ ಆಡು ಹೋಯಿತು ಮಾರಾಯ್ತಿ. ಆದರೆ, ಆಡು ಹೋದ ದಾರಿಯಲ್ಲಿ ಆನೆ ಎಂದೂ ಸಾಗದು ಎಂಬಂಥ ಮಾತುಗಳನ್ನು ನೆನಪಿಸಿಕೊಂಡು ಉಮ್ಮಕ್ಕ ಕಣ್ಣೀರ ತರ್ಪಣವನ್ನು ಬಿಡುತ್ತಾರೆ. ಅಂದರೆ, ಅಂತಹ ಉಪಕಾರದ ಮುದಿ ಜೀವಕ್ಕೆ ತಮ್ಮಿಂದ ಎಂದೂ ಸಹ ನೋವನ್ನು ನೀಡಬಾರದು. ತಮ್ಮ ಕೈಲಾದರೆ ಸಹಾಯ ಮಾಡಬೇಕು. ಇಲ್ಲದಿದ್ದರೆ ಸುಮ್ಮನೆ ಇದ್ದು ಬಿಡಬೇಕು. ನೋವನ್ನು ಮಾತ್ರ ನೀಡಬಾರದು.

ಈ ರೀತಿಯಾಗಿ ಮೀಯುವ ಆಸೆಯನ್ನು ಇಟ್ಟುಕೊಂಡಿದ್ದಂತಹ ಮುದಿ ಜೀವಕ್ಕೆ ಆ ದೇವರು ಕೊನೆಗೂ ಮೀಯಿಸಿ ಅದು ಕೇವಲ ರಕ್ತ, ಮಾಂಸಖಂಡ, ಮೂಳೆಗಳು ತುಂಬಿದ ದೇಹಕ್ಕೆ ವಿನಃ ಆ ದೇಹದಲ್ಲಿ ಇರದಿದ್ದ ಜೀವಕ್ಕಲ್ಲ (ಆತ್ಮಕ್ಕಲ್ಲ).

ತಾಯ್ತನ

ಈ ತಾಯ್ತನ ಕಥೆಯ ಕೇವಲ ಒಂದು ಹೆಣ್ಣು ನೋವನ್ನು ಅನುಭವಿಸಿ ತನ್ನ ಕರುಳ ಕುಡಿಯನ್ನು ಈ ಜಗತ್ತಿಗೆ ಪರಿಚಯ ಮಾಡಿಕೊಡುವಂತಹ ಸನ್ನಿವೇಶವನ್ನು ಹೇಳುವುದಿಲ್ಲ. ಅದರ ಜೊತೆಗೆ ಎರಡು ಧರ್ಮಗಳ ಜನರುಗಳು ಒಂದು ಪ್ರದೇಶದಲ್ಲಿ ಹೇಗೆ ಪ್ರೀತಿ-ಸಾಮರಸ್ಯಗಳಿಂದ ತಮ್ಮ ತಮ್ಮ ಬದುಕನ್ನು ನಡೆಸಿಕೊಂಡು ಹೋಗಬೇಕು ಎನ್ನುವಂತಹ ಸ್ಪಷ್ಟ ಸಂದೇಶವನ್ನೂ ಕೂಡ ಈ ತಾಯ್ತನ ಕಥೆಯು ತೋರಿಸಿಕೊಡುತ್ತದೆ. ಅಂದರೆ, ಒಂದು ಹೆಣ್ಣಿನ ಜನ್ಮ ಸಾರ್ಥಕತೆಯನ್ನು ಪಡೆಯಬೇಕು ಎಂದರೆ ಆ ಹೆಣ್ಣು ತಾಯಿಯಾಗಬೇಕು ಎಂಬ ಮಾತು ಇದೆ. ಈ ರೀತಿ ತಾಯಿಯಾಗುವಂತಹ ಹೆಣ್ಣು ತನ್ನ ಹೆರಿಗೆಯ ಸಮಯದಲ್ಲಿ ಅದನ್ನು ಗೆದ್ದು ಪುನರ್ಜನ್ಮವನ್ನು ಪಡೆದಿರುತ್ತಾಳೆ. ಆ ರೀತಿಯಾಗಿ ಪುನರ್ಜನ್ಮವನ್ನು ಪಡೆದರೆ ಮಾತ್ರ ತಾಯಿ ಎಂದು ಕರೆಸಿಕೊಳ್ಳಲು ಸಾಧ್ಯವಾಗುತ್ತದೆ. ಇಂತಹ ಹೆರಿಗೆಯಂತಹ ಸೂಕ್ಷ್ಮ ವಸ್ತುವನ್ನು ಮತ್ತು ಎರಡು ಸಮುದಾಯಗಳ ನಡುವಿನ ಕೋಮು-ಸಾಮರಸ್ಯಗಳನ್ನು ಈ ಕಥೆಯು ತುಂಬಾ ಚೆನ್ನಾಗಿ ಹಿಡಿದಿದೆ.

ಆ ಊರಿನಲ್ಲಿ ಮುಸ್ಲೀಂಮರು ನಾಲ್ಕೈದು ಕುಟುಂಬಗಳು ಬ್ರಾಹ್ಮಣರು ನಾಲ್ಕು ಕುಟುಂಬಗಳು ಮತ್ತು ಈ ದಲಿತರು ಎಂದು ಕರೆಯುವ ಮಾದಿಗ ಜನಾಂಗದವರು ಐವತ್ತಕ್ಕೂ ಹೆಚ್ಚು ಜನರು ಸೇರಿ ವಾಸಿಸುತ್ತಿದ್ದಂತಹ ಊರು. ಅಲ್ಲಿ ಹಿಂದೂ-ಮುಸ್ಲೀಂ ಎಂಬ ಬೇರೆ ಬೇರೆ ಧರ್ಮಗಳ ಹೆಸರುಗಳು ಕಾರ್ಯನಿರ್ವಹಿಸುತ್ತಿದ್ದವು. ಹಿಂದೂ-ಮುಸ್ಲಿಂ ಎಂಬ ಬೇರೆ ಬೇರೆ ಧರ್ಮಗಳು ಇರುವಂತಹ ಊರುಗಳಲ್ಲಿ ಕೋಮು-ದಳ್ಳೂರಿಗಳಿಂದ ಕೂಡಿರುತ್ತದೆ. ಅಲ್ಲಿ ಎಲ್ಲರೂ ಸಹಾ ಒಟ್ಟಾಗಿ ಬಾಳ್ವೆಯನ್ನು ನಡೆಸಿಕೊಂಡು ಹೋಗುತ್ತಿರುತ್ತಾರೆ. ಆದರೆ, ಒಂದು ಧರ್ಮದ ತಂಟೆಗೆ ಮತ್ತೊಂದು ಧರ್ಮದವರು. ಅದರಲ್ಲಿಯೂ ಕಿಡಿಗೇಡಿಗಳು ಬಂದರೆ ಮಾತ್ರ ಅಂತಹ ಪ್ರೀತಿ-ಸಾಮರಸ್ಯಗಳು ಇರುತ್ತಿದ್ದಂತಹ ಊರು, ನಗರಗಳಲ್ಲಿ, ತಾವು ನೂರಾರು ಕಾಲದಿಂದ ಪ್ರೀತಿಯಿಂದ ಬದುಕನ್ನು ನಡೆಸಿಕೊಂಡು ಬಂದಿದ್ದೆವು ಎನ್ನುವುದನ್ನೂ ಕೂಡ ಮರೆತು ಪರಸ್ಪರ ಹೊಡೆದಾಡಿಕೊಂಡು

ಕೆಲವೊಮ್ಮೆ ಪ್ರಾಣಗಳನ್ನು ತೆಗೆದು ಹಾಕುವಂತಹ ಹೇಯ ಕೃತ್ಯಗಳನ್ನು ಸಲೀಸಾಗಿ ಮಾಡಿ ಬಿಡುತ್ತಾರೆ. ಸ್ವಲ್ಪ ದಿನಗಳ ನಂತರ ಮತ್ತೆ ಇವರ ಕೆಲಸಕ್ಕೆ ಅವರು ಮತ್ತು ಅವರ ಕೆಲಸಕ್ಕೆ ಇವರ ಮರಳಿ ದ್ವೇಷವನ್ನು ಮರೆತು ಪ್ರೀತಿಗಳನ್ನು ಬೆಳೆಸಿಕೊಂಡು ಜೀವನವನ್ನು ಸಾಗಿಸುತ್ತಾರೆ.

ಇಂತಹ ಗಲಾಟೆಗಳು ಅಥವಾ ಜಗಳಗಳು ಏಕೆ ಉದ್ಭವಿಸುತ್ತವೆ ಅಂದರೆ ಅವರ ಧರ್ಮಕ್ಕೆ ಅಥವಾ ಧರ್ಮದ ನೀತಿಗೆ ಬೇರೆ ಧರ್ಮದವರಿಂದ ಧಕ್ಕೆ ಉಂಟಾಗುತ್ತಿದೆ ಎಂದು ತಿಳಿದರೆ ಅಂತಹ ಸಮಯದಲ್ಲಿ ಹೋರಾಡುತ್ತಾರೆ. ಏಕೆಂದರೆ ಅವರವರ ಧರ್ಮ ಅವರುಗಳಿಗೆ ಹೆಚ್ಚು. ಹಾಗಾಗಿ ತಮ್ಮತನವನ್ನು ಉಳಿಸಿಕೊಳ್ಳಲು ಕಾದಾಡುವಂತಹ ಸಾಹಸಕ್ಕೆ ಕೈ ಹಾಕುತ್ತಾರೆ. ಮುಸಲ್ಮಾನರನ್ನು ನಮ್ಮ ಭಾರತ ದೇಶದಲ್ಲಿ ಅಲ್ಪಸಂಖ್ಯಾತರು ಎಂದು ಕರೆಯುತ್ತಾರೆ. ಏಕೆಂದರೆ ಅವರ ಸಂಖ್ಯೆ ನಮ್ಮ ಭಾರತದಲ್ಲಿ ಕಡಿಮೆ ಇತ್ತು. ಕರಾವಳಿಯ ಆ ಹಳ್ಳಿಯಲ್ಲಿಯೂ ಸಹಾ ಈ ಮುಸಲ್ಮಾನರು ಅಲ್ಪಸಂಖ್ಯಾತರೇ ಆಗಿದ್ದರು. ಏಕೆಂದರೆ ಅಲ್ಲಿ ಕೇವಲ ನಾಲ್ಕೈದು ಕುಟುಂಬ ಮಾತ್ರ ವಾಸಿಸುತ್ತಿದ್ದರು. ಇಂತಹ ಹಳ್ಳಿಯಲ್ಲಿ ಕಿಡಿಗೇಡಿಗಳಿಂದ ಒಂದು ಗಲಾಟೆಯಾಗಿ ಅಲ್ಲಿನ ದಲಿತರಿಗೂ ಮತ್ತು ಈ ಮುಸಲ್ಮಾನರಿಗೂ ಕದನವಾಗಿ ಆ ಮುಸಲ್ಮಾನರ ನಾಯಕ ಮ್ಯಾದಿನ ಬ್ಯಾರಿಯವರ ಮನೆಯ ಮೇಲೆ ಕದನಕ್ಕೆ ನಿಂತಿರುತ್ತಾರೆ. ಆದರೆ, ಆ ಬ್ಯಾರಿ ಕುಟುಂಬವು ಯಾರಿಗೂ ಯಾವುದೇ ರೀತಿಯ ತೊಂದರೆಯನ್ನು ನೀಡಿದಂತಹ ಕುಟುಂಬವಲ್ಲ. ಸರಳ ಸಜ್ಜನಿಕೆಯ ವ್ಯಕ್ತಿತ್ವ ಹೊಂದಿದ್ದವರು. ಆ ಬ್ಯಾರಿಯ ಹೆಂಡತಿ ಐಸಂಬ್ಯಾರಿಯವರಂತು ಆ ಸುತ್ತ ಮುತ್ತಲ ಹಳ್ಳಿಗಳಲ್ಲಿ ಪ್ರಸೂತಿ ತಜ್ಞೆಯಾಗಿ ಬಿಟ್ಟಿದ್ದರು. ಅಂದರೆ ಸೂಲಗಿತ್ತಿಯಾಗಿದ್ದರು. ಎಂತಹ ಕಷ್ಟಕರವಾದ ಹೆರಿಗೆಯಾದರೂ ಸಹಾ ಇವರು ಹೂವನ್ನು ಎತ್ತಿದ ಹಾಗೆ ಸಲೀಸು ಮಾಡಿಬಿಡುತ್ತಿದ್ದರು. ಈ ರೀತಿಯಾಗಿ ಅಲ್ಪಸಂಖ್ಯಾತರಾದರೂ ಬಹುಸಂಖ್ಯಾತರಾದಂತಹ ಹಿಂದುಗಳಿಗೆ ಅಪರೂಪದ ಉಪಕಾರವನ್ನು ಮಾಡಿಕೊಂಡು ಬಂದಿದ್ದಂತಹ ಕುಟುಂಬ. ಮ್ಯಾದಿನ್ ಬ್ಯಾರಿಯು ವಯಸ್ಸಿಗೆ ತಕ್ಕಂತೆ ಸಾವಿಗೀಡಾಗಿದ್ದಾಗ ಅವರ ಶವಯಾತ್ರೆಯನ್ನು ನೋಡಲು ಜಾತಿಭೇದ, ಧರ್ಮಗಳ ಹಂಗನ್ನು ತೊರೆದು ಜನರು ಬಂದು ಸೇರಿದ್ದರು. ಅಂತಹ ಸಮಯದಲ್ಲಿ ಮೈರೆ ಮಾಲ್ದಿಯೂ ಕೂಡ ಹೋಗಿರುತ್ತಾಳೆ. ತನ್ನ ತುಂಬು ಗರ್ಭಿಣಿ ಮಗಳು ತನ್ನ ಗುಡಿಸಲಿನಲ್ಲಿ ಮಲಗಿರುವಾಗ ಅವಳಿಗೆ ಹೆರಿಗೆ ನೋವು ಕಾಣಿಸಿಕೊಂಡು ಕಿರುಚಾಡುವಾಗ ಅವರ ನಾಯಿ ಊಳಿಡುತ್ತಾ ತನ್ನ ಒಡತಿಯನ್ನು ತನ್ನ ಗುಡಿಸಲಿನತ್ತ ಕರೆತರುತ್ತದೆ. ಆದರೆ, ತಾಯಿ ಬಂದು ಊರ ದೈವಗಳಿಗೆ ಹರಕೆ ಹೊತ್ತಳೇ ವಿನಃ ತನ್ನ ಮಗಳ ಹೆರಿಗೆ ಮಾಡಿಸಲಿಲ್ಲ. ಊರಿನ ಜನರೆಲ್ಲರೂ ಸೇರಿದರು. ಆಗ ನೆನಪಾದದ್ದೇ ಆ ತಾಯಿ ಐಸಂಬ್ಯಾರ್ದಿಯವರು ಅವರನ್ನು ಹೋಗಿ ಕರೆಯಲು ಇವರುಗಳಿಗೆ ಮುಖವಿರಲಿಲ್ಲ ಮತ್ತು ಕರೆಯುವಂತಹ ಸಂದರ್ಭವು ಅಲ್ಲ. ಏಕೆಂದರೆ ಅದು ಸಾವಿನ ಮನೆ. ಅಲ್ಲಿ ಐಸಂ ಬ್ಯಾರ್ದಿಯವರು ತನ್ನ ಅರವತ್ತು ವರ್ಷದ ದಾಂಪತ್ಯಕ್ಕೆ ಸಾರಥಿಯಾಗಿದ್ದ ಗಂಡನನ್ನು ಕಳೆದುಕೊಂಡು ಇರುವಾಗ ಅವರು ಇಲ್ಲಿ ಬಂದು ಹೆರಿಗೆ ಮಾಡಿಸುತ್ತಾರೆಯೇ ಎಂದು ಎಲ್ಲರೂ ಯೋಚಿಸುತ್ತಿರುವಾಗ ಅಲ್ಲಿ ತುಕ್ರ ಭಂಡಾರಿ ಎನ್ನುವಂತಹವ ನೇರ ಸಾವಿನ ಮನೆಗೆ ಲಗ್ಗೆ ಇಟ್ಟಿದ್ದ. ಆ ಐಸಂಬ್ಯಾರ್ದಿಗೆ ಈ ಹೆರಿಗೆ ನೋವು ಸುದ್ದಿ ತಿಳಿಸಿದಾಗ ತನ್ನ ಗಂಡನ ಸಾವಿನ ದೃಶ್ಯವನ್ನು ಮರೆಯಲಾಗದೆ ಮುಸ್ಲಿಂ ಧರ್ಮದ ಕೆಲವು ಆಚರಣೆಗಳನ್ನು ಆಚರಿಸಲು ಆ ಐಸಂ ಬ್ಯಾರ್ದಿಯವರು ಸಿದ್ಧರಾಗಿದ್ದರು. ಅದೇನೆಂದರೆ ಮಸೀದಿಗೆ ಶವ ಸಂಸ್ಕಾರಕ್ಕೆಂದು ಹೋಗಿದ್ದಂತಹ ಗಂಡಸರೆಲ್ಲರೂ ಸಹಾ

ಬರುವಷ್ಟರಲ್ಲಿ ಇಲ್ಲಿ ಅಂದರೆ ಮನೆಯಲ್ಲಿ ಸ್ನಾನವನ್ನು ಮಾಡಿಕೊಂಡು ಒಂದು ಬಿಳಿ ಬಟ್ಟೆಯನ್ನೇ ಉಟ್ಟುಕೊಂಡು ಒಂದು ಕೋಣೆಯಲ್ಲಿ ನಾಲ್ಕು ದಿನಗಳವರೆಗೆ ಅಲ್ಲಾ ದೇವರಲ್ಲಿ ತನ್ನ ಗಂಡನ ಆತ್ಮಕ್ಕೆ ಶಾಂತಿಯನ್ನು ನೀಡು ಎಂದು ಬೇಡಿಕೊಳ್ಳುವುದು ಅವರ ಸಂಪ್ರದಾಯದ ಆಚರಣೆ. ಇಂತಹ ಆಚರಣೆ ಸಿದ್ಧರಾಗಿದ್ದವರು. ಈ ಶುಕ್ರ ಭಂಡಾರಿಯು ತಂದ ಹೆರಿಗೆಯ ಕೆಲಸಕ್ಕೆ ಹೋಗಿ ಬರುವಂತಹ ನಿರ್ಧಾರವನ್ನು ಮಾಡುತ್ತಾರೆ.

ಅಂದರೆ, ಇಲ್ಲಿ ಅವರಿಗೆ ಒಂದು ಜೀವವನ್ನು ಉಳಿಸುವಂತಹ ತವಕ ಕಾಡುತ್ತಿತ್ತು. ಗಂಡ ಸತ್ತ ಎಂದು ಅಲ್ಲೇ ಇದ್ದರೆ ಮತ್ತೆರಡು ಜೀವಗಳು ಸಾವಿನ ಮನೆ ಸೇರುತ್ತವೆ ಎಂಬ ಅರಿವು ಜಸಮ್ಮನವರಿಗೆ ಚೆನ್ನಾಗಿ ಗೊತ್ತಿತ್ತು. ಸತ್ತವರು ಸತ್ತರು, ಬದುಕಿರುವವರನ್ನಾದರೂ ಉಳಿಸಿಕೊಳ್ಳೋಣ ಎಂದು ನಿರ್ಧರಿಸಿದರು. ಇದು ನಿಜವಾದ ಮನುಷ್ಯತ್ವ ಇಲ್ಲಿ ಯಾವುದೇ ಜಾತಿ ಅಥವಾ ಯಾವುದೇ ಧರ್ಮವು ಮುಖ್ಯವೆನಿಸುವುದಿಲ್ಲ. ಕೇವಲ ಮನುಷ್ಯತ್ವ ಒಂದೇ ಕಾಣಿಸುತ್ತದೆ. ಅವರ ನಿರ್ಧಾರಕ್ಕೆ ಆ ಮುಸ್ಲಿಂ ಹೆಂಗಸರೆಲ್ಲರೂ ಸಹಾ ಸಮ್ಮತಿ ಸೂಚಿಸಿದರು. ಅವರೆಲ್ಲರೂ ಸಹ ಕೂಡ ಬಾಳಿದಂತಹವರೆ ಇಂತಹ ಹೆರಿಗೆ ಮಾಡಿಸಿ ಪ್ರಾಣ ಉಳಿಸುವಂತಹ ಕಾಯಕವು ಮನುಷ್ಯತ್ವದ ಕೆಲಸ ಎಂದು ಮೈದಿ ಬ್ಯಾರಿಯವರೇ ಸ್ವತಃ ತನ್ನ ಮಡದಿ ಜಸಂ ಬ್ಯಾರ್ತಿಯವರಿಗೆ ಹೇಳುತ್ತಿದ್ದರು. ಅದನ್ನು ನೆನಪಿಸಿಕೊಂಡು ಪ್ರಸೂತಿ ಕೆಲಸಕ್ಕೆ ಜಸಮ್ಮನವರು ಸಜ್ಜಾದರು. ಆದರೆ ಅವರು ಈ ಹಿಂದೂಗಳು ನಮಗೆ ಹಲವಾರು ತೊಂದರೆಗಳನ್ನು ನೀಡಿದ್ದಾರೆ ಮತ್ತು ನಮ್ಮ ಯಜಮಾನರ ಸಾವಿಗೆ ಕಾರಣರಾಗಿದ್ದಾರೆ. ಅಂತಹವರ ಮನೆಗಳಿಗೆ ನಾನು ಯಾವ ಕಾರಣಕ್ಕೂ ಕೂಡ ನನ್ನ ಕಾಲನ್ನೂ ಹಾಕುವುದಿಲ್ಲ ಎಂಬಂತಹ ನಿಲುವನ್ನು ತಾಳಿ, ತಾನಾಯ್ತು ತನ್ನ ಧರ್ಮದ ಸಂಪ್ರದಾಯ ಆಚರಣೆ ಆಯ್ತು ಎಂದು ಸುಮ್ಮನೆ ಇದ್ದು ಬಿಡಬಹುದಿತ್ತು. ಆದರೆ, ಮನುಷ್ಯತ್ವ ಇರುವಂತಹವರು ಯಾರು ಕೂಡ ಅಂತಹ ಕೆಲಸವನ್ನು ಮಾಡುವುದಿಲ್ಲ. ಇಂತಹ ಪ್ರಾಣ ಉಳಿಸುವಂತಹ ಮುಖ್ಯದ ಕೆಲಸಕ್ಕೆ, ಮನುಷ್ಯತ್ವದ ವಿಚಾರಕ್ಕೆ ಮಾತ್ರ ಎಂದೆಂದೂ ಕಟ್ಟುಪಾಡುಗಳು ಅಡ್ಡ ಬರದಂತೆ ನೋಡಿಕೊಂಡಂತಹ ಜೀವವದು. ಎಂತಹ ನಡುರಾತ್ರಿಯಾದರೂ ಸರಿ, ಈ ಮುಖ್ಯದ ಕೆಲಸಕ್ಕೆ ಧಾವಿಸಿ ಬಂದು ಆ ಕೇರಿಯ ಜೀವ ಉಳಿಸಿರುವಂತಹ ಜೀವ ಕೂಡ ಆಗಿದ್ದರು. 9"ಮಾನವೀಯ ಅಂತಃಕರಣವೇ ಆಕೆ ಮೊದಲ ಆಸ್ತಿಯಾಗಿರುವಾಗ ಆ ಸಾವು ಬದುಕಿನ ಸತ್ಯ ಅವರೊಳಗೆ ಕಣ ಕಣವೂ ಇಂಗಿ ಹೋಗುತ್ತಲೇ ಆ ಇದ್ದತ್ ಆಚರಣೆಗಿಂತಲೂ ಆ ಹೆರಿಗೆಯೇ ಆಕೆ ಮುಖ್ಯವೆನಿಸಿತ್ತು".9

ಮತ್ತೊಂದು ವಿಷಯವನ್ನು ಗಮನಿಸಬೇಕಾದುದೆಂದರೆ, ಹೆರಿಗೆ ಹೊರಡಲು ಸಿದ್ಧರಾದಂತಹ ಜಸಮ್ಮನವರು ತನ್ನ ಗಂಡನ ಸಾವಿನ ದುಃಖವೆಲ್ಲವನ್ನೂ ಆ ಇದ್ದತ್ ಎಂಬ ಆಚರಣೆಯನ್ನು ಆಚರಿಸುವಂತಹ ಕೋಣೆಯಲ್ಲಿಯೇ ಬಿಟ್ಟು ಬಂದವರಂತೆ ಶಾಂತ ಚಿತ್ತದಿಂದ ಜಸಮ್ಮನವರು ಸೀದಾ ದಲಿತರ ಕೇರಿಯ ಕಡೆಗೆ ಹೆಜ್ಜೆ ಹಾಕುತ್ತಾರೆ. ಅಂದು ಅವರ ನೋವುಗಳೇನೆ ಇದ್ದರೂ ಕೂಡ ಅವು ಅವರಿಗೆ ಮಾತ್ರ ಸೀಮಿತವಾಗಿರಲೆಂದು ಅಂತಹ ನೋವುಗಳಿಂದ ತಾನು ವಿಚಲಿತಳಾಗದೆ ತನ್ನ ಕಾರ್ಯದಲ್ಲಿ ಯಶಸ್ಸು ಕಾಣದಿದ್ದರೆ, ಅದರಿಂದ ಎರಡು ಜೀವಗಳು ಉಸಿರಾಟವನ್ನೇ ನಿಲ್ಲಿಸುವಂತಹ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ ಎಂದು ತೀರ್ಮಾನಿಸಿದ್ದರು. ಅಲ್ಲಿಂದ ಅವರನ್ನು ಹಿಂಬಾಲಿಸುತ್ತಾ ಕರೆದು ತರುತ್ತಿದ್ದಂತಹ ಶುಕ್ರ ಪೂಜಾರಿಯು ಮೌನವಾಗಿ ಬರುತ್ತಿದ್ದನು. ನನ್ನ ಜೊತೆಯಲ್ಲಿ ದೈವವೇ ನಡೆದುಕೊಂಡು

ಬರುತ್ತಿದೆ ಎನ್ನುವಂತಹ ಮನೋಭಾವವನ್ನು ಅವನು ಹೊಂದಿದ್ದನು. ಆದರೆ ಈ ಹಿಂದ ಆ ಮ್ಯಾದಿ ಬ್ಯಾರಿಯವರ ಮನೆಗೆ ಜಗಳಕ್ಕೆಂದು ನುಗ್ಗಿ ಇದೇ ಐಸಮ್ಮನವರ ಎದುರು ಗಲಾಟೆಯನ್ನು ಮಾಡಿ ಬಂದಿದ್ದಂತಹ ತುಕ್ರ ಪೂಜಾರಿಯು ಇಂದು ಅದೇ ಐಸಮ್ಮನವರನ್ನು ದೈವ ಎಂದು ದೇವತೆಗೆ ಹೋಲಿಸಿಕೊಂಡಿದ್ದಾನೆ. ಒಬ್ಬ ಮನುಷ್ಯನಿಗೆ ಕಷ್ಟಕಾಲದಲ್ಲಿ ಸಹಾಯ ಮಾಡುವಂತಹ ಒಂದು ಹುಲ್ಲುಕಡ್ಡಿಯೂ ಕೂಡ ದೈವದ ಪ್ರತಿರೂಪವಾಗಿ ಕಾಣಿಸುತ್ತದೆ.

ಹೆರಿಗೆ ಮನೆಯ ಹತ್ತಿರಕ್ಕೆ ಐಸಂ ಬ್ಯಾರಿಯವರು ಬಂದು ಅಲ್ಲಿ ಆತಂಕಗೊಂಡು ಕುಳಿತಿದ್ದ ಜನರುಗಳಿಗೆ ಮುಖ ತೋರಿಸಿದ್ದೇ ತಡ ಅವರ ಮನಸ್ಸು ಸಂತೋಷದಿಂದ ಕುಣಿಯಲಾರಂಭಿಸಿ ನಿಟ್ಟುಸಿರನ್ನು ಬಿಟ್ಟು ಸಮಾಧಾನಗೊಂಡರು. ಆ ತಾಯಿಗೆ ಇರುವಂತಹ ದುಃಖ ಎಂತಹದ್ದು ಎಂದು ಅಲ್ಲಿ ನೆರೆದಿದ್ದಂತಹ ಎಲ್ಲರಿಗೂ ಗೊತ್ತಿತ್ತು. ತನ್ನ ದುಃಖವನ್ನೆಲ್ಲ ಅದುಮಿಕೊಂಡು ಬಂದಿರುವ ಈ ತಾಯಿಯು ಅವರ ಕಣ್ಣಿಗೆ ತಮ್ಮನ್ನೆಲ್ಲ ಪೊರೆವ ದೈವದಂತೆ ಕಂಡರು.

ಒಂದು ಕಾಲದಲ್ಲಿ ಇವರನ್ನು ಕೊಚ್ಚಿ ಹಾಕಬೇಕು ಎಂದು ಹಾತೊರೆಯುತ್ತಿದ್ದಂತಹ ಮನಸ್ಸುಗಳು ಈಗ ಈ ದೇವತೆಯನ್ನು ಕಂಡು ಅಪರಾಧ ಪ್ರಜ್ಞೆಯನ್ನು ಹೊತ್ತುಕೊಂಡು ತಮ್ಮ ತಲೆಗಳನ್ನು ತಗ್ಗಿಸಿಕೊಂಡೇ ಆ ಮುದಿ ಜೀವವನ್ನು ಕಂಡು ಸುಮ್ಮನೆ ನಿಲ್ಲುತ್ತಾರೆ. ಆ ರೀತಿ ಇದ್ದಾಗ ಅವರು ನೇರ ಮನೆಗೆ ಹೋಗಿ ಹೆರಿಗೆ ಕಾರ್ಯದಲ್ಲಿ ಪ್ರವೃತ್ತರಾದ ಇಂತಹ ಹೆರಿಗೆ ಮಾಡಿಸುವಂತಹ ಕೆಲಸದಲ್ಲಿ ಈ ತಾಯಿ ಎಂದಾದರೂ ಸೋತಿರುವ ಉದಾಹರಣೆಗಳು ಇದೆಯೇ ಖಂಡಿ ಇಲ್ಲ. ಇವರು ಬಂದ ಮೇಲೆ ಆ ಹೆರಿಗೆಯ ಕೆಲಸ ಹೂ ಎತ್ತಿದ ಹಾಗೆ ಸುಲಭದಲ್ಲಿ ಅತಿ ಸುಲಭವಾಗಿ ಆಗುತ್ತದೆ ಎಂದು ಎಲ್ಲರೂ ಸಹಾ ತಮ್ಮ ತಮ್ಮಲ್ಲಿ ಸಮಾಧಾನಗೊಂಡರು. ಅವರ ನಂಬಿಕೆಯಂತೆ ಆ ಹೆರಿಗೆ ಕೆಲಸವನ್ನು ಮಾಡಿ ಮುಗಿಸಿ ಸೀದಾ ಅಲ್ಲಿನ ತನ್ನ ಮನೆಯ ಹಾದಿ ಹಿಡಿದು ನಡೆಯುತ್ತಾರೆ. ಆಗಲೂ ಸಹ ಈ ತುಕ್ರ ಪೂಜಾರಿ ಅವರನ್ನು ಹಿಂಬಾಲಿಸಿ ಕರೆದುಕೊಂಡು ಹೋಗಿ ಮನೆಯ ಹತ್ತಿರಕ್ಕೆ ಬಿಟ್ಟು ಬರುತ್ತಾನೆ. ಈ ರೀತಿ ಹಿಂಬಾಲಿಸಿದ ತುಕ್ರನು ಈಕೆ ಇವತ್ತು ನಮಗೆಲ್ಲ ಮನುಷ್ಯತ್ವದ ದಾರಿಯನ್ನು ತೋರಿಸಿದ್ದಾಳೆ ಎಂದು ಈ ತುಕ್ರನು ಪಶ್ಚಾತ್ತಾಪದಿಂದ ಮರಗಟ್ಟಿಇ ಹೋಗಿದ್ದನು. ಈ ರೀತಿಯ ಅನಿಸಿಕೆ ಕೇವಲ ಅವನೊಬ್ಬನದ್ದಾಗಿರಲಿಲ್ಲ. . ಆ ಕೇರಿಯ ಎಲ್ಲಾ ಜನರ ಮಾತು ಆಗಿತ್ತು. ಹೀಗೆ ತನ್ನ ಮನೆಯ ಹತ್ತಿರ ಬಂದಂತಹ ಐಸಂ ಬ್ಯಾರಿಯವರು ಸ್ನಾನವನ್ನು ಮಾಡಿ ಸೀದಾ ಆ ಇದತ್ ಆಚರಣೆಯ ಕೋಣೆಗೆ ಹೋಗಿ ಕುಳಿತರು. ಇತ್ತ ಶವ ಸಂಸ್ಕಾರಕ್ಕೆ ಹೋಗಿರುವಂತಹ ಬ್ಯಾರಿಯ ಗಂಡಸರುಗಳೂ ಇನ್ನೂ ಬಂದಿಲ್ಲ.

ಇದು ನಿಜವಾದ ಮನುಷ್ಯತ್ವ. ಈ ರೀತಿಯಾಗಿ ಒಂದು ಊರಿನಲ್ಲಿ ಬದುಕುವಂತಹ ಜನರುಗಳು ಸಾಮರಸ್ಯ, ಪ್ರೀತಿ, ಆದರಗಳಿಂದ ಸೊಗಸಾಗಿ ಜೀವನವನ್ನು ನಡೆಸಬೇಕು. ಜಾತಿ-ಧರ್ಮಗಳ ಹೆಸರಿನಲ್ಲಿ ಮುಳುಗಿ ಹೋಗಿ ಮನುಷ್ಯತ್ವದ ಗುಣವನ್ನು ಮಾತ್ರ ಮರೆಯಬಾರದು. ಈ ಜಾತಿ ಧರ್ಮಗಳನ್ನು ಮಾಡಿಕೊಂಡಿರುವವನು ಈ ಮನುಷ್ಯನೇ. ಅವುಗಳ ಮಧ್ಯೆ ಸಿಕ್ಕಿ ಒದ್ದಾಡುತ್ತಿರುವವನೂ ಕೂಡ ಅದೇ ಮನುಷ್ಯನು. ಇಂಥ ಮನುಷ್ಯರು ಮನುಷ್ಯತ್ವವನ್ನು ಮರೆತು ಕ್ರೂರ ಮೃಗಗಳ ಹಾಗೆ ವರ್ತಿಸಿ ತನ್ನನ್ನು ತಾನೇ ಅಪಹಾಸ್ಯಕ್ಕೆ ಈಡುಮಾಡಿಕೊಳ್ಳಬಾರದು ಎಂದು ತಿಳಿಯಬೇಕು.

ಈ ಹಿಂದೂ–ಮುಸ್ಲಿಂ ಸಾಮರಸ್ಯ ಜೀವಸೆಲೆಯಂತೆ ಈ ಕಥೆಯನ್ನು ಮನ ಕರಗುವಂತೆ ಚಿತ್ರಿತವಾಗಿದೆ. ಐಸಮ್ಮನ ಮನಸ್ಸಿನ ಧರ್ಮ ಹಾಡಿದ ಜೀವನ ಧರ್ಮ ಎಂತಹವರಿಗೂ ಮಾದರಿಯಾಗಿದೆ.

ಸೇವಂತಿಯ ಓಲೆ

ಸೇವಂತಿಯ ಓಲೆ, ಅವು ನಿಜವಾಗಲೂ ಸೇರಿದ್ದು ಮಾತ್ರ ನೇತ್ರಾವತಿಗೆ ಈ ರೀತಿ ತನ್ನ ಓಲೆಗಳನ್ನು ನೇತ್ರಾವತಿಯ ಒಡಲಿಗೆ ವರ್ಗಾಯಿಸಿದ್ದು, ಆ ಕ್ಷಣಕ್ಕೆ ಸೇವಂತಿ ತೆಗೆದುಕೊಂಡಂತಹ ಉತ್ತಮ ನಿರ್ಧಾರವಾಗಿತ್ತು. ಹೌದು ಆ ಕ್ಷಣಗಳನ್ನು ಸೇವಂತಿಯು ಇಟ್ಟುಕೊಳ್ಳುವ ಅಧಿಕಾರವನ್ನು ಪಡೆದಿದ್ದಳೂ ಎನ್ನುವುದಾದರೆ ಅದು ಕೇವಲ ಗಂಗಯ್ಯ ಶೆಟ್ಟಿಯ ಹೆಂಡತಿಯಾಗಿದ್ದಾಗ ಮಾತ್ರ ಸೇವಂತಿಗೆ ಅಂತಹ ಅಧಿಕಾರವಿತ್ತು. ಆದರೆ ವಿಧಿಯ ಪಗಡೆಯಾಟದಲ್ಲಿ ಅಂತಹ ಸೌಭಾಗ್ಯವನ್ನು ಸೇವಂತಿಯು ಪಡೆದುಕೊಂಡು ಬಂದವಳು. ಅದಕ್ಕೆ ದೊಡ್ಡ ಕಾರಣವೆಂದರೆ, ಜಾತಿ. ಪಾಪ ಸೇವಂತಿಗೆ ಏನು ಗೊತ್ತಿತ್ತು. ನಾನು ದಲಿತರ ಕೀಳು ಜಾತಿಯಲ್ಲಿ ಹುಟ್ಟುತ್ತೇನೆಂದು. ಅಂತಹ ಹದಿನೆಂಟರ ಸುಮದರ ಹುಡುಗಿ ಶೆಟ್ಟರ ಗಂಗಯ್ಯನ ಪ್ರೀತಿಯ ಬಲೆಯಲ್ಲಿ ಸಲುಕಿ, ತನ್ನ ಪ್ರೀತಿಯನ್ನು ಅರ್ಧದಲ್ಲೇ ಈ ಜಾತಿ ಎಂಬ ವಿಷಜಂತು ಮಾಟಕಿ ಹಾಕು ಎಂದು ಕನಸಿನಲ್ಲಿಯೂ ಎಣಿಸದಂತಹವಳು.

ಈ ಕಥೆಯಲ್ಲಿ ಕೇವಲ ಜಾತಿ ಪದ್ಧತಿಯು ಮಾತ್ರವಲ್ಲ. ಆ ಕಾಲದಲ್ಲಿ ಜಾರಿಗೆ ಬಂದಂತಹ ಉಳುವವನೇ ಭೂಮಿಯ ಒಡೆಯ ಎಂಬ ಕಾನೂನಿನ ಕಾಯಿದೆಯಿಂದ ಭೂಮಿಯನ್ನು ಇಟ್ಟುಕೊಂಡಿದ್ದಂತಹ ಧಣಿಗಳು ಎಂದು ಕರೆಯಿಸಿಕೊಳ್ಳುತ್ತಿದ್ದಂತಹ ಜನರುಗಳು ಒಮ್ಮೆಲೇ ಎದೆ ಗುಂಡಿಗೆ ನೆಲಕ್ಕೆ ಅಪ್ಪಳಿಸುವಂತಾಗಿತ್ತು ಮತ್ತು ಅಂತಹಾ ಸಂದರ್ಭದಲ್ಲಿ ತಮ್ಮ ಜಮೀನುಗಳಲ್ಲದೇ ಬೇರೆಯವರ ಜಮೀನುಗಳಲ್ಲಿ ಪ್ರತೀ ದಿನವೂ ಸಹ ಕತ್ತೆ ದುಡಿದ ಹಾಗೆ ದುಡಿದು ಅದಕ್ಕೆ ಪ್ರತಿಯಾಗಿ ಪಡಿರೂಪದಲ್ಲಿ ದವಸಧಾನ್ಯಗಳನ್ನು ಪಡೆಯುವ ಕೆಲವೊಂದು ಮಂದಿಗಳ ಮುಖ ಕಮಲಗಳು ಅರಳಿ ನಳನಳಿಸತೊಡಗಿದ್ದವು. ಅಂತಹವರಿಗೆ ಅಲ್ಪಸ್ವಲ್ಪದ ಭೂಮಿಯೂ ಸಹ ಕೈ ಸೇರಿತು. ಇಂತಹ ಗಂಭೀರ ವಿಚಾರಗಳನ್ನು ಸಹ ಈ ಕಥೆಯು ತೆರೆದಿಡುತ್ತಾ ಹೋಗುತ್ತೆ. ಆದರೆ ಕಥೆಯ ಕೇಂದ್ರ ಬಿಂದು ಸೇವಂತಿ. ತನ್ನ ತಂಗಿಯನ್ನು ಹೊಲಿಗೆ ತರಬೇತಿಗೆ ಕರೆದುಕೊಂಡು ಹೋಗಲು ಪ್ರತಿ ದಿನವೂ ತನ್ನ ಮನೆಯ ಹತ್ತಿರ ಬರುತ್ತಿದ್ದಂತಹ ಆ ಸುಂದರ, ಮುದ್ದು ಮುಖದ ಚೆಲುವ ಸೇವಂತಿಯನ್ನು ಈ ಗಂಗಪ್ಪ ಶೆಟ್ಟಿಯು ನಿಜವಾಗಿಯೂ ನಿಷ್ಕಲ್ಮಶವಾದ ಮನಸ್ಸಿನಿಂದ ಪ್ರೀತಿಸತೊಡಗಿದನು. ಇಂತಹ ಪ್ರೀತಿಗೆ ಸೇವಂತಿ ಕಡೆಯಿಂದಲೂ ಸಹ ಸಹಮತ ವ್ಯಕ್ತವಾಗಿ ಪ್ರೀತಿಸಲು ಶುರು ಮಾಡಿದ್ದರು. ಅವರಿಬ್ಬರ ಆ ಪ್ರೀತಿಯ ಎದುರು ಯಾವುದೇ ಜಾತಿ, ಅಂತಸ್ತು, ಐಶ್ವರ್ಯಗಳು ಕೂಡ ಅಡ್ಡ ಬರಲಿಲ್ಲ. ಇವರ ಇಂತಹ ಪ್ರೀತಿಯ ಆಟಕ್ಕೆ ಮೂಕ ಸಾಕ್ಷಿಯಾಗಿ ಆ ನೇತ್ರಾವತಿ ನದಿಯಿತ್ತು. ಆ ನದಿಯ ದಂಡೆಯಲ್ಲಿಯೇ ಇವರ ಮಾತುಕಥೆಗಳು ನಡೆಯುತ್ತಿತ್ತು.

ಹೀಗೆ ಮೇಲು ಜಾತಿಯ ಗಂಡು ಒಂದು ಕೀಲು ಜಾತಿಯ ಹೆಣ್ಣು ತನಗೆ ಮನಸ್ಸು ಕೊಟ್ಟಿದ್ದಾಳೆ ಎಂದು ತಿಳಿದ ತಕ್ಷಣ ಅವನು ಅವಳ ದೇಹದ ಮೇಲೆ ಕೂಡ ಕಣ್ಣು ಹಾಕಿ ತನ್ನ ದೇಹದ ಆಸೆಯನ್ನು ಈಡೇರಿಸಿಕೊಳ್ಳುವವರೇ ಜಾಸ್ತಿ. ಆದರೆ, ಸೇವಂತಿಯ ಹತ್ತಿರ ಗಂಗಪ್ಪನಿಗೆ ಅಷ್ಟೊಂದು ಸಲಿಗೆ ಇದ್ದರೂ ಕೂಡ

ಅವನು ಅವಳ ದೇಹವನ್ನು ಅನುಭವಿಸಬೇಕು. ಅವಳನ್ನು ನಡು ನೀರಿನಲ್ಲಿ ಕೈ ಬಿಡಬೇಕು ಎಂದು ಯಾವತ್ತೂ ಕೂಡ ಯೋಚಿಸಿದವನಲ್ಲ. ಏಕೆಂದರೆ ಅವನು ಅವಳ ದೇಹವನ್ನು ನೋಡಿ ಪ್ರೀತಿಸಿದವನಲ್ಲ. ಅವಳ ಮನಸ್ಸನ್ನು ಪ್ರೀತಿಸಿದ್ದವನು. ಅವನು ಈ ಸೇವಂತಿಯೇ ನನ್ನ ಮನೆಯ ಮತ್ತು ಮನಸ್ಸಿನ ಒಡತಿ ಎಂದು ತೀರ್ಮಾನಿಸಿದ್ದವನು. ಈ ಗಂಗಪ್ಪನೇನು ಅವಿದ್ಯಾವಂತನಲ್ಲ. ಅವನು ಎಲ್ಲರಂತೆ ಮಾಮೂಲಿ ಪದವಿಯನ್ನು ಪಡೆದವನಲ್ಲ. ಆಯುರ್ವೇದದಲ್ಲಿ ವೈದ್ಯ ಪದವಿಯನ್ನೇ ಪೂರೈಸಿಕೊಂಡು ತನ್ನ ಜಮೀನಿನಲ್ಲಿ ಕೃಷಿ ಕೆಲಸವನ್ನು ಅದರಲ್ಲಿಯೇ ನೆಮ್ಮದಿಯ ಜೀವನವನ್ನು ಸಾಗಿಸಬೇಕೆಂದು ತೀರ್ಮಾನಿಸಿ ಹಳ್ಳಿಗೆ ಬಂದಿದ್ದವನು. ಇವರು ಹೀಗೆ ಹಳ್ಳಿಗೆ ಬಂದು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಾಗ ಊರಿನ ಜನರು ಜರಿದಿದ್ದರು. ಅದಕ್ಕೆ ಅವರಪ್ಪ ಸರಿಯಾಗಿಯೆ ಉತ್ತರ ಕೊಟ್ಟಿದ್ದರು. ಅವರ ದೃಷ್ಟಿಯಲ್ಲಿ ಬಿ.ಎ. ಪಾಸು ಮಾಡಿ ಪದವಿಯನ್ನು ತೆಗೆದುಕೊಂಡರೆ ಅಂತಹ ಬಿ.ಎ.ಗೆ ಯಾವುದೇ ರೀತಿಯ ಬೆಲೆಯಿಲ್ಲ. ನನ್ನ ಮಗ ವೈದ್ಯ ಎಂದು ಹೇಳಿದ್ದಿದೆ ಗಂಗಯ್ಯನ ತಂದೆ ತ್ಯಾಂಪಣ್ಣನ ದೃಷ್ಟಿಯಲ್ಲಿ ಬಿ.ಎ. ಪದವಿ ಎನ್ನುವುದು ಕೇವಲದ ವಿಷಯ. ಅದು ತಪ್ಪು ಯಾವ ಒಂದು ಪದವಿಯೇ ಆಗಲಿ, ಅದಕ್ಕೆ ತನ್ನದೇ ಆದಂತಹ ಮೌಲ್ಯ ಮತ್ತು ಮರ್ಯಾದೆಗಳಿರುತ್ತವೆ. ಯಾವುದನ್ನು ಮೇಲು ಮತ್ತು ಕೀಳು ಎಂದು ಎಣಿಸಬಾರದು. ಗಂಗಪ್ಪ ಶೆಟ್ಟಿಯೂ ಕೂಡ ಒಳ್ಳೆಯ ಉತ್ತಮ ನಡತೆಯುಳ್ಳಂತಹ ವ್ಯಕ್ತಿ. ವೈದ್ಯವಿದ್ಯೆಯನ್ನು ಓದಿದ ನಂತರ ಅವನು ಅದೇ ವೃತ್ತಿಯಲ್ಲಿ ಮುಂದುವರೆದು ಪಟ್ಟಣದಲ್ಲಿಯೇ ನೆಲೆಸಿ ಐಷಾರಾಮಿ ಜೀವನವನ್ನು ನಡೆಸಬಹುದಿತ್ತು. ಆದರೆ, ಅವನು ಹಾಗೆ ಮಾಡಲಿಲ್ಲ. ತಾನು ಎಷ್ಟು ಓದಿದರೂ ಅದು ನನ್ನ ಬುದ್ಧಿವಂತಿಕೆಗೆ ಮಾತ್ರ. ನನ್ನ ತಂದೆ, ತಾಯಿ, ಜಮೀನು, ಊರು ಇತ್ಯಾದಿಗಳನ್ನು ನೋಡಿಕೊಂಡು ಹಳ್ಳಿಯಲ್ಲಿಯೇ ಸ್ವಚ್ಛಂದವಾದ ಬದುಕನ್ನು ಬದುಕೋಣ ಎಂದು ತಿಳಿದು ಓದು ಮುಗಿದ ನಂತರ ತನ್ನ ಹಳ್ಳಿಗೆ ಮರಳಿ ಬಂದಿದ್ದವನು.

ಹೀಗೆ ಕೃಷಿ ಮಾಡಲೆಂದು ಬಂದಿದ್ದ ಗಂಗಯ್ಯಶೆಟ್ಟಿಗೆ ಸೇವಂತಿಯ ತಂದೆ ಸೇಸುಮೂಲ್ಯ ಮಾಡುವ ಆವೆ ಮಣ್ಣಿನ ಕೆಲಸ ನಾನೂ ಕೂಡ ದೊಡ್ಡ ಪ್ರಮಾಣದಲ್ಲಿ ಮಾಡಬೇಕು ಎನಿಸಿ ತಂದೆಯ ಹತ್ತಿವಿದ್ದಂತಹ ದುಡ್ಡನ್ನು ತೆಗೆದುಕೊಂಡು ಆವೆ ಮಣ್ಣಿನ ವ್ಯವಹಾರಕ್ಕೆ ಹಾಕಿಬಿಟ್ಟಿದ್ದ. ಈ ಆವೆಮಣ್ಣಿನ ವ್ಯಾಪಾರ ಎಂದರೆ ಹೊಲ ಗದ್ದೆಯ ಮಣ್ಣನ್ನು ಅಗೆದು ದೂರದ ಹಂಚಿನ ಕಾರ್ಖಾನೆಗೆ ಸಾಗಿಸುವುದು. ಹೀಗೆ ತನ್ನ ತಂದೆಯ ದುಡ್ಡನ್ನು ತನ್ನ ವ್ಯವಹಾರಕ್ಕೆ ಬಂಡವಾಳ ಮಾಡಿಕೊಂಡಿದ್ದಂತಹ ಗಂಗಯ್ಯನ ಸೇವಂತಿಯೊಂದಿಗಿನ ಪ್ರೇಮ ಪ್ರಣಯದ ಆಟದ ಬಗ್ಗೆ ಊರಿನಲ್ಲಿ ಗುಸು ಗುಸು ಸುದ್ದಿ ಹರಡಲಾರಂಭಿಸಿತು. ಅದು ಗಂಗಯ್ಯನ ತಾಯಿ ಕೂಡಕ್ಕೆಯವರಿಗೂ ತಿಳಿದು ಅವಳು ತನ್ನ ಗಂಡ ತ್ಯಾಂಪಣ್ಣನಲ್ಲಿಯೂ ಸಹ ಹೇಳಿಬಿಡುತ್ತಾಳೆ. ಹಾಗೆ ಆಕೆ ತನ್ನ ಗಂಡನನ್ನು ಅನುಕವಾಡುವಂತಹ ಮಾತನ್ನು ಆಡುವುದನ್ನು ಬಿಡಲಿಕ್ಕೆ ಮರದ ಯೋಗ್ಯತೆ ಹಣ್ಣಿನಲ್ಲಂತೆ. ಅಕ್ಕಿಯ ಯೋಗ್ಯತೆ ಅನ್ನದಲ್ಲಂತೆ. ತಂದೆಯ ಯೋಗ್ಯತೆ ಮಗನಲ್ಲಂತೆ ಎನ್ನುವ ಮಾತು ಸುಳ್ಳಲ್ಲ ಎಂದು ಗಂಡನಿಗೆ ಹೇಳುತ್ತಾಳೆ. ಅದೇ ರೀತಿ ತಮ್ಮ ಮಗ ದಾರಿ ತಪ್ಪಿ ಹೋಗಿ ಆ ಹೀಗಕುಲದ ಹೆಣ್ಣನ್ನು ಮದುವೆಯಾಗಿ ಬಿಡುತ್ತಾನೇನೋ ಎಂದು ಇಂದೇ ನಿಮ್ಮ ತಂಗಿಯ ಮನೆಗೆ ಹೋಗಿ ಅವರ ಮಗಳನ್ನು ನಮ್ಮ ಗಂಗಯ್ಯನಿಗೆ ತರುವ ಮಾತಾಡಿಕೊಂಡು ಬನ್ನಿ ಎಂದು ಹೇಳುತ್ತಾಳೆ.

ಹಳ್ಳಿಕಾಲದ ಈ ತಲೆಗಳೇ ಅಷ್ಟು ಅವುಗಳು ತಮ್ಮ ಜಾತಿ, ಧರ್ಮಗಳೇ ನಮಗೆ ಮುಖ್ಯ ಎಂದು ಹಲವಾರು ಸಾಂಪ್ರದಾಯಿಕತೆಯಲ್ಲಿ ನಿಂತು ಯೋಚಿಸುತ್ತಾರೆ. ನಿಜವಾದ ನಿಷ್ಕಲ್ಮಶ ಪ್ರೀತಿಯನ್ನು ಅರ್ಥ ಮಾಡಿಕೊಳ್ಳುವುದೇ ಇಲ್ಲ. ತಾವು ಉಚ್ಚ ಕುಲದವರು ಅವರು ಹೀನ ಕುಲದವರು. ಅವರು ನಮ್ಮ ಮನೆಯಲ್ಲಿ ಕೆಲಸ ಮಾಡಿಕೊಂಡು ನಾವು ಕೊಡುವ ಪಡಿಯರೂಪದ ದವಸ ಧಾನ್ಯದಲ್ಲಿ ತಮ್ಮ ಜೀವನವನ್ನು ಸಾಗಿಸುತ್ತಿರುವವರು ಎಂದು ತಮ್ಮ ಮನಸ್ಸಿನಲ್ಲಿ ತೀರ್ಮಾನಿಸಿಕೊಂಡು ತನ್ನ ಹೆಂಡತಿ ಹೇಳಿದ ಮಾತಿನಲ್ಲಿ ಸತ್ಯವಿದೆ ಎಂದು ತಿಳಿದ ಈ ತ್ಯಾಂಪಣ್ಣ ಶೆಟ್ಟರು ಹಾಗೆ ತಮ್ಮ ಮಗಳ ಸುದ್ಧಿಯನ್ನು ಎತ್ತಿ ಗಂಗಯ್ಯ ಶೆಟ್ಟಿ ಕೇಳಿಸಿಕೊಳ್ಳುವ ಹಾಗೆ ಮಾಡುತ್ತಾನೆ. ಅಂದ ಈ ಗಂಗಯ್ಯನ ತಂಗಿ ಶ್ರೀದೇವಿಯು ಮದುವೆ ವಯಸ್ಸಿಗೆ ಬಂದಿದ್ದಾಳೆ. ಆಗಲೇ ಎರಡು ಸಂಬಂಧಗಳು ಬಂದು ಅವಳನ್ನು ನಿರಾಕರಿಸಿ ಹೋಗಿರುತ್ತಾರೆ. ಹುಡುಗಿ ಕುಳ್ಳಿ, ರೂಪವತಿ ಅಲ್ಲ ಎಂದು ಅದರರ್ಥ. ವರದಕ್ಷಿಣೆಯಲ್ಲಿ ಹೆಚ್ಚಿಗೆ ಕೊಡಲೆಂದು ಈ ಶೆಟ್ಟರು ಮೊದಲೇ ಜಿಪುಣ ಬುಧ್ಧಿ ಹೊಂದಿರುವವರು. ಇನ್ನು ಹೆಚ್ಚಿಗೆ ಅದೂ ಕೂಡ ಇಪ್ಪತ್ತು ಸಾವಿರ ರೂಪಾಯಿಗಳನ್ನು ಸುದ್ರಾಮ್ ಕೊಡುವುದಿಲ್ಲ. ಅವರು ತಮ್ಮ ಮನಸ್ಸಿನಲ್ಲಿ ಒಂದು ಉಪಾಯವನ್ನು ಮಾಡುತ್ತಾರೆ ಅದೇ ಈ ಪಗರ್ ಸಾಟಿ ಪದ್ಧತಿ. ಅಂದರೆ, ಒಂದು ಹೆಣ್ಣು ಕೊಟ್ಟು ಅದೇ ಮನೆಯಿಂದ ತನ್ನ ಮನೆಗೆ ಇನ್ನೊಂದು ಹೆಣ್ಣನ್ನು ತರುವುದು. ತನ್ನ ಮಗ ಮೊದಲೇ ಹೀನ ಜಾತಿಯ ಹೆಣ್ಣಿನ ಪ್ರೇಮದ ಬಲೆಗೆ ಬಿದ್ದುಬಿಟ್ಟಿದ್ದಾನೆ. ಅವನನ್ನು ಹೇಗಾದರೂ ಮಾಡಿ ಅವಳಿಂದ ದೂರ ಮಾಡಬೇಕು ಎಂದು ಯೋಚಿಸುತ್ತಿದ್ದಗ ತನ್ನ ಮಗಳು ಅವರಿಗೆ ಒಂದು ಅಸ್ತ್ರವಾಗಿ ಕಂಡಳು. ಅದರಲ್ಲಿಯೂ ಅವಳ ಮದುವೆಗೆ ಅಂತ ಕೂಡಿಸಿಟ್ಟಿದ್ದಂತಹ ಹಣವನ್ನೆಲ್ಲಾ ಮಗ ಆನೆ ಮಣ್ಣಿನ ವ್ಯವಹಾರಕ್ಕೆ ಬಳಸಿಕೊಂಡು ಈಗ ತನ್ನ ಋಣದಲ್ಲಿ ಸಿಲುಕಿಕೊಂಡಿದ್ದಾನೆ. ಇದೇ ಅಸ್ತ್ರವನ್ನು ಉಪಯೋಗಿಸಿಕೊಂಡು ಒಂದೇ ಕಲ್ಲಿನಲ್ಲಿ ಎರಡು ಹಣ್ಣುಗಳನ್ನು ಹೊಡೆಯುವಂತಹ ಯೋಚನೆಯನ್ನು ಮಾಡಿದವರು ಸೀದಾ ತನ್ನ ತಂಗಿಯ ಮನೆಗೆ ನಡೆದು ಅಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ ತನ್ನ ತಂಗಿಯ ಬಾಯಿಯಿಂದ ಹೂಂ ಎಂದು ಹಸಿರು ನಿಶಾನೆಯನ್ನು ಪಡೆದುಕೊಂಡು ಬರುತ್ತಾರೆ ಶೆಟ್ಟರು. ಅವರು ಆ ಕಡೆ ಹೋದಾಗ ಗಂಗಯ್ಯ ಶೆಟಿಯ ತಾಯಿ ಕೂಸಕ್ಕೆಯವರು ತನ್ನ ಮಗನಲ್ಲಿ ಈ ವಿಚಾರವನ್ನೇ ಪ್ರಸ್ತಾಪಿಸುತ್ತಾರೆ. ಅದೇನೆಂದರೆ ಶ್ರೀದೇವಿಯನ್ನು ಮದುವೆ ಮಾಡಿ ಕಳುಹಿಸಲು ವರದಕ್ಷಿಣೆಯನ್ನು ಜಾಸ್ತಿ ಕೊಡಬೇಕು. ನಮ್ಮ ಹತ್ತಿರ ಈಗ ಹಣವಾದರೂ ಎಲ್ಲಿ ಇದೆ. ಎಲ್ಲಾ ಹಣವನ್ನು ನಿನ್ನ ವ್ಯವಹಾರಕ್ಕೆ ಖರ್ಚಾಗಿದೆ. ಹಾಗಾಗಿ ನೀನು ಯೋಚಿಸು ನಿನ್ನ ತಂದೆ ಪಗರ್ ಸಾಟಿಯ ವಿಷಯ ಮಾತನಾಡಿಕೊಂಡು ಬರಲು ನಿನ್ನ ಅತ್ತೆಯ ಮನೆಗೆ ಹೋಗಿದ್ದಾರೆ ಎಂದು ಹೇಳಿ ಗಂಗಯ್ಯ ಶೆಟಿಯನ್ನು ಇಕ್ಕಟ್ಟಿಗೆ ಸಿಲುಕಿಸುತ್ತಾರೆ.

ಹೀಗೆ ಇಂತಹ ಮಾತುಗಳನ್ನು ಕೇಳಿದಂತಹ ಗಂಗಯ್ಯನು ತೀರಾ ಇಕ್ಕಟ್ಟಿಗೆ ಸಿಲುಕಿ ಹಾಕಿಕೊಳ್ಳುತ್ತಾನೆ. ಇತ್ತ ಒಬ್ಬ ಅಣ್ಣನಾಗಿ ಅವಳ ಮದುವೆಯನ್ನು ಮಾಡಬೇಕಾಗಿರುವುದು ಅವನ ಕರ್ತವ್ಯ. ಆದರೆ, ಆ ಕರ್ತವ್ಯವನ್ನು ನಡೆಸಿಕೊಡಬೇಕು ಎಂದರೆ ತಾನು ತನ್ನ ಸೇವಂತಿಯನ್ನು ಬಿಟ್ಟು ತನ್ನ ಅತ್ತೆ ಮಗಳನ್ನು ಮದುವೆ ಆಗಬೇಕು. ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸಿದಂತಹ ಸೇವಂತಿಯನ್ನು ಬಿಟ್ಟು ಅವನು ತನ್ನ ಜೀವನವನ್ನು ಕಲ್ಪಿಸಿಕೊಂಡು ಕಣ್ಣೀರನ್ನು ಸುರಿಸಿದನು. ಮತ್ತು ಸೇವಂತಿಗೆ ಮುಖವನ್ನು ತೋರಿಸಲಾಗದೆ ಮನೆಯಲ್ಲಿಯೇ ಕುಳಿತ. ಈ ವಿಷಯವನ್ನು ತ್ಯಾಂಪಣ್ಣ ಶೆಟ್ಟರು ತನ್ನ ಮಗನಿಗೆ ಹೇಳುವ ಮೊದಲು ಆ ಊರಿನ ಜನರುಗಳು

ಹೇಳಿ ಆ ನಂತರ ಮಗನಿಗೆ ಹೇಳುತ್ತಾನೆ. ಇದರ ಅರ್ಥವೇನೆಂದರೆ ಆಕಸ್ಮಾತ್ ಮಗ ಈ ಮದುವೆಗೆ ಒಪ್ಪದೇ ಹೋದರೆ ಆಗ ಈ ವಿಷಯ ಇಡೀ ಊರಿಗೆಲ್ಲ ತಿಳಿಸಿದ್ದೇನೆ ಮಗ. ಈ ಊರಿನಲ್ಲಿ ನನ್ನ ಮರ್ಯಾದೆಯನ್ನು ಕಳೆಯಬೇಡ ಎನ್ನುವಂತಹ ಹೊಸ ಅಸ್ತ್ರವನ್ನು ಬಳಸಬಹುದು ಎಂದು ಅವನು ಮೊದಲು ಊರಿನ ಜನರಿಗೆ ತಿಳಿಸಿರುತ್ತಾನೆ. ಈ ವಿಷಯ ತನ್ನ ತಂದೆಯ ಮೂಲಕ ಕೇಳಿದಂತಹ ಆ ಎಳೆ ವಯಸ್ಸಿನ ಅಂದದ ಚೆಲುವೆ ಸೇವಂತಿಯು ಗದ್ಗದಿತಳಾಗಿ ನೇರ ನೇತ್ರಾವತಿಯ ಹೊಳೆಯ ದಂಡೆಗೆ ಬರುತ್ತಾಳೆ.

ಇದಕ್ಕಿಂತಲೂ ಮುಂಚೆ ಗಂಗಯ್ಯ ಶೆಟ್ಟಿ ಮತ್ತು ಸೇವಂತಿಯು ಪ್ರೀತಿಸಿ ಚೆನ್ನಾಗಿದ್ದಾಗ ಸೇವಂತಿಯು ಗಂಗಯ್ಯನಲ್ಲಿ ಒಂದು ಜೊತೆ ಬೆಂಡೋಲೆ ಮಾಡಿಸಿಕೊಡುವಂತೆ ಕೇಳಿಕೊಂಡಿರುತ್ತಾಳೆ. ಅದೇ ದಿನ ಗಂಗಯ್ಯನು ಪೇಟೆಗೆ ಹೋಗಿ ಆ ಓಲೆಗೆ ಮುಂಗಡ ಹಣ ನೀಡಿ ಬಂದಿರುತ್ತಾನೆ. ಆದರೆ, ಈಗ ಗಂಗಯ್ಯ ಶೆಟ್ಟಿ ತನ್ನ ತಂದೆಯ ಮಾತು ಕೇಳಿ ನೇರ ಆ ಆಚಾರಿಯ ಹತ್ತಿರ ಹೋಗಿ ಆ ಓಲೆಗಳನ್ನು ತೆಗೆದುಕೊಂಡು ಬರುತ್ತಾನೆ.

ಅಂದರೆ ಗಂಗಯ್ಯ ಶೆಟ್ಟಿಯು ಈ ಹೊತ್ತಿಗಾಗಲೇ ತನ್ನ ಮನಸ್ಸಿನ ಯಾವುದೋ ಒಂದು ಮೂಲೆಯಲ್ಲಿ ತನ್ನ ಸೋದರ ಅತ್ತೆಯ ಮಗಳನ್ನು ಮದುವೆಯಾಗಲು ಒಪ್ಪಿಕೊಂಡಂತೆ ಕಾಣುತ್ತದೆ. ಅದೂ ಕೂಡ ಒಲ್ಲದ ಮನಸ್ಸಿನಿಂದ. ಈ ರೀತಿಯ ಓಲೆಗಳನ್ನು ಸೇವಂತಿಯ ಕೈಗೆ ನೀಡಿ ಅವಳಿಗೆ ನಿಧಾನವಾಗಿ ಮಾತನಾಡಿಸಿ ಸಮಾಧಾನಪಡಿಸಿ ಆ ನಂತರ ತನ್ನ ಮದುವೆಯ ಸುದ್ದಿಯನ್ನು ಮತ್ತು ತನ್ನ ಸಂದಿಗ್ಧ ಪರಿಸ್ಥಿತಿಯನ್ನು ಆಕೆಗೆ ವಿವರಿಸಿ ಹೇಳಿ ಅವಳನ್ನು ಸಮಾಧಾನ ಮಾಡೋಣವೆಂದು ತೀರ್ಮಾನಿಸಿ ತಾವು ಪ್ರತಿ ದಿನವೂ ಸೇರುತ್ತಿದ್ದಂತಹ ನೇತ್ರಾವತಿ ನದಿಯ ತೀರಕ್ಕೆ ಬಂದು ನೋಡಿದರೆ ಅಲ್ಲಿ ಅಷ್ಟೊತ್ತಿಗಾಗಲೇ ಅಲ್ಲಿಗೆ ಸೇವಂತಿಯು ಬಂದು ಕುಳಿತಿರುತ್ತಾಳೆ. ಇವನು ಸ್ವಲ್ಪ ಸಮಯವನ್ನು ಮೌನದಲ್ಲಿಯೇ ಕಳೆದು ನಂತರ ತನ್ನ ವಿಷಯಗಳನ್ನೆಲ್ಲ ಹೇಳುತ್ತಾನೆ. ಆದರೆ ಸೇವಂತಿಯು ಯಾವುದೇ ಮಾತುಗಳನ್ನು ಆಡದೆ ಮೌನವಾಗಿಯೇ ಕುಳಿತಿರುವಾಗ ಅವಳ ಕೈಗೆ ತನ್ನ ಬಳಿ ತಂದಿದ್ದಂತಹ ಓಲೆಗಳನ್ನು ಕೊಟ್ಟಾಗ ಅವಳು ಕೈಗೆ ತೆಗೆದುಕೊಂಡಾಗ ಅಂತಹ ಸ್ಥಿತಿಯಲ್ಲಿಯೂ ಕೂಡ ಗಂಗಯ್ಯ ಸೇವಂತಿ ಓಲೆಗಳನ್ನು ಇಸಿದುಕೊಂಡಂತಹ ಪರಿಯನ್ನು ನೋಡಿ ಇವಳು ಇದಕ್ಕೋಸ್ಕರ ಆಸೆ ಪಟ್ಟಳು ಎಂದು ಕೇವಲವಾಗಿ ಆ ಸೇವಂತಿಯ ಗುಣಸ್ವಭಾವಗಳನ್ನು ಇವನು ಬೇರೆಯ ರೀತಿಯಲ್ಲಿಯೇ ಅರ್ಥೈಸಿಕೊಳ್ಳುತ್ತಾನೆ. ಆದರೆ ಸೇವಂತಿಯು ಅವನ ಕಲ್ಪನೆಗಳಿಗೆ ನಿಲುಕದಂತಹ ಹೆಣ್ಣು. ಆ ನೇತ್ರಾವತಿಯ ನೀರಿನೊಳಗೆ ಸ್ವಲ್ಪ ನಡೆದವಳೇ ಆ ಹೊಳೆಗೆ ಆ ಬೆಂಡೋಲೆಗಳನ್ನು ಎಸೆದು ಬಂದು ಬಿಡುತ್ತಾಳೆ. ಅವಳ ಹಿಂದೆಯೇ ನೀರಿಗೆ ಹೋದಂತಹ ಗಂಗಯ್ಯಶೆಟ್ಟಿಯು ಅಲ್ಲೇ ನೀರಿನಲ್ಲಿ ನಿಂತು ಯೋಚಿಸುತ್ತಿರುತ್ತಾನೆ.

ಈ ಗಂಗಯ್ಯ ಊಹೆಯನ್ನೂ ಮಾಡದಂತೆ ಆ ಸೇವಂತಿಯು ನಡೆದುಕೊಂಡು ಬಿಡುತ್ತಾನೆ. ಅಂದರೆ ಸೇವಂತಿಯ ಪ್ರೀತಿಯು ನಿಜವಾದಂತಹ ಪ್ರೀತಿಯಾಗಿರುತ್ತದೆ. ಅವಳು ಈ ಶೆಟ್ಟಿಯ ಹಣ, ಆಸ್ತಿ, ಒಡವೆಗಳಿಗೆ ಆಸೆಪಟ್ಟು ಇವನನ್ನು ಪ್ರೀತಿಸಲಿಲ್ಲ. ಶೆಟ್ಟಿಯ ಪ್ರೀತಿಯೂ ಸಹ ಅದೇ ರೀತಿ ಪರಿಶುದ್ಧವಾಗಿಯೇ ಇತ್ತು. ಇಂತಹ ಪ್ರೀತಿಯನ್ನು ನಾಶ ಮಾಡಿದವರು ತ್ಯಾಂಪಣ್ಣ ಶೆಟ್ಟರು ಮತ್ತು ಕೂಸಕ್ಕೆಯವರು. ಅಂದರೆ, ಅಂತಹ ಸಂಪ್ರದಾಯಗಳು, ಜಾತಿ ಪದ್ಧತಿಗಳು ಇರುವಂತಹ ಆ ಊರಿನಲ್ಲಿ ಈ ರೀತಿಯ ಅಂತರ್ಜಾತಿಯ ವಿವಾಹವನ್ನು ಒಪ್ಪಿಕೊಳ್ಳಲು ಅವರ ಮನಸ್ಥಿತಿಗಳು ಬದಲಾಗಿರಲಿಲ್ಲ. ಈ ರೀತಿಯ ಮಗಳ ಮತ್ತು ಗಂಗಯ್ಯ ಶೆಟ್ಟಿಯ

ನಡುವಿನ ಪ್ರೀತಿ-ಪ್ರೇಮದ ಬಗೆಗೆ ಪಾಪ ಸೇವಂತಿಯ ತಂದೆಗೆ ಒಂದು ಚೂರು ಮಾಹಿತಿ ಇರುವುದಿಲ್ಲ. ಒಟ್ಟಿನಲ್ಲಿ ಒಂದು ಸುಂದರವಾದ ಪ್ರೇಮಕಥೆ ದುರಂತ ಅಂತ್ಯವನ್ನು ಕಾಣುತ್ತದೆ.

ಗೇಣಿದಾರರ ಏಣಿಯಾಟ

ಈ ಕತೆಯಲ್ಲಿ ಕರಾವಳಿ ಪ್ರದೇಶದಲ್ಲಿ ಸ್ವಾತಂತ್ರ್ಯ ನಂತರದಲ್ಲಿ ನಡೆದಂತಹ ಬೆಳವಣಿಗೆಗಳ ಬಗೆಗೆ ಹೆಚ್ಚಿನ ರೀತಿಯಲ್ಲಿ ಗಮನ ಹರಿಸಲಾಗಿದೆ. ಅಂದರೆ, ಆ ಹಿಂದಿ ಕುರಡಾಲ ನಗರವು ಈಗಿನ ಮಂಗಳೂರು ಎಂದು ಬದಲಾದಂತಹ ಪರಿಯನ್ನು ವಿವರಿಸಲಾಗಿದೆ. ಆ ನಂತರ ಅಲ್ಲಿ ಆಧುನೀಕರಣ, ನಗರೀಕರಣ, ಕೈಗಾರಿಕರಣಗಳು ಹೇಗೆ ನರ್ತನವನ್ನು ಮಾಡಲಾರಂಭಿಸಿದವು ಎಂಬುದು ಇದೆ. ಇಂತಹ ಅಭಿವೃದ್ಧಿಗಳಿಂದ ಭೂಮಿ ಕಳೆದು ಕೊಂಡವರು ಭೂಮಿ ಪಡೆದು ಕೊಂಡವರು ಎಂದು ಕರೆಯುವಂತಹ ಧಣಿಗಳು ಮತ್ತು ಗೇಣಿದಾರರುಗಳ ಸವಿಸ್ತಾರವಾದಂತಹದ ಚಿತ್ರಣವನ್ನು ನಾಗವೇಣಿಯವರು ತಮ್ಮ ಬಾಲ್ಯದ ನೆನಪಿನಾಳದಿಂದ ತೆಗೆದು ಬಿಚ್ಚಿರುವಂತಹ ಕತೆಯೇ ಈ ಗೇಣಿದಾರರ ಏಣಿಯಾಟ.

ಸ್ವಂತ ಭೂಮಿಯು ಇಲ್ಲದೆ ಧಣಿಗಳ ಭೂಮಿಯನ್ನು ಗೇಣಿಗೆ (ಗುತ್ತಿಗೆ) ಪಡೆದು ಅವುಗಳನ್ನೇ ತನ್ನ ಸ್ವಂತ ಭೂಮಿ ಎಂದು ತಿಳಿದುಕೊಂಡು ಅದರಲ್ಲಿ ಧವಸ ಧಾನ್ಯ ಅಥವಾ ಭತ್ತವನ್ನು ಬೆಳೆದು ಬಂದಂತಹ ಬೆಳೆಯಲ್ಲಿ ಧಣಿಗಳಿಗೆ ಒಂದು ಪಾಲು ಧಾನ್ಯವನ್ನು ಕೊಟ್ಟು ಉಳಿದದ್ದನ್ನು ತಾವು ಇಟ್ಟುಕೊಂಡು ತಮ್ಮ ಜೀವನವನ್ನು ನಡೆಸುತ್ತಿದ್ದಂತಹ ದಲಿತು ಮತ್ತು ಕೆಳವರ್ಗದ ಜನರುಗಳಿಗೆ ಸರ್ಕಾರ ಒಂದು ಏಣಿಯಂಥ ಕಾಯಿದೆಯನ್ನು ಜಾರಿಗೊಳಿಸಿ ತಮ್ಮ ಸ್ವಂತ ಭೂಮಿಯನ್ನಾಗಿ ಮಾಡಿಕೊಡುವಂತಹ ಕಾಯಿದೆ ಜಾರಿಗೆ ಬಂದು ಉಳ್ಳವರು ಅಥವಾ ಧಣಿಗಳು ಎಂದು ಕರೆಸಿಕೊಳ್ಳುತ್ತಿದ್ದವರು ತಮ್ಮ ತಮ್ಮ ಭೂಮಿಯನ್ನು ಕಳೆದುಕೊಂಡು ಪರಿತಪಿಸುವಂತಹ ಕೆಲಸ ಮಾಡಿತು.

ನಾಗವೇಣಿಯವರ ಪರಿಸರದ ಬೆಗಿನ ಕಥಾ ಸಂಕಲನವಾದಂತಹ ವಸುಂಧರೆಯ ಗ್ಯಾನ ಎಂಬ ಸಂಕಲನದಲ್ಲಿ ಕಂಡು ಬರುವಂತಹ ಈ ಕತೆಯು ನಾಗವೇಣಿಯವರ ಬಾಲ್ಯದ ನೆನಪಿನ ಜೊತೆಗೆ ಹಲವಾರು ಗಂಭೀರವಾದಂತಹ ವಿಷಯಗಳನ್ನು ಚರ್ಚಿಸುತ್ತಾ ಚರ್ಚಿಸುತ್ತಾ ಕರಾವಳಿ ನಾಡಿನ ಇತಿಹಾಸವನ್ನು ತಿಳಿಯದವರಿಗೆ ತಿಳಿಸಕೊಡುವಂತಹ ಕಾರ್ಯವನ್ನು ಮಾಡುತ್ತಿದೆ. ಅಂದರೆ ನಾಗವೇಣಿಯವರು ಹುಟ್ಟುವುದಕ್ಕೂ ಮುಂಚಿನ ಅಲ್ಲಿನ ಪರಿಸರ ಜನರ ಜೀವನದ ವಿಷಯಗಳನ್ನು ತನ್ನ ಅಮ್ಮನ ಬಾಯಿಂದ ಕೇಳುತ್ತಾರೆ. ನಂತರ ತಾವು ಚಿಕ್ಕಂದಿನಿಂದ ಆಡಿ, ನೋಡಿ ಬೆಳೆದಂತಹ ವಿಷಯಗಳನ್ನು ಕೂಡ ಅವರು ಇಲ್ಲಿ ಪ್ರಸ್ತಾಪಿಸುತ್ತಾ ಹೋಗುತ್ತಾರೆ.

ಅಂದರೆ, ಈಗಿನ ಮಂಗಳೂರು ಮೊದಲು ಕುಂಡಾಲ ಎಂಬ ಪುಟ್ಟ ನಗರವಾಗಿತ್ತು. ಅದು ಬರ ಬರುತ್ತಾ ಕುಡ್ಲಾ ನಗರವಾಯಿತು. ಕೈಗಾರಿಕರಣವೆಂಬ ಮಾರುತ ಆಧುನಿಕತೆ ಎಂಬ ಮಂತ್ರದೊಂದಿಗೆ ಬೀಸಿ ಬರುತ್ತಿದ್ದಂತೆ ನಮ್ಮ ಹಳ್ಳಿಯು ಕುಡಾಲ ಪೇಟೆಯು ಮಂಗಳೂರು ಪೇಟೆಯಾಗಿ ಬದಲಾಯಿತು. ಒಂದು ವಿಷಯವೇನೆಂದರೆ ಮಂಗಳೂರನ್ನು ಅಲ್ಲಿನ ತುಳು ಜನರು ಮತ್ತು ಅಲ್ಲಿ ವಾಸಿಸುವಂತಹ ಜನರು ಈಗಳು

ಅದನ್ನು ಮಂಗಳೂರು ಎಂದು ಕರೆಯುವುದಿಲ್ಲ, ಕುಡ್ಲಾ ನಗರ ಎಂದೇ ಕರೆಯುತ್ತಾರೆ. ಆದರೆ, ಎಲ್ಲಾ ತೀರಿಯ ನಾಮ ಫಲಕಗಳಲ್ಲಿಯೂ ಮಂಗಳುರು ಎಂದೇ ಬರೆದಿರತ್ತಾರೆ.

ಕತೆಯ ಮೊದಲ ಭಾಗದಲ್ಲಿ ಮಂಗಳೂರು ನಗರದ ಸುತ್ತ ಮುತ್ತಲ ಹಳ್ಳಿಗಳ ಪರಿಸರ, ತಾವು ಕಳೆದಂತಹ ಬಾಲ್ಯದ ನೆನವು, ಮಂಗಳೂರಿನಲ್ಲಿ ಇದ್ದಂತಹ ತನ್ನ ಚಿಕ್ಕಮ್ಮ ದೊಡ್ಡಮ್ಮರ ಮನೆಗಳು, ನೇತ್ರಾವಿ, ಪಲ್ಗುಣಿ ನದಿಗಳಲ್ಲಿ ಆಡಿ ಬೆಳೆದಂತಹ ಬಾಲ್ಯ, ಮತ್ತು ತನ್ನ ಪ್ರೀತಿಯ ಅಮ್ಮ ಹೀಗೆ ಎಲ್ಲವನ್ನೂ ಮೆಲುಕು ಹಾಕಿ, ಕರಾವಳಿ ನಾಡಿನ ಪ್ರಕೃತಿ ಸೌಂದರ್ಯವನ್ನು ಓದುಗರ ಕಣ್ಣ ಮುಂದೆ ತರಿಸುವಂತಹ ನಾಗವೇಣಿಯವರು. ಈ ಕತೆಯ ಎರಡನೇ ಭಾಗದಲ್ಲಿ ಕೆಲವು ಗಂಭೀರ ವಿಷಯಗಳನ್ನು ಪ್ರಸ್ತಾಪಿಸಿ ಆಧೂನಿಕರಣ, ಮಂಗಳೂರಿಗೆ ವಿಮಾನ ನಿಲ್ದಾಣ ಬಂದಿದ್ದು, ಪಣಂಭೂರು ಎಂಬ ಪುಟ್ಟ ಬಂದರು, ಅಂತರಾಷ್ಟ್ರೀಯ ಬಂದರು ಆಗಿ ನವ ಮಂಗಳೂರು ಬಂದರು ಎಂದು ಪ್ರಖ್ಯಾತಿ ಪಡೆದದ್ದು, ಉಳ್ಳವರು ಮತ್ತು ಇಲ್ಲದವರ ಬದುಕು ಅಂತಹವರ ಕುಲ ಕಸುಬುಗಳ ಬಗೆಗೂ ಕೂಡ ಚರ್ಚಿಸುತ್ತಾರೆ. ನಂತರ ಈ ಬೀಡಿ ಕಾರ್ಖಾನೆಗಳು ಕೇರಳದಿಂದ ಕರಾವಳಿಗೆ ಬಂದಿದ್ದು, ಅಲ್ಲಿ ಕಾರ್ಮಿಕ ಸಂಘಟನೆಗಳ ಒತ್ತಡಕ್ಕೆ ಈ ಬೀಡಿ ಕಾರ್ಖಾನೆಗಳನ್ನು ಪ್ರತಿ ಹಳ್ಳಿ ಹಳ್ಳಿಗಳಲ್ಲಿಯೂ ತನ್ನ ಬ್ರಾಂಚುಗಳನ್ನು ತೆರೆದು ಕೆಳವರ್ಗದ ಜನರುಗಳನ್ನು ಈ ಗೇಣಿ ಪದ್ಧತಿಯಿಂದ ಮುಕ್ತಿ ಕೊಡಿಸಿದ್ದು ಮತ್ತು ಸರ್ಕಾರದ ಕಾನೂನು ಜಾರಿಯಾಗಿದ್ದು ಧಣಿಗಳು ತಮ್ಮ ಜಮೀನುಗಳನ್ನು ಕಳೆದುಕೊಂಡಿದ್ದು, ಹೀಗೆ ಎಲ್ಲ ವಿಷಯಗಳನ್ನು ನಗವೇಣಿಯವರು ಚರ್ಚಿಸುತ್ತಾರೆ.

ಈ ಕೈಗಾರಿಕರಣಗಳು ಮಂಗಳುರು ನಗರವನ್ನು ಪ್ರವೇಶಿಸಿದ ನಂತರ ಅದುವರೆಗೂ ಕೇವಲ ಸಾಗುವಳಿ ಕೆಲಸ, ಮೀನುಗಾರಿಕೆ ಕೆಲಸ ಮತ್ತು ಜಾತಿ ಸಂಬಂಧಿ ವೃತ್ತಿಗಳನ್ನು ಮಾತ್ರ ನಂಬಿಕೊಂಡು ತಮ್ಮ ಜೀವನವನ್ನು ಸಾಗಿಸುತ್ತಿದ್ದಂತಹ ಜನರುಗಳಿಗೆ ಹೊಸದೊಂದು ಅನ್ನದ ದಾರಿಯನ್ನು ತೋರಿಸುತ್ತವೆ. ಆಗ ಸುತ್ತ ಮುತ್ತಲಿನ ಹಳ್ಳಿಯ ಜನರುಗಳೆಲ್ಲಾ ಪೇಟೆಯ ಕಡೆಗೆ ವಲಸೆ ಬರತೊಡಗಿದರು. ಅದಂತೆ ಬಡತನದಲ್ಲಿಯೇ ಹುಟ್ಟಿ, ಬಡತನದ ತೊಟ್ಟಿಲಲ್ಲಿಯೇ ಹಾಡಿ ಬೆಳೆ, ಮಳೆಯಾಂದಿಗೆ ನಿರಂತರವಾಗಿ ಸೆಣೆಸುತ್ತಾ ಸಾಗುವಳಿಯನ್ನು ಮಾಡುತ್ತಿದ್ದ ಊರಿನ ಚಾಲಗೇಣಿ ಮತ್ತು ಮೂಲ ಗೇಣಿ ಒಕ್ಕಲಿನ ಕುಟುಂಬಗಳು ನಗರಗಳತ್ತ ಗುಳೆ ಎದ್ದು ಹೊರಟಿದ್ದರಿಂದ ಆಯಾ ಊರಿನ ಭೂ ಹಿಡುವಳಿದಾರರಿಗೆ ಈ ಪ್ರಕ್ರಿಯೆಯು ನುಂಗಲಾರದ ತುತ್ತಾಗಿ ಪರಿಣಮಿಸಿತ್ತು. ಅಲ್ಲಿನ ಕೈಗಾರಿಕರಣದ ಬಿಸಿಯು ಭೂಮಾಲಿಕರಿಗೆ ಹೀಗೆ ತಟ್ಟಿತ್ತು. ಅಂತಹ ಸಮಯದಲ್ಲಿ ತಮ್ಮ ಹೊ ಗದ್ದೆಗಳಲ್ಲಿ ಕೂಲಿ ಕೆಲಸ ಮಾಡಲು ಆಳುಗಳೇ ಸಿಗದಂತಾಗಿ ಧಣಿಗಳು ಅಥವಾ ಉಳ್ಳವರು ಪ್ರತೀ ವರ್ಷ ಮೂಟೆಗಟ್ಟಲೇ ದವಸ ಧಾನ್ಯಗಳನ್ನು ತಮ್ಮ ಅಟ್ಟಕ್ಕೆ ಏರಿಸಿ ಕೊಳೂತ್ತಿದ್ದಂತಹ ಪ್ರಕ್ರಿಯೆಗೆ ಹೊಡೆ ಬಿದ್ದಿತು. ಎಷ್ಟೋ ಭೂ ಮಾಲೀಕರು ಹೀಗೆ ಕೂಲಿಕಾರರು ಸಿಗದೇ ಇರುವಾಗ ಭತ್ತ ಬೆಳೆಯುವುದನ್ನು ಬಿಟ್ಟು ತಮ್ಮ ತಮ್ಮ ಜಮೀನುಗಳಲ್ಲಿ ಅಡಿಕೆ ಗಿಡಗಳು ಮತ್ತು ತೆಂಗಿನ ಗಿಡಗಳನ್ನು ನೆಟ್ಟು ಕೇವಲ ಸ್ವಲ್ಪವೇ ಜಮೀನನ್ನು ಗೇಣಿಗೆ ಕೊಟ್ಟು ಅದರ ಧಾನ್ಯಗಳಿಂದ ತಮ್ಮ ಬದುಕು ಜೀವನವನ್ನು ಸಾಗಿಸುವಂತಹ ಪ್ರಕ್ರಿಯೆ ಆರಂಭವಾಯಿತು. ಈ ರೀತಿ ನಡೆಯುವಾಗ ಅದೇ ಹಳ್ಳಿ ಲೋಕು ಶೆಟ್ರು ಕೂಡ ತನ್ನ ಒಕ್ಕಲು ಮಕ್ಕಳು ಅದೇ ದಾರಿ ಹಿಡಿದದ್ದನ್ನು ಕಂಡು ಕಂಗಾಲಾಗಿ ಕುಳಿತರು. ಅದರಲ್ಲಿ ವಲಿತರ ತ್ಯಾಂಪಣ್ಣ ಮ್ಯಾಲಿ ಕೂಡ ಒಬ್ಬ. ಇವನನ್ನು ಜಾಕಿ ಹಣವನ್ನು ನೀಡಿ ಆ

ಮೇಲೆ ಹೋಗು ಎಂದಾಗ ಅವನು ತನ್ನ ಮಗನನ್ನು ಅವರ ಹತ್ತಿರ ಕೆಲಸಕ್ಕೆ ಬಿಟ್ಟು ಇವನು ಕಾರ್ಖಾನೆಗೆ ಹೋಗಿ ದುಡಿದು ತಂದು ಎರಡು ತಿಂಗಳ ನಂತರ ಅವರ ದುಡ್ಡು ತಂದು ಕೊಟ್ಟು ತನ್ನ ಮಗನನ್ನು ಬಿಡಿಸಿಕೊಂಡು ಪೇಟೆಗೆ ತನ್ನ ಸಂಸಾರವನ್ನು ವರ್ಗಾಯಿಸಿಕೊಂಡನು.

ಇಂಥಹ ಸಮಯದಲ್ಲಿಯೇ ಮಂಗಳೂರಿಗೆ ವಿಮಾನ ನಿಲ್ದಾಣ ಮಂಜೂರಾಗಿ ವಿಮಾನ ಹಾರಟವು ಪ್ರಾರಂಭಿಸಿತು. ಆದರೆ ಯಾರಲ್ಲೂ ಸಹ ಪುಳಕಗಳು ಆಗಿರಲಿಲ್ಲ. ಏಕೆಂದರೆ ನಮ್ಮೂರಿಗೆ ವಿಮಾನ ಬಂದರೇನಂತೆ ನಾವು ಅದಕ್ಕೆ ಹತ್ತಲು ನಮ್ಮ ಹತ್ತಿರ ದುಡ್ಡು ಬೇಕಲ್ಲ ಎಂದು ಅವರವರು ಅವರವರ ಕೆಲಸಗಳಿಗೆ ತೊಡಗಿ ಕೊಳ್ಳತೊಡಗಿದರು.

ಈ ವಿಮಾನಕ್ಕಿಂತ ಮತ್ತೊಂದು ದೊಡ್ಡ ಸುದ್ದಿಯು ಬಂದು ಅಪ್ಪಳಿಸಿತ್ತು. ಅದೇನೆಂದರೆ ಪೇಟೆಯ ಬೀಡಿ ಕಂಪನಿಗಳೆಲ್ಲಾ ಇನ್ನು ಮುಂದೆ ಪ್ರತಿ ಹಳ್ಳಿ ಹಳ್ಳಿಗಳಲ್ಲಿಯೂ ಬ್ರಾಂಚುಗಳನ್ನು ತೆರೆದು ಹಳ್ಳಿಗಳ ಹೆಂಗಸರು ಗಂಡಸರುಗಳ ಕೈಗೆ ಕೆಲಸ ಕೊಡುತ್ತವೆ ಎಂಬುದಾಗಿತ್ತ. ಇದು ಧಣಿಗಳಿಗೆ ತಮ್ಮ ಎದೆ ಬಡಿತವನ್ನು ನಿಲ್ಲಿಸುವಂತಾಗಿತ್ತು. ಏಕೆಂದರೆ ಈ ಕಾರ್ಖಾನೆಗಳು ಪೇಟೆಗೆ ಬಂದು ಹಳ್ಳಿಯ ಅರ್ಧ ಜನರು ಪೇಟೆಗೆ ವಲಸೆ ಹೋಗಿದ್ದಾರೆ. ಆದರೆ ಈಗ ಹಳ್ಳಿಯಲ್ಲಿ ಅಲ್ಪ ಸ್ವಲ್ಪ ಕೂಲಿ ಕೆಲಸದ ಆಳುಗಳು ಸಿಗುತ್ತಿದ್ದಾರೆ. ಈ ಬೀಡಿ ಕೆಲಸವನ್ನು ಮಾಡುವುದರಿಂದ ನಮ್ಮ ಕೃಷಿ ಕೆಲಸಗಳಿಗೆ ಆಳುಗಳೇ ಸಿಗದೆ ನಾವು ಮಣ್ಣು ತಿನ್ನುವಂತಹ ಕಾಲ ಬಂತಲ್ಲಾ ಎಂದು ಧಣಿಗಲು ಯೋಚಿಸ ತೊಡಗಿದರು. ಈ ರೀತಿ ಬೀಡಿ ಕಂಪನಿಗಳು ಪೇಟೆಯಲ್ಲಿ ಕೆಲಸ ನಿಲ್ಲಿಸಿ ಹಳ್ಳಿಗಳಲ್ಲಿ ಬ್ರಾಂಚು ತೆಗೆಯಲು ಕಾರಣವೆಂದರೆ ಕಾರ್ಖಾನೆಯ ಕಾರ್ಮಿಕರೆಲ್ಲ ಸಂಘಟನೆಗಳನ್ನು ನಮಗೆ ಹೆಚ್ಚು ಕೂಲಿ ಬೇಕು ಮತ್ತು ಬೋನಸ್ ಕೊಡಬೇಕು ಎಂದು ಮಾಲಿಕರ ನಿದ್ದೆಕೆಡಿಸಿದ್ದರು. ಅಂತಹವರನ್ನು ಕೆಲಸದಿಂದ ತೆಗೆದು ಹಾಕಿ ಈ ಹಳ್ಳಿಜನರುಗಳ ಕೈಯಿಂದ ಬೀಡಿ ಸುತ್ತಿಸುವ ಯೋಜನೆಯನ್ನು ಕಾರ್ಖಾನೆಯ ಮಾಲೀಕರು ಮಡಿದ್ದರು. ಮಂಗಳೂರು ಪೇಟೆಗೆ ಬರುವ ಮೊದಲು ಕೇರಳದಲ್ಲಿದ್ದ ಕಾರ್ಖಾನೆಗಳು ಅಲ್ಲಿಯೂ ಇದೇ ಸಮಸ್ಯೆಯನ್ನು ಎದುರಿಸಿ ಅಲ್ಲಿಂದ ರಾತ್ರೋರಾತ್ರಿ ಇಲ್ಲಗೆ ಬಂದು ಕಾರ್ಖಾನೆಗಳನ್ನು ತೆರೆದಿದ್ದವು. ಆದರೆ, ಕೆಲವು ವರ್ಷಗಳ ನಂತರ ಇಲ್ಲಿಯೂ ಅದೇ ಸಮಸ್ಯೆ ಕಂಡಾಗ ಅವರು ನೇರವಾಗಿ ಹಳ್ಳಿಗಳತ್ತ ಮುಖ ಮಾಡಿದರು. ತಮ್ಮ ಕಾರ್ಖಾನೆಗಳಲ್ಲಿ ಪ್ರಾಮಾಣಿಕ ಹಾಗೂ ಯಾವುದೇ ಸಂಘಟನೆಯ ಜೊತೆಗೆ ಗುರುತಿಸಿಕೊಳ್ಳದ ವ್ಯಕ್ತಿಗಳಿಗೆ ಈ ಹಳ್ಳಿ ವ್ಯವಹಾರವನ್ನು ಗುತ್ತಿಗೆ ನೀಡಿದರು. ಇಂತಹ ಗುತ್ತಿಗೆ ಪಡೆದವರಲ್ಲಿ ಮುಸಲ್ಮಾನರೇ ಹೆಚ್ಚು.

ಮನೆ–ಅಂಗಳದ ಕೆಲಸಕ್ಕೆ ಬರುತ್ತಿದ್ದ ಹೆಣ್ಣಾಳುಗಳನ್ನು ಈ ಬೀಡಿ ಉದ್ಯಮ ಸಂಪೂರ್ಣವಾಗಿ ಸೆಳೆಯಿತು. ಒಡೆಯರ ಹಂಗಿಲ್ಲದೆ ಅವರಿಗೊಂದು ದೊಗ್ಗು ಸಲಾಂ ಹಾಕದಂತೆ ಮರ್ಯಾದೆಯಿಂದ ಕಾಸು, ಸ್ವಾಭಿಮಾನ ಮತ್ತು ಆತ್ಮ ವಿಶ್ವಾಸಗಳನ್ನು ಕೂಡ ಸಂಪಾದಿಸುವಂತಹ ಅವಕಾಶ ಸಿಕ್ಕಿತು. ಅದೂ ಕೂಡ ತಮ್ಮ ತಮ್ಮ ಮನೆಗಳಲ್ಲಿಯೇ ಕುಳಿತು.

ಈ ಬೀಡಿ ಉದ್ಯಮವು ಹಳ್ಳಿಯ ಹೆಂಗಸರ ಕೈಗೆ ಹಣವನ್ನು ತೋರಿಸ ತೊಡಗಿದ ಮೇಲೆ ಎಲ್ಲಾ ಹೆಂಗಸರುಗಳು ತಮ್ಮ ಸ್ವಂತ ಸಂಪಾದನೆಯಲ್ಲಿ ಜೀವನ ನಡೆಸುವಂತಹ ಸ್ವಾವಲಂಬಿಗಳಾಗುತ್ತಾರೆ. ಮೊದಲೆಂದರೆ,

ಧಣಿಗಳ ಮನೆಯ ಕೆಲಸಕ್ಕೆ ಹೋದರೆ ಅವರ ಮನೆಗಳಲ್ಲಿ ಪ್ರಾಣಿಗಳಿಗಿಂತಾ ಕೀಳಾಗಿ ಕಾಣುತ್ತಿದ್ದರು. ಮೈಮುರಿಯುವಂತಹ ದುಡಿಮೆ ಮಾಡಬೇಕಿತ್ತು. ಕಡಿಮೆ ಕೂಲಿ ಕೊಡುತ್ತಿದ್ದರು ಮತ್ತು ಬಯಿಗೆ ಬಂದಂತೆ ಬೈಯ್ಯುತ್ತಿದ್ದರು. ಈ ರೀತಿ ಶೋಷಣೆ, ದೌರ್ಜನ್ಯಕ್ಕೆ ಒಳಗಾಗಿ ಅವಮಾನದ ಜೀವನವನ್ನು ನಡೆಸಬೇಕಾಗಿತ್ತು. ಅಂಥವರ ಬಾಳಲ್ಲಿ ಈ ಬೀಡಿ ಸುತ್ತುವ ಕೆಲಸವು ಬೆಳಕಾಗಿ ಬಂದು ತಮ್ಮ ತಮ್ಮ ಮನೆಗಳಲ್ಲಿಯೇ ನೆರಳಿನಲ್ಲಿ ಕುಳಿತು ಯಾರ ಕೈಯಿಂದಲೂ ಬೈಗುಳ ಕೇಳದೆ ಕಡಿಮೆ ಕೆಲಸ ಮಾಡಿ ಹೆಚ್ಚು ಹೆಚ್ಚು ಹಣವನ್ನು ಸಂಪಾದಿಸುವ ಮತ್ತು ಸ್ವಾಭಿಮಾನದಿಂದ ಮರ್ಯಾದೆ ಇಂದ ಯಾರ ಹಂಗಿಗೂ ಒಳಗಾಗದೆ ತಮ್ಮ ಆತ್ಮ ವಿಶ್ವಾಸವನ್ನು ಹೆಚ್ಚಿಸಿಕೊಂಡು ಮಾಡುವಂತಹ ಈ ಬೀಡಿ ಕೆಲಸವು ಎಲ್ಲ ಹಳ್ಳಿಗರ ಅದರಲ್ಲಿಯೂ ಹಿಂದುಳಿದವರ ಮುಖದಲ್ಲಿ ಮಂದಹಾಸ ಮೂಡಲು ನೇರ ಕಾರಣವಾಯಿತು. ಆದರೆ ಧಣಿಗಳನ್ನು ಚಿಂತೆಯ ಸಂತೆಗೆ ನೂಕಿತ್ತು.

ಹೀಗೆ ಬೀಡಿ ಕಾರ್ಯದಲ್ಲಿ ಹಣವನ್ನು ಸಂಪಾದಿಸಿದ್ದ ಹೆಂಗಸರು ಊರಿನಲ್ಲಿ ಒಳ್ಳೊಳ್ಳೆಯ ಬಟ್ಟೆಗಳನ್ನು ಒಡವೆಗಳನ್ನು ಹಾಕಿಕೊಂಡು ವಯ್ಯಾರದಿಂದ ಓಡಾಡುವುದನ್ನು ಸಹಿಸಲಾಗದ ಉಳ್ಳವರು ಎಂದು ಕರೆಯಿಸಿಕೊಳ್ಳುವ ಧಣಿಗಳು ಅಂತಹ ಹೆಂಗಸರಿಗೂ ಮತ್ತು ಆ ಬೀಡಿ ಗುತ್ತಿಗೆಯ ಮುಸ್ಲೀಂ ವ್ಯಕ್ತಿಗಳಿಗೂ ಅನೈತಿಕ ಸಂಬಂಧ ಕಟ್ಟಿ ಹಳ್ಳಿಯಲ್ಲಿ ಇಲ್ಲ ಸಲ್ಲದ ಸುದ್ದಿಗಳನ್ನು ಊರಿನಲ್ಲಿ ಹಬ್ಬಿಸಿ ಖುಷಿ ಪಡುತ್ತಿದ್ದರು. ಅವರಿಗೆ ಮೊದಲ ಸೇಡು ಇನ್ನೂ ಹಸಿರಾಗಿಯೇ ಉಳಿದಿತ್ತು.

ಹೀಗಿರುವಾಗ ಲೇಖಕಿಯವರು ತಮ್ಮ ತಾಯಿಯ ಜೊತೆ ಒಮ್ಮೆ ಪೇಟೆಗೆ ಹೋದಾಗ ಇವರ ಮನೆಯಲ್ಲಿ ಕೂಲಿ ಕೆಲಸ ಮಾಡಿಕೊಂಡು ಇದ್ದಂತ ಪದ್ದುಮ ಎನ್ನುವಂತಹ ಹೆಂಗಸು ಸಿಕ್ಕಾಗ ಇವರ ತಯಿ ಅವರನ್ನು ನೋಡಿ ಆಶ್ಚರ್ಯ ಪಟ್ಟರಂತೆ. ಏಕೆಂದರೆ ಪದುಮ ಮತ್ತು ಅವರ ಮಗಳು ವಾರಿಜ ಈ ಕೂಲಿ ಮಾಡುವವರ ಹಾಗೆ ಕಾಣಿಸುತ್ತಿಲ್ಲ ಉತ್ತಮರ ಹಾಗಿ ಕಾಣಿಸುತ್ತಾರೆ. ಪೇಟೆಯಲ್ಲಿ ಕಾರ್ಖಾನೆಯಲ್ಲಿ ಕೆಲಸ ಮಾಡಿ ಅವರು ತಮ್ಮ ಹಿಂದಿನ ದಾರಿದ್ರ್ಯವನ್ನೆಲ್ಲಾ ಕಳೆದು ಕೊಂಡಿರುತ್ತಾರೆ. ಅವರಿಬ್ಬರೂ ಇವರನ್ನು ನೋಡಿ ಅಡ್ಡ ಬಿದ್ದು ನಮಸ್ಕರಿಸಿದರಂತೆ. ಅವರು ತಮ್ಮ ಮನೆಯ ಕೆಲಸಗಾರರಾಗಿದ್ದವರು ಅಂತ ಗೊತ್ತಿದ್ದರೂ ಸಹ ತಾಯಿಗೆ ಆ ಪದುಮ ಮತ್ತು ವಾರಿಜರನ್ನು ಕಂಡರೆ ಅಪಾರ ಪ್ರೀತಿ. ಆ ಇಬ್ಬರು ಹೆಂಗಸರಿಗೂ ಲೇಖಕಿಯರ ತಾಯಿಯನ್ನು ಕಂಡರೆ ಅಪಾರ ಪ್ರೀತಿ, ಗೌರವಗಳು ಇದ್ದವು. ಅವರನ್ನು ನೋಡಿ ಈ ತಾಯಿಗೆ ಅನ್ನಿಸಿತಂತೆ ಸಂಪಾದನೆಯ ಕೈ ಆ ಮನಸ್ಸಿನೊಳಗೆ ಆತ್ಮ ವಿಶ್ವಾಸವನ್ನು ತುಂಬಿಸುತ್ತದಂತೆ. ಅಂದರೆ, ಕೇವಲ ಆ ಇಬ್ಬರೇ ಹೆಂಗಸರಲ್ಲ ಹಲವಾರು ಹೆಂಗಸರು ಆತ್ಮ ವಿಶ್ವಾಸದಿಂದ, ಧೈರ್ಯದಿಂದ ಅವಸರದಿಂದ, ಮುಗುಳ್ನಗುತ್ತಾ ಕೆಲಸಕ್ಕೆ ಓಗುವುದು ಕಾಣಿಸುತ್ತದೆ. ಈ ರೀತಿ ಬೀಡಿ ಕಂಪನಿಗಳು ಹಳ್ಳಿ ಹಳ್ಳಿಗಳಲ್ಲಿ ತಮ್ಮ ಬ್ರಾಂಚು ತೆರೆದಾಗ ಕೇವಲ ಹಳ್ಳಿಯ ಹೆಂಗಸರಿಗೆ ಅಥವಾ ಗಂಡಸರುಗಳಿಗೆ ಸಹಾಯವಾದುದಲ್ಲಿ ಆ ತುಳು ನಾಡಿನಲ್ಲಿ ಯಾವುದೇ ಗದ್ದೆ, ತೋಟಗಳಿಲ್ಲದೆ, ಕೇವಲ ಪುಡಿ ವ್ಯಾಪಾರಗಳನ್ನೇ ಅಂದರೆ ಸಣ್ಣ ಪುಟ್ಟ ವ್ಯಾಪರಗಳನ್ನು ನಂಬಿಕೊಂಡು ತಮ್ಮ ಜೀವನವನ್ನು ಸಾಗಿಸುತ್ತಿದ್ದಂತಹ ಮುಸಲ್ಮಾನ್ ಕುಟುಂಬಗಳಿಗೂ ಕೂಡ ಸಹಕಾರಿಯಾಗಿತ್ತು.

ಹೀಗೆ ಇವೆಲ್ಲವೂ ನಡೆಯುತ್ತಿರುವಾಗ ರಾಷ್ಟ್ರದ ಸರ್ವ ಋತು ಪಣಂಬೂರು ಬಂದರು ರೆಡಿಯಾಗಿ ನಿಂತಿತ್ತಂತೆ. ಅದೇ ರೀತಿ ಕುದುರೇ ಮುಖ ಯೋಜನೆ, ಮಂಗಳೂರು ರಾಸಾಯನಿಕ ಕಾರ್ಖಾನೆ, ಇನ್ನಿತರ

ಕಾರ್ಖಾನೆಗಳನ್ನು ಸರ್ಕಾರವು ನಿರ್ಮಾಣ ಮಾಡಿತ್ತಂತೆ. ಅದೇ ಸಮಯದಲ್ಲಿಯೇ ಈ ಬೇಕಂಪಾಡಿ ಕೈಗಾರಿಕೆ ಪ್ರದೇಶವು ತಲೆ ಎತ್ತಿತ್ತಂತೆ. ಇವೆಲ್ಲವೂ ನಡೆದು ಜೀವನ ಸಾಗಿಸಬೇಕಾದರೆ ಹಳ್ಳಿಗಳಲ್ಲಿ ಆಳಿದುಳಿದ ಗೇಣಿ ಒಕ್ಕಲು ಮಕ್ಕಳ ಕೈಲಿ ಈ ದಣಿಗಳು ಹೊಡೆದು ಬಡಿದು ಬಲವಂತವಾಗಿ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿರುವಾಗ ಅಂತಹ ಗೇಣಿ ಮಕ್ಕಳನ್ನು ಉಳಿಸುವಂತಹ ಮತ್ತು ಅವರನ್ನೂ ಈ ಧಣಿಗಳ ಸಮಾನಕ್ಕೆ ಬೆಳೆಸಬಲ್ಲಂತಹ ಒಂದು ಕಾನೂನನ್ನು ಕೇಂದ್ರ ಸರ್ಕಾರವು ತಂದೇ ಬಿಟ್ಟಿತು. ಅದೇ "ಉಳುವವನೇ ಭೂಮಿಯ ಒಡೆಯ" ಎನ್ನುವಂತಹ ಕಾನೂನು. ಈ ಕಾನೂನು ಬಂದು ಧಣಿಗಳ ದನಿಯನ್ನೇ ಅಡಗಿಸಿ ಬಿಡುತ್ತದೆ. ಅದು ಗೇಣಿ ಮಕ್ಕಳಿಗೆ ಹೊಸ ಬದುಕು ಕೊಟ್ಟಂತಹ ಭೂ ಸುಧಾರಣಾ ಕಾಯಿದೆ.

ಈ ಕಾಯಿದೆ ಜಾರಿಗೆ ಬರುವಷ್ಟರಲ್ಲಿ ಕುಡಾಲ ಪೇಟೆಯ ಹೆಸರು ಮಾಯವಾಗಿ ಅದು ಮಂಗಳೂರು ನಗರವಾಗಿತ್ತು. 1974ರಲ್ಲಿ ಜಾರಿಗೆ ಬಂದಂತಹ ಈ ಭೂ ಸುಧಾರಣಾ ಮಸೂದೆಯು ಕೇವಲ ಕರಾವಳಿಯಲ್ಲಿ ಮಾತ್ರವಲ್ಲದೆ ಅದು ಇಡೀ ದೇಶದಲ್ಲಿಯೇ ಉಳ್ಳವರು ಮತ್ತು ಇಲ್ಲದವರ ನಡುವೆ ಮತ್ತು ಈ ಕರಾವಳಿಯಲ್ಲಿ ಧಣಿಗಳು ಮತ್ತು ಒಕ್ಕಲುಗಳ ನಡುವೆ ಒಂದು ರೀತಿಯ ಸಾಮಾಜಿಕ ಸಂಘರ್ಷಕ್ಕೆ ದಾರಿ ಮಡಿಕೊಟ್ಟಿತ್ತು. ಅದೇ ರೀತಿಯಲ್ಲಿ ಅದು ನಿಧಾನವಾಗಿ ಆರ್ಥಿಕ ಸಂಘರ್ಷಕ್ಕೂ ಕಾರಣವಾಗುತ್ತದೆ.

ಸರ್ಕಾರವು ಈ ಕಾಯಿದೆಯನ್ನು ಉಳ್ಳವರು ದುರುಪಯೋಗ ಪಡಿಸಿಕೊಳ್ಳಬಾರದು ಎಂದು ಜನತಾ ನ್ಯಾಯಾಲಯಗಳನ್ನು ಆರಂಭಿಸಿ ಅದರ ಮೂಲಕ ಈ ಕಾಯಿದೆಯ ಪ್ರಯೋಜನವನ್ನು ನಿರ್ಗತಿಕ ಬಡ ಕುಟುಂಬಗಳಿಗೆ ಉಡುಗೊರೆಯಾಗಿ ನೀಡಿತು. ಹಿಂದಿನ ಕಾಲದಿಂದಲೂ ಇಲ್ಲಿಯವರೆಗೆ ಯಜಮಾನ್ಯ ಸಂಸ್ಕೃತಿಗೆ ಅಥವಾ ಉಳಗ ಮಾನ್ಯ ಸಂಸ್ಕೃತಿಗೆ ತಲೆ ಬಗ್ಗಿಸಿ ಭಯದಿಂದ ಬದುಕು ಸಾಗಿಸುತ್ತಿದ್ದಂತಹ ಗೇಣಿದಾರ ಜನರುಗಳು ತಮಗಾಗಿ ಜಾರಿಗೆ ಬಂದಂತಹ ಈ ಭೂ ಸುಧಾರಣೆಯ ಸಹಾಯದಿಂದ ಅದರ ಫಲದಿಂದ ಧಣಿಗಳ ವಿರುದ್ಧ ಎದ್ದು ನಿಂತು ಕೈ ಕೈ ಮಿಲಾಯಿಸುವ ಹಂತಕ್ಕೆ ಬೆಳೆದು ನಿಂತರು. ತಾವು ಉಳುತ್ತಿದ್ದಂತಹ ಭೂಮಿಯ ಹಕ್ಕನ್ನು ಪಡೆಯಲು ಗೇಣಿದಾರರು ಜಮೀನಿನ ವಿವರಗಳನ್ನು ಸೇರಿಸಿ ಅರ್ಜಿ ಸಲ್ಲಿಸಿ ನ್ಯಾಯಾಲಯದಲ್ಲಿ ನ್ಯಾಯ ಕೇಳಿದಾಗ ಹೆಚ್ಚಿನ ನ್ಯಾಯ ಗೇಣಿದಾರರಿಗೆ ಲಭಿಸಿತು. ಇದನ್ನು ಸಹಿಸದ ಧಣಿಗಳು ಕೈ ಕೈ ಹಿಸುಕಿಕೊಳ್ಳುವಂತಾಯಿತು. ಈ ತೀರ್ಪಿನ ವಿರುದ್ಧ ಮೇಲಿನ ನ್ಯಾಯಾಲಯಕ್ಕೆ ಹೋಗಲು ಕಾನೂನಿಲ್ಲಿ ಅವಕಾಶವಿರಲಿಲ್ಲ. , ಸುಮ್ಮನಾದರು. ಅಲ್ಲಿಗೆ ಧಣಿ ಗೇಣಿ ಎಂಬ ಪದಗಳು ತಮ್ಮ ಬಳಕೆಯನ್ನು ಕಳೆದುಕೊಂಡವು. ದೊಡ್ಡ ದೊಡ್ಡ ಭೂಮಿ ಮಾಲೀಕರಾಗಿದ್ದಂತಹ ಧಣಿಗಳು ಭೂಮಿ ಕಳೆದುಕೊಂಡು ಸಣ್ಣ ಸಣ್ಣ ಹಿಡುವಳಿದಾರರಾದರು. ಅಲ್ಲಿಗೆ ಎಲ್ಲರೂ ಹೆಚ್ಚು ಕಡಿಮೆ ಸಮನಾದ ಭೂ ಹಿಡುವಳಿದಾರರಾಗಿ ಉಳಿದುಕೊಂಡರು.

ಇವರ್‍ಯಾಕೆ ಕೊರಗರು

ಇವರ್‍ಯಾಕೆ ಕೊರಗರು, ಈ ಕತೆಯ ಶಿರ್ಷಿಕೆಯಲ್ಲಿಯೇ ಪ್ರಶ್ನೆ ಇದೆ. ಇವರು ಏಕೆ ಕೊರಗರಾಗಿದ್ದಾರೆ ಎನ್ನುವಂತಹ ಪ್ರಶ್ನೆ ಆದರೆ ಲೇಖಕಿಯವರಿಗೆ ಈ ಪ್ರಶ್ನೆಗೆ ಉತ್ತರ ಸಿಕ್ಕಿದೆ ಅಂದು ಅನ್ನಿಸುತ್ತದೆ. ಏಕೆಂದರೆ ಕತೆಯನ್ನು ಓದುತ್ತಿರುವ ನಮಗೆ ಉತ್ತರ ಸಿಗುತ್ತದೆ. ಕತೆಯಲ್ಲಿ ಕೊರಗ ಜನಾಂಗದವರ ಜೀವನ ಶೈಲಿ ಅವರ ಹಸಿವು, ಒಡತನ ಅಜಲಿನ ಆಚರಣೆಗಳು ಶೋಷಣೆ ದೌರ್ಜನ್ಯ ಅವರ ಕುಲ ಕಸುಬು. ಹೀಗೆ ಅವರ ಎಲ್ಲಾ ವಿಷಯಗಳನ್ನು ಲೇಖಕಿಯವರು ವರ್ಣಿಸಿದ್ದಾರೆ. ಅದು ತಮ್ಮ ಬಾಲ್ಯದ ನೆನಪುಗಳನ್ನು ತೆರೆದಿಡುತ್ತಾ ಅದರ ಸವಿಯಲ್ಲಿ ಈ ಕೊರಗರ ಜೀವನದ ಸ್ಥಿತಿಯನ್ನಿ ಬಿಚ್ಚಿಡುವಂತಹ ಕಲೆಯನ್ನು ನಾಗವೇಣಿಯವರು ತುಂಬಾ ಚೆನ್ನಾಗಿ ಚಿತ್ರಿಸಿದ್ದಾರೆ.

ತನ್ನ ತಾಯಿ ಸತ್ತಂತ ಸಮಯದಲ್ಲಿ ಅಕ್ಕಂದಿರೊಂದಿಗೆ ತನ್ನ ತವರು ಊರನ್ನು ಒಮ್ಮೆ ನೋಡಿ ಸುತ್ತಿ ಬರುವಂತಹ ಆಸೆಯಿಂದ ಹೊರಟವರು ತಮ್ಮ ಮನೆಯನ್ನು ನಿಯ್ಯತ್ತಿನ ಜೀತದಾಳುಗಳಾಗಿದ್ದಂತಹ ತಬರ, ಬಾಡ, ಜಿಯಲು ಇಂತಹ ಇನ್ನು ಮುಂತಾದವರ ನೆನಪುಗಳನ್ನು ಮೆಲುಕು ಹಾಕುತ್ತಾ ಹಾಕುತ್ತಾ ಇಡೀ ಕೊರಗ ಸಮುದಾಯದ ಸ್ಥಿತಿ ಗತಿ ಗಳನ್ನು ವಿವರಿಸಿದ್ದಾರೆ. ಅವರ ಆರ್ಥಿಕ ಸಾಮಾಜಿಕ ರಾಜಕೀಯ ಸ್ಥಿತಿಗಳು ಇಲ್ಲಿ ಅನಾವರಣಗೊಂಡಿವೆ. ಇವುಗಳನ್ನು ವಿವರಿಸುತ್ತಾ ತನ್ನ ಒಂದು ಲೇಖನವನ್ನು ಅವರು ಈ ಕತೆಯಲ್ಲಿ ಬರೆದಿದ್ದಾರೆ.

ಕೊರಗ ಜನಾಂಗದವರು ಅನುಭವಿಸುತ್ತಿರುವ ಅವಮಾನ ಅವರ ಹಸಿವು ಬಡತನ, ಎಲ್ಲವನ್ನೂ ಸಹ ಹೇಳಿ ಸರ್ಕಾರದ ಸೌಲಭ್ಯಗಳು ಇವರಿಗೆ ಯಾವ ಪ್ರಮಾಣದಲ್ಲಿ ತಲುಪುತ್ತಿವೆ ಎಂಬುದನ್ನು ಸಹ ಗುರುತಿಸಿ ಉದಾಹರಣ ಸಮೇತವಾಗಿ ವಿವರಿಸಿದ್ದಾರೆ.

ನಮ್ಮ ಸಮಾಜದಲ್ಲಿ ಅತ್ಯಂತ ಹಿಂಸಾರೂಪಿಯಾಗಿರುವ ಜಾತಿಯ ಪರಿಕಲ್ಪನೆಯು ಬೆಳೆಯುತ್ತಾ ಬಂದಿದೆ. ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಈ ಕೊರಗರು ಸತ್ತ ಧನ ತಿನ್ನುವ ಜನಾಂಗದಿಂದ ತಿರಸ್ಕೃತಗೊಂಡು, ಹಸಿವು ಬಡತನ ಅವಮಾನದಿಂದ ಧ್ವನಿ ಇಲ್ಲದೆ, ಪ್ರತಿಭಟನಾ ಶಕ್ತಿಯನ್ನು ಸಂಪೂರ್ಣವಾಗಿ ಉಡುಗಿಸಿಕೊಂಡವರು ಎಂಬ ಧೈರ್ಯದಿಂದಲೂ ಇವರನ್ನು ಅಸ್ಪೃಶ್ಯರಲ್ಲಿ ಅಸ್ಪೃಶ್ಯರು ಎಂದು. ಮತ್ತು ಇಡಿ ನಮ್ಮ ಈ ಜಾತಿ ವ್ಯವಸ್ಥೆಯಲ್ಲಿಯೇ ಅಂತ್ಯಜರು ಅಥವಾ ಕೊನೆಯಲ್ಲಿರುವವರು ಎಂದು ಪರಿಗಣಿಸಿ ನಾಡಿನಲ್ಲಿ ವಾಸಿಸಲು ಅರ್ಹರಲ್ಲಿ ಕಾಡಿಗೆ ಸಮ ಎಂದು ಕಾಡಿನವರು ಎಂಬ ಹೆಸರನ್ನು ಕಟ್ಟಿದರು.

ಇವರೂ ಸಹ ಈ ಕೆಟ್ಟ ಪ್ರಪಂಚದಲ್ಲಿ ಕರುಣೆ, ಸಹನೆ ಇಲ್ಲದಂತಹ ಮನುಷ್ಯರುಗಳು ಎಂಬ ಮೃಗಗಳ ಜೊತೆ ನಾವು ವಾಸಿಸುವುದಕ್ಕಿಂತ ನಮ್ಮಲ್ಲಿ ಪ್ರೀತಿಯಿಂದ ಸಹ ಬಾಳ್ವೆಗೆ ಕರೆಯುತ್ತಿರುವ ಪ್ರಕೃತಿ ಮತ್ತು ಅಲ್ಲಿನ ಪ್ರಣಿಗಳೇ ಮೇಲು ಎಂದು ಇವರು ಪ್ರಕೃತಿಯ ಮಡಿಲಿನಲ್ಲಿ ತಮ್ಮ ವಾಸವನ್ನು ಬದಲಿಸಿಕೊಂಡವರು. ಈ ರೀತಿ ಮನುವಿನ ವರ್ಣ ವ್ಯವಸ್ಥೆಯನ್ನು ಕೂಡ ಹೇಳಲಾಗಿದೆ. ಆದರೆ, ಅದರ ದುರುಪಯೋಗವನ್ನು ವಿವರಿಸಲಾಘಿದೆ.

ಹಾಗಾಗಿ ಈ ಕೊರ ಜನಾಂಗದವರನ್ನು ದಕ್ಷಿಣ ಭಾರತದಲ್ಲಿ ವಾಸಿಸುತ್ತುವ ಆದಿ ವಾಸಿ ಬುಡಕಟ್ಟು ಎಂದು ಗುರುತಿಸಿದರು ಮತ್ತು 1956 ರಲ್ಲಿ ರಾಷ್ಟ್ರಪತಿಗಳ ಆದೇಶದಂತೆ ಈ ಕೊರಗ ಜನಾಂಗವನ್ನು ಪರಿಶಿಷ್ಟ ಬುಡಕಟ್ಟು ಎಂದು ಘೋಷಿಸಲಾಯಿತು. ಈ ರೀತಿ ಒಂದು ಬುಡಕಟ್ಟು ಜನಾಂಗವನ್ನು ಪರಿಶಿಷ್ಟ ಬುಡಕಟ್ಟು ಎಂದು ಘೋಷಿಸಬೇಕಾದರೆ ಅಂತಹ ಜನಾಂಗವು ಒಂದು ಬುಡಕಟ್ಟು ಜನಾಂಗಕ್ಕೆ ಇರಬೇಕಾದ ಲಕ್ಷಣಗಳನ್ನು ಹೊಂದಿರಬೇಕು. ಬಾಹ್ಯ ಸ್ವರೂಪಗಳನ್ನು ಮತ್ತು ಒಂದು ತನ್ನದೇ ಆದ ಸ್ವಂತ ಭಾಷೆಯನ್ನು ಸಹ ಹೊಂದಿರಬೇಕು ಮತ್ತು ಸಮಾಜದ ಮುಖ್ಯ ವಾಹಿನಿಯಿಂದ ದೂರವಿರಬೇಕು ಈ ಮೂಲಕ ತಮ್ಮದೇ ಆದ ಆಚಾರಗಳು ಸಂಪ್ರದಾಯಗಳು ಸಂಸ್ಕಾರ ಸಂಸ್ಕೃತಿ, ಸಾಮಾಜಿಕ ಪದ್ಧತಿ ವೇಷಭೂಷಣಗಳು ಮತ್ತು ಬದುಕುವ ಪರಿ, ಇವೆಲ್ಲವನ್ನು ಬೇರೆ ರೀತಿಯಲ್ಲಿಯೇ ತೋರಿಸಿ ತಮ್ಮ ಜನಾಂಗವು ಈ ಸಮಾಜದಲ್ಲಿ ಇತರರಿಗಿಂತ ಭಿನ್ನವಾಗಿದೆ ಎನ್ನುವ ರೀತಿಯಲ್ಲಿರಬೇಕು ಅಂತಹ ಒಂದು ಜನಾಂಗವನ್ನು ಸರ್ಕಾರದ ಸಲಹೆಯ ಮೇರೆಗೆ ರಾಷ್ಟ್ರಪತಿಗಳು ಪರಿಶಿಷ್ಟ ಬುಡಕಟ್ಟು ಎಂದು ಆದೇಶಿಸಿತ್ತಾರೆ ಹೀಗೆ ಬುಡಕಟ್ಟಿನಿಂದ ಪರಿಶಿಷ್ಟ ಬುಡುಕಟ್ಟು ಎಂದು ಸರ್ಕಾರದ ಮಟ್ಟದಲ್ಲಿ ಗುರುತಿಸಿ ಕೊಂಡ ನಂತರ ಅಂತಹ ಜನಾಂಗವು ಸರ್ಕಾರಗಳು ನೀಡುವಂತಹ ಎಲ್ಲಾ ರೀತಿಯ ಸೌಲಭ್ಯಗಳನ್ನು ಸಹ ಪಡೆಯಲು ಅರ್ಹರಾಗಿರುತ್ತಾರೆ. ಆ ನಂತರ ಅವರು ಸಮಾಜದ ಮುಖ್ಯ ವಾಹಿನಿಗೆ ಬಂದು ಈ ಸಾಮಾಜಿಕ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡು ಕಾನೂನಿನ ಅಗತ್ಯ ನೆರವುಗಳನ್ನು ಪಡೆದುಕೊಂಡು ಎಲ್ಲಾ ಮನುಷ್ಯರುಗಳ ರೀತಿಯಲ್ಲಿ ಜೀವನ ಸಾಗಿಸಬಹುದಗಿದೆ.

ಈ ರೀತಿ ಕೊರಗ ಜನಾಂದವರನ್ನು ಪರಿಶಿಷ್ಟ ಬುಡಕಟ್ಟು ಎಂದು ಘೋಷಿಸಿದ ನಂತರ ಭಾರತ ಸರ್ಕಾರವು 1958ರಲ್ಲಿ ಈ ಕೊರಗ ಜನಾಂಗವನ್ನು ದಕ್ಷಿಣ ಕನ್ನಡ ಜಿಲ್ಲೆಯ ಆದಿವಾಸಿ ಬುಡಕಟ್ಟು ಎಂದು ಘೋಷಣೆ ಮಾಡಿತು. ಈ ರೀತಿಯ ಎಲ್ಲಾ ಘೋಷಣೆಗಳ ಫಲವಾಗಿ ಕೊರಗ ಬುಡಕಟ್ಟುವಿನ ಜನಾಂಗದವರ ಆರ್ಥಿಕ, ಸಾಮಾಜಿಕ ಸ್ಥಿತಿಯನ್ನು ಸುದಾರಿಸಲು ಸರ್ಕಾರದ ವತಿಯಿಂದ ಹಲವಾರು ಯೋಜನೆಗಳು ಕಾರ್ಯಕ್ರಮಗಳು ರೂಪುಗೊಂಡವು ಇಂತಹ ಕಾರ್ಯಕ್ರಮಗಳು ನಿರಮತರವಾಗಿ ಶ್ರಮ ಮತ್ತು ಅವಮಾನವನ್ನು ಉಂಡಂತಹ ಕೊರಗ ಸಮಾಜವನ್ನು ಮತ್ತೆ ಸದೃಢಗೊಳಿಸುತ್ತದೆ ಎಂದು ಈ ಸಮುದಾಯದವರ ಹೀನ ಬದುಕನ್ನು ಬಹಳ ಹಿಂದಿನಿಂದಲೇ ನೋಡುತ್ತಾ ಮತ್ತು ಮನುಷ್ಯ ವಿರೋಧಿಯಾಗಿರುವ ಈ ಜಾತಿ ವ್ಯವಸ್ಥೆಯನ್ನು ವಿರೋಧಿಸುತ್ತಾ ಬೆಳೆದು ಬರುತ್ತಿದ್ದಂತಹ ಹಲವಾರು ಜನರುಗಳ ನಿರೀಕ್ಷೆಯಾಗಿತ್ತು.

ಆದರೆ ಆ ನಿರೀಕ್ಷೆ ತನ್ನ ಮಟ್ಟವನ್ನು ತಲುಪಲಿಲ್ಲ ಅದಕ್ಕೆ ಕಾರಣ ನಮ್ಮ ರಾಜಕೀಯ ವ್ಯವಸ್ಥೆ ಮತ್ತು ಆಡಳಿತ ವ್ಯವಸ್ಥೆಯು ಹದಗೆಟ್ಟು ಭ್ರರಷ್ಟಾಚಾರದಿಂದ ಮುಳಾಗಿ ಹೋಗಿರುವುದು.

ಸರ್ಕಾರಗಳೇನೋ ಯೋಜನೆ ಕಾರ್ಯಕ್ರಮಗಳನ್ನು ಹಾಕಿ ಅದಕ್ಕೆ ಇಂತಿಷ್ಟು ಹಣವನ್ನು ಮೀಸಲು ಮಾಡಿರುತ್ತದೆ. ಅದು ನಿಜವಾದ ಫಲಾನುಭವಿಗಳ ಕೈ ಸೇರಬೇಕಾದರೆ ಸುಮಾರು ಕಾಲಾವಕಾಶವನ್ನು ತೆಗೆದುಕೊಳ್ಳುತ್ತದೆ ಮತ್ತು ಸರ್ಕಾರ ತಿಳಿಸಿದಷ್ಟು ಕೊಟ್ಟರೆ ಅದು ಅವರಿಗೆ ತಲುಪುವುದಿಲ್ಲ. ಸರ್ಕಾರ ಮೂಟೆಗಟ್ಟಲೇ ಪ್ರಮಾಣದಲ್ಲಿ ಕೊಟ್ಟರೆ ಅದು ನಿಜವಾದ ಫಲಾನುಭವಿಗೆ ತಲುಪಬೇಕಾದರೆ ಒಂದು ಮುಷ್ಟಿಯಾಗಿರುತ್ತದೆ. ನಮ್ಮಲ್ಲಿರುವಂತಹ ಈ ಅಧಿಕಾರಿ ವರ್ಗವು ಭ್ರಷ್ಟಾಚಾರದಿಂದ ಬಡವರ ಪಾಲಿನ

ಸವಲತ್ತುಗಳನ್ನು ದುರುಪಯೋಗ ಪಡಿಸಿಕೊಂಡು ತಾವು ಬೆಳೆದು ನಿಜವಾದ ಅರ್ಹತೆ ಇರುವವರನ್ನು ಬಡವರನ್ನಾಗಿಯೇ ಉಳಿಸಿ ಬಿಡುತ್ತಾರೆ. ಇದು ಒಂದು ರೀತಿಯ ಮೋಸವಾದರೆ ಮತ್ತೊಂದು ರೀತಯಲ್ಲಿಯೂ ಬಡವರಿಗೆ ಮೋಸ ಮಾಡುತ್ತಾರೆ. ಅದೇನೆಂದರೆ ಒಂದು ಯೋಜನೆಯನ್ನು ಒಂದು ಸಮುದಾಯದವರಿಗೆ ಮೀಸಲಿರಿಸಿದ್ದರೆ. ಅದು ಆ ಸಮುದಾಯದಲ್ಲಿ ಅಲ್ಪ ಸ್ವಲ್ಪ ವಿದ್ಯಾವಂತರಾಗಿ ಬೆಳೆದಿರುವಂತಹವರು ಅದರ ಸೌಲಭ್ಯವನ್ನು ಪಡೆದುಕೊಳ್ಳತ್ತಾರೆ ಆಗ ಆ ಯೋಜನೆಯ ಸೌಲಭ್ಯವು ಆ ಸಮುದಾಯದಲ್ಲಿ ತುಂಭಾ ಹಿಂದೆ ಉಳಿದಿರುವಂತಹವರನ್ನು ತಲುಪುವುದಿಲ್ಲ. ಹೀಗೆ ಸರ್ಕಾರಗಳು ಹತ್ತು ಹಲವು ಯೋಜನೆಗಳನ್ನು ಕೊರಗ ಜನಾಂಗಕ್ಕೆ ಹಮ್ಮಿಕೊಂಡು, ಅವು ಕೊರಗ ಜನಾಂಗದ ಅಭಿವೃದ್ಧಿಗೆ ಶ್ರಮಿಸಲಿಲ್ಲ.

ಇದಕ್ಕೆ ಲೇಖಕಿಯವರು ಈ ಕತೆಯಲ್ಲಿಯೇ ತಮ್ಮ ಮನೆಯಲ್ಲಿ ನಡೆದಂತಹ ಉಪ್ಪಿನಕಾಯಿಯ ಪ್ರಸಂಗವನ್ನು ಉದಾಹರಣೆಯಾಗಿ ನೀಡಿ ಅವರ ಮೂಲಕ ಕೊರಗ ಜನಾಂಗಕ್ಕೆ ಸರ್ಕಾರ ನೀಡಿದ ಯೋಜನೆಗಳೆಲ್ಲವೂ ಯಾರ್‍ಯಾರ ಪಾಲಾದವು ಎಂಬುದನ್ನು ವಿವರಿಸುತ್ತಾರೆ ಮತ್ತು ಅದೇ ರೀತಿಯಲ್ಲಿ ಸರ್ಕಾರದಿಂದ ಮಲ್ಲಿಗೆ ಗಿಡಗಳನ್ನು ವಿತರಿಸುವ ಯೋಜನೆ ಹಾಕಿಕೊಂಡಾಗ ಅದನ್ನ ಪಡೆದಂತಹವರು ಆ ಗಿಡಗಳನ್ನು ಉಳ್ಳವರಿಗೆ ಅಥವಾ ಶ್ರೀಮಂತರಿಗೆ ಮಾರಿ ಅದರಿಂದ ಬಂದಂತಹ ಹಣದಿಂದ ಎರಡು ಹೊತ್ತು ತಮ್ಮ ಹೊಟ್ಟೆ ತುಂಬಿಸಿ ಕೊಂಡಿದ್ದರು ಏಕೆ ಎಂದೂ ಯಾರನ್ನಾದರೂ ಕೇಳಿದರೆ ಆ ಮಲ್ಲಿಗೆ ಗಿಡಗಳನ್ನು ನೆಟ್ಟು ಕೊಳ್ಳಲು ನಮಗೆ ಜಮೀನು ಇಲ್ಲ ಎನ್ನುವ ಉತ್ತರ ನೀಡುತ್ತಾರೆ.

ಹೀಗಿರುವಾಗ 1994 ರಿಂದ ಕೊರಗರು ಭೂಮಿಯ ಚಳುವಳಿಯನ್ನು ನಡೆಸಿಕೊಂಡು ಬರುತ್ತಿದ್ದಾಗ, ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಅಭಿವೃದ್ಧಿ ನಿಗಮದಿಂದ ಕೊರಗರಿಗಾಗಿ ಪುನರ್ವಸತಿ ಯೋಜನೆಯನ್ನು ಹಾಕಿಕೊಳ್ಳುತ್ತದೆ. ಇದರ ಮೊದಲ ಭಾಗವಾಗಿ 2001-02ರಲ್ಲಿ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿ 22 ಮಂದಿ ಕೊರಗರಿಗಾಗಿ ತಲಾ 2 ಎಕರೆಯಂತೆ ಭೂಮಿಯನ್ನು ಖರೀದಿಸಿ ಕೊರಗರಿಗೆ ಹಂಚಿಕೆ ಮಾಡಿತ್ತು. ಅನಕ್ಷರಸ್ಥ ಕೊರಗರು ಈ ಭೂಮಿ ಸಿಕ್ಕೊಡನೆ ಸ್ವರ್ಗಕ್ಕೆ ಜಿಗಿದಷ್ಟೆ ಸಂತೋಷದಿಂದ ಅದನ್ನು ಸಮತಟ್ಟು ಮಾಡಿ ನಂತರ ಕೃಷಿಗೆ ತಕ್ಕಂತೆ ಪರಿವರ್ತಿಸುವ ಬಗೆಗೆ ಯೋಜಿಸುತ್ತದ್ದಂತೆ ಆ ಕಾರ್ಯಕ್ಕೆ ನಿಗಮದಿಂದ ತಲಾ ಹತ್ತು ಸಾವಿರ ರೂಪಾಯಿ ಹಣವೂ ಬಂತು ಅದೇ ರೀತಿ ಆ ಸಮ ತಟ್ಟಿನ ಕೆಲಸ ಮುಗಿಯುವಷ್ಟರಲ್ಲಿ ಒಂದು ನೋಟೀಸು ಬಂತು ಅದೇನೆಂದರೆ ಎರಡು ಲಕ್ಷ ಸಾಲಕ್ಕೆ ಐವತ್ತು ಸಾವಿರ ಅಸಲು ಮತ್ತು ಇಪ್ಪತ್ತೈದು ಸಾವಿರ ರೂಪಾಯಿಯ ಬಡ್ಡಿ ಸೇರಿ ಒಟ್ಟು ಎಪ್ಪತ್ತೈದು ಸಾವಿರ ರೂಪಾಯಿಗಳನ್ನು ಪಾವತಿಸಬೇಕು ಎಂದು ಆಗ ಭೂಮಿ ಪಡಿದಂತಹ ಕೊರಗರೆಲ್ಲರೂ ಕಂಗಾಲಾದರು ಈ ಸಮಾಜದಲ್ಲಿ ಆತ್ಮಾಭಿಮಾನ ಮತ್ತು ಸ್ವಾಭಿಮಾನದಿಂದ ಬದುಕಬೇಕು ಎನ್ನುವ ಚಿಗುರನ್ನು ಸರ್ಕಾರವೇ ಚಿವುಟಿದಂತಾಗಿತ್ತು.

ಇದರ ವಿರುದ್ಧ ಕೊರಗರು ಹೋರಾಟ ಚಳುವಳಿಗಳನ್ನು ಮಾಡುತ್ತಾರೆ ಹೀಗೆ ಇಂತಹ ಗಂಭೀರ ವಿಚಾರಗಳನ್ನು ಕರಾವಳಿ ನಾಡಿನ ಕೊರಗ ಜನ ಸಮೂದಾರದ ಪರಿಸ್ಥಿತಿಯನ್ನು ವಿವರಿಸಿದ್ದಾರೆ. ಆನಂತರ, ಒಂದು ಕಾಲದಲ್ಲಿ ಊಳಿಗ ಮಾನ್ಯ ಸಮಾಜವು ಕೊರಗರನ್ನು ಜಾತಿ ಪದ್ಧತಿಯ ನೆಪದಲ್ಲಿ ಭೌತಿಕವಾಗಿ ಹಾಗೂ ಮಾನಸಿಕವಾಗಿ ಹಿಂಸೆಯನ್ನು ನೀಡಿ ಮಾಪದ ಜಾಲಕ್ಕೆ ಸಿಲುಕಿಸಿರಬೇಕು ಅಸ್ಪೃಶ್ಯತೆಯಿಂದ ಬಳಲಿ ನಿಸ್ತೇಕರಾಗಿದ್ದ

ಕಾಲ ಈಗ ಸ್ವಲ್ಪ ಮಟ್ಟಿಗೆ ಬದಲಾಗಿದೆ ಕೊರಗರ ಪ್ರಮುಖರಲ್ಲಿ ಸಮಾಜವಾದಿ ಚಿಂತನೆ, ನಾಯಕತ್ವ, ನಿಸ್ವಾರ್ಥ ಕೆಲವು ನಾಯಕರು ಹುಟ್ಟಿಕೊಂಡು ತಮ್ಮ ಜನಾಂಗಕ್ಕೆ ಬೆಂಬಲವಾಗಿ ನಿಂತಿದ್ದು ಧ್ವನಿ ಇಲ್ಲದ ಕೊರಗರಿಗೆ ಧ್ವನಿಯಾಗಿ, ಸೈದ್ಧಾಂತಿಕ ಹೊರಾಟದ ದಾರಿ ತೋರಿಸುತ್ತಾ ಅವರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ.

ಹೀಗೆ ಕೊರಗರೂ ಕೂಡ ಅಕ್ಷರಸ್ಥರಾಗಿ ಬೆಳೆದು ನಗರಗಳತ್ತ ಮುಖ ಮಾಡಿ ವಲಸೆ ಬಂದು ತಮ್ಮ ಬದುಕನ್ನು ಹಸನು ಮಾಡಿಕೊಳ್ಳುವಲ್ಲಿ ನಿರತರಾಗಿದ್ದಾರೆ. ನಾಗವೇಣಿಯವರು ಹೀಗೆ ಸ್ವಾತಂತ್ರ್ಯ ಪೂರ್ವದ ಕೊರಗ ಸ್ಥಿತಿ ಗತಿಗಳನ್ನು ವಿವರಿಸಿ ನಂತರ ಸ್ವಾತಂತ್ರ್ಯ ನಂತರದಲ್ಲಿ ಅವರ ಜೀವನ ಶೈಲಿಯನ್ನು ವಿವರಿಸುತ್ತಾರೆ ಈ ಸ್ವಾತಂತ್ರೋತ್ತರ ಭಾರತದಲ್ಲಿ ಈ ಕೊರಗರು ವಿದ್ಯಾವಂತರಾಗಿ ಈ ಮೇಲ್ಜಾತಿಯವರು ಎಂದು ಕರೆಯಿಸಿ ಕೊಳ್ಳುವಂತಹ ಜನರುಗಳು ನಮ್ಮನ್ನು ಇಷ್ಟು ವರ್ಷಗಳ ಕಾಲ ಅವರ ಮನೆಯ ಜೀತಕ್ಕೆ ಬಳಸಿಕೊಂಡಿದ್ದಾರೆ ಮತ್ತು ನಮ್ಮ ಜನಾಂಗವು ಇವರಿಂದ ಶೋಷಣೆ ಮತ್ತು ದೌರ್ಜನ್ಯಗಳನ್ನು ಅನುಭವಿಸಿದೆ ಎಂದು ಮನಗಂಡು ನಾವು ಆ ರೀತಿ ಶೋಷಣೆಗೆ ಒಳಗಾಗಬಾರದೆಂದು ನಗರಗಳತ್ತ ಹೋಗಿ ವಿದ್ಯಾವಂತರಾಗಿ ಉತ್ತಮ ನಾಗರೀಕರಾಗಿ ಜೀವಿಸುತ್ತಿದ್ದಾರೆ ನಂತರ ಕೈಗಾರಿಕರಣದ ಪ್ರಭಾವದಿಂದ ಕಾಡು ನಾಶಕ್ಕೆ ಒಳಗಾಗಿ ಕೊರಗರು ನಾಡನ್ನು ಸೇರುವಂತಾಯಿತು ಕಾಡಿನಲ್ಲಿ ಕೆಲಸ ಇಲ್ಲದೆ ಬುಟ್ಟಿಗಳನ್ನು ಮೊರಗಳ್ನನು ಬಿದಿರಿನಿಂದ ಹೆಣೆದು ಅದರಿಂದ ಬರುವ ಹಣದಲ್ಲಿ ಜೀವನ ಸಾಗಿಸ ತೊಡಗಿದರು. ಆದರೆ ಊರ ಶ್ರೀಮಂತರು ನಮ್ಮ ಅಜಲಿನ ಪದ್ಧತಿಯನ್ನು ನಿರಾಕರಿಸುವ ಆ ಕೊರಗರು ಹೆಣೆದಿರುವಂತಹ ಬುಟ್ಟಿಗಳು ಮೊರಗಳು ಬೇಡ ಎಂದು ತೆಗೆದು ಕೊಳ್ಳಲು ನಿರಾಕರಿಸುತ್ತಾರೆ ಮತ್ತು ಅಷ್ಟೊತ್ತಿಗಾಗಲೇ ಪ್ಲಾಸ್ಟಿಕ್ ಬುಟ್ಟಿಗಳು ಕಡಿಮೆ ಬೆಲೆಗೆ ಸಿಗುತ್ತಿದ್ದವು ಹೀಗೆ ಅವರ ಹಸಿದ ಹೊಟ್ಟೆಗಳನ್ನು ಹಸಿವಿನಿಂದ ಇರುವ ಹಾಗೆ ಮಾಡಿದವು.

ನಂತರ ಈ ಅಜಲಿನ ಪದ್ಧತಿಯ ಕಡೆಗೆ ಸ್ವಲ್ಪ ಹೇಳುತ್ತಾರೆ ಹಾಗೆ ಆ ಊರಿನ ಕೊರಗರ ಅಜಲಿನ ದಯನೀಯ ಸ್ಥಿತಿಯನ್ನು ನಾಗವೇಣಿಯವರು ಕಣ್ಣಾರೆ ಕಂಡವರು ಊರಿನ ಹಬ್ಬಗಳು, ಜಾತ್ರ, ಕೋಲ, ಕಂಬಳ, ನೇಮ, ಮಾರಿ ಪೂಜೆ ಹೀಗೆ ಇವ್ಯಾವುದೇ ಆದರೂ ಸಹ ಎರಡು ದಿನ ಮುಂಚೆಯೇ ಈ ಕೊರಗರು ಹೆಣ ಭಾರದ ಡೋಲನ್ನು ತನ್ನ ಹೆಗಲಿಗೆ ಹಾಕಿಕೊಂಡು ಊಂಡಿ ಸುತ್ತಿ ಕೊಳಲುದಿಕೊಂಡು ಆ ಹಬ್ಬದ ಸುದ್ದಿಯನ್ನು ಮುಟ್ಟಿಸಿ ತನ್ನ ಪಾಲಿನ ದುಡಿತದ ಪ್ರತಿ ಫಲವನ್ನು ಅವರಿಂದ ಬೇಡಿ ಪಡೆಯಬೇಕಾಗಿತ್ತು ಈ ಅಜಲು ಪದ್ಧತಿ ಇಷ್ಟಕ್ಕೆ ಮುಗಿಯುವುದಿಲ್ಲ ಊರಿನಲ್ಲಿ ಯಾರಾದರೂ ಸತ್ತರೆ ಆಗ ಅಜಲಿನ ಕೊರಗ ತನ್ನ ಡೋಲನ್ನು ಬಾರಿಸುತ್ತ ಸತ್ತ ಸುದ್ದಿಯನ್ನು ಮುಟ್ಟಸಬೇಕಿತ್ತು.

ಅದೇ ರೀತಿ ಊರಿನಲ್ಲಿ ಜಾನುವಾರುಗಳು ಸತ್ತರೆ ಅದನ್ನು ಕಾಡಿನ ಅಂಚಿಗೆ ಎಳೆದು ಕೊಂಡು ಹೋಗಿ ಅದರ ಚರ್ಮವನ್ನು ಸುಲಿದು ಅದರ ಮಾಂಸವನ್ನು ಆ ದಿನಕ್ಕೆ ಆಗುವಷ್ಟನ್ನು ಪಡೆದು ಉಳಿದಿದ್ದನ್ನು ಅವರು ಉಪ್ಪು ಬೆರಿಸಿ ಮುಂದಿನ ದಿನಗಳ ಆಹಾರಕ್ಕಾಗಿ ಸಂರಕ್ಷಿಸಿಕೊಳ್ಳುತ್ತಿದ್ದರು. ಅದೇ ರೀತಿ ಊರಿನಲ್ಲಿ ಮದುವೆಯಂತಹ ಕಾರ್ಯಕ್ರಮುಗಳೇನಾದರೂ ನಡೆದರೆ ಅಂತಹ ಸಮಯದಲ್ಲಿ ಅಜಲಿನ ಕೊರಗ ಕೊಡ್ಡಿದವರೆಲ್ಲ ತನ್ನ ಪಡೆಯೊಂದಿಗೆ ಎಂಜಲೆಲೆ ಎಸೆಯುವ ಬೈಲು ಗದ್ದೆಗಳಲ್ಲಿ ಕಾದು ಕುಳಿತು ಉಳ್ಳವರು ಊಟ ಮಾಡಿದ ನಂತರ ಆ ಎಂಜಲು ಎಲೆಗಳಲ್ಲಿ ಉಳಿದಿರುವ ಅನ್ನವನ್ನು ತೆಗೆದುಕೊಂಡು ಹೋಗುತ್ತಿದ್ದಂತಹ ಕಾಲವೊಂದಿತ್ತು.

ನಂತರ ಧಣಿಗಳ ಮನೆಯಲ್ಲಿ ಯಾರಾದರೂ ಖಾಯಿಲೆ ಬಿದ್ದರೆ ಮತ್ತು ಮಗುವಿಗೆ ಶನಿ ಹಿಡಿದರೆ ಅಂತಹ ಸಮಯದಲ್ಲಿ ಕೊರತಿಗೆ ಹೇಳಿ ಕಳುಹಿಸಿದರೆ ಆಕೊರತಿಯು ಬಂದು ಒಂದು ದಾನ ಶಾಸ್ತ್ರವನ್ನು ಮಾಡಿ ಅವರಲ್ಲಿರುವ ದರಿದ್ರ ಶನಿಯನ್ನು ತಾನು ಹೊತ್ತು ಕೊಳ್ಳುವ ಆಚರಣೆ ಇದೆ ಆ ಆಚರಣೆಯಿಂದ ನಮ್ಮ ಶನಿಯು ಅವರಿಗೆ ವರ್ಗಾಯಿಸಿ ಬಿಟ್ಟೆವು ಎನ್ನುವಂತಹ ಖುಷಿಯಿಂದ ಅವರು ಸಮಾಧಾನ ಪಟ್ಟುಕೊಂಡರೆ ಇತ್ತ ಈ ಕೊರಗರು ನಮಗೆ ಎರಡೊತ್ತು ಅನ್ನಕ್ಕೆ ದಾರಿಯಾಯಿತಲ್ಲ ಎನ್ನುವಂತಹ ಸಂತೋಷದಿಂದ ಇರುತ್ತಿದ್ದರು.

ಈ ಮೇಲೆ ತಿಳಿಸಿರುವ ಎಲ್ಲಾ ಸಂಗತಿಗಳು ಹಿಂದಿನ ಕಾಲದಲ್ಲಿ ಈ ಕೊರಗ ಸಮುದಾಯಗಳು ಹೀಗೆ ತಮ್ಮ ಜೀವನವನ್ನು ಸಾಗಿಸುತ್ತಿದ್ದರು ಎಂಬುದನ್ನು ತೋರಿಸುತ್ತದೆ. ಅಂದರೆ ಅಸ್ಪೃಶ್ಯರಲ್ಲಿ ಅಸ್ಪೃಶ್ಯರು ಎಂದು ಕರೆಸಿಕೊಂಡು ಸಮಾಜದ ಮುಖ್ಯ ವಾಹಿನಿಯಿಂದ ದೂರ ಉಳಿದು ಕಾಡಿನಲ್ಲಿ ವಾಸವಿದ್ದು ಜಾತಿ ಪದ್ಧತಿಯಲ್ಲಿಯೇ ಅಂತ್ಯಂತ ಅಂತ್ಯಜರು ಎಂದು ಕರೆಸಿಕೊಂಡು ಮೇಲು ಜಾತಿಯವರಿಂದ ದೌರ್ಜನ್ಯಕ್ಕೊಳಪಟ್ಟು ಶೋಷಣೆಯನ್ನು ಅನುಭವಿಸಿ ಬಹಳ ಹೀನವಾಗಿ ತಮ್ಮ ಜೀವನವನ್ನು ಸಾಗಿಸುತ್ತಿದ್ದಂತಹ ಕೊರಗರು ಈಗ ಅಂದರೆ ಸ್ವಾತಂತ್ರ್ಯ ನಂತರದಲ್ಲಿ ಸಾಮಾಜಿಕ ಉನ್ನತೀಕರಣ, ಶಿಕ್ಷಣ, ನೌಕರಿ ಮತ್ತು ಸ್ವಯಂ ಉದ್ಯೋಗದಿಂದ ಪಡೆದುಕೊಳ್ಳುತ್ತಿರುವ ಆರ್ಥಿಕ ಸ್ವಾತಂತ್ರ್ಯದ ಫಲವಾಗಿ ಈ ಕೊರಗ ಸಮುದಾಯದಲ್ಲಿ ಸ್ವಾಭಿಮಾನ ಹಾಗ ಸ್ವಾತಂತ್ರ್ಯವಾಗಿ ದುಡಿದು ತಿನ್ನುವ ಛಲ ಬೆಳೆದಿದೆ. ತಮ್ಮನ್ನು ವಂಚಿಸಿ ಶೋಷಣೆಗೆ ಗುರಿಪಡಿಸಿದರನ್ನು ಪ್ರಶ್ನಿಸಿ ಅವರ ವಿರುದ್ಧ ತಿರುಗಿ ಬೀಳುವಂತಹ ಧೈರ್ಯ ಅವರಲ್ಲಿ ಈಗ ಬೆಳೆದಿದೆ. ಇದಕ್ಕೆ ಸರ್ಕಾರ ಮತ್ತು ಸಂವಿಧಾನದ ಸಹಾಯವನ್ನು ಸಹ ಪಡೆದುಕೊಂಡಿದ್ದಾರೆ. ಅಸ್ಪೃಶ್ಯತಾ ನಿವಾರಣ ಕಾಯ್ದೆಯು ಇಂತಹ ಕೊರಗರ ಜೀವನದಲ್ಲಿ ಮಾತ್ರವಲ್ಲದೆ ಇಡೀ ದೇಶದಲ್ಲಿಯೇ ತುಳಿತಕ್ಕೆ ಒಳಗಾಗಿ ಸಾಮಾಜಿಕ ಸ್ತಿರ ವ್ಯವಸ್ಥೆಯಲ್ಲಿ ಕೆಳಗಿರುವಂತಹ ಹಿಂದುಳಿದವರು ದಲಿತರು ಎಂದೆಲ್ಲಾ ಕರೆಯಿಸಿ ಕೊಳ್ಳುವವರ ಬಾಳಿನ ಆಶಾ ಕಿರಣವಾಗಿ ಈ ಕಾಯ್ದೆಯು ಕೆಲಸ ಮಾಡಿದೆ.

10"ಸ್ವಾತಂತ್ರ್ಯ, ಸಮಾನತೆ, ಮಾನವೀಯತೆ, ವೈಚಾರಿಕತೆಯ ಮೂಲಕ, ಮನುಷ್ಯ ಮನುಷ್ಯರ ನಡುವೆ ಪ್ರೀತಿ, ಗೌರವ, ಸಹ ಬಾಳ್ವೆಯನ್ನು ಹುಟ್ಟು ಹಾಕಬೇಕಾದಂತಹ "ಮನುಷ್ಯ ಧರ್ಮ"ವನ್ನು ಈ ಸಮುದಾಯ ಈಗ ನಿರೀಕ್ಷಿಸುತ್ತಿದೆ".10

ಅಡಿ ಟಿಪ್ಪಣಿಗಳು

1. ಕಥೆ ಕಸಬರಿಕೆ, ಕೃತಿ ನಾಕನೇ ನೀರು, ಪುಟ ಸಂಖ್ಯೆ – 47.
2. ಕಥೆ ಕಸಬರಿಕೆ, ಕೃತಿ ನಾಕನೇ ನೀರು, ಪುಟ ಸಂಖ್ಯೆ – 54.
3. ಕಥೆ ಕಸಬರಿಕೆ, ಕೃತಿ ನಾಕನೇ ನೀರು, ಪುಟ ಸಂಖ್ಯೆ – 56.
4. ಕಥೆ ಪಂಜುರ್ಲಿ ಮತ್ತು ಗರ್ಭಪಾತ, ಕೃತಿ ನಾಕನೇ ನೀರು, ಪುಟ ಸಂಖ್ಯೆ – 69.
5. ಕಥೆ ಪಂಜುರ್ಲಿ ಮತ್ತು ಗರ್ಭಪಾತ, ಕೃತಿ ನಾಕನೇ ನೀರು, ಪುಟ ಸಂಖ್ಯೆ – 71.
6. ಕಥೆ ಧಣಿಗಳ ಬೆಳ್ಳಿ ಲೋಟ, ಕೃತಿ ಮೀಯುವ ಆಟ, ಪುಟ ಸಂಖ್ಯೆ – 17.
7. ಕಥೆ ದಾನ, ಕೃತಿ ಮೀಯುವ ಆಟ, ಪುಟ ಸಂಖ್ಯೆ – 40.
8. ಕಥೆ ದಾನ, ಕೃತಿ ಮೀಯುವ ಆಟ, ಪುಟ ಸಂಖ್ಯೆ – 43.
9. ಕಥೆ ದಾನ, ಕೃತಿ ಮೀಯುವ ಆಟ, ಪುಟ ಸಂಖ್ಯೆ – 49.
10. ಕಥೆ ಕೊಡೆ ಇಲ್ಲ ಶಿವರಾಯ, ಕೃತಿ ನಾಕನೇ ನೀರು. ಪುಟ ಸಂಖ್ಯೆ – 77.
11. ಕಥೆ ಕೊಡೆ ಇಲ್ಲ ಶಿವರಾಯ, ಕೃತಿ ನಾಕನೇ ನೀರು. ಪುಟ ಸಂಖ್ಯೆ – 86.
12. ಕಥೆ ಬಸಿರು, ಕೃತಿ ನಾಕನೇ ನೀರು, ಪುಟ ಸಂಖ್ಯೆ – 97.
13. ಕಥೆ ಬಸಿರು, ಕೃತಿ ನಾಕನೇ ನೀರು, ಪುಟ ಸಂಖ್ಯೆ – 99.
14. ಕಥೆ ಬಗ್ಗುಂಡಿ ಪ್ರಸಂಗ, ನಾಕನೇ ನೀರು, ಪುಟ ಸಂಖ್ಯೆ – 112.
15. ಕಥೆ ಮೀಯುವ ಆಟ, ಕೃತಿ ಮೀಯುವ ಆಟ, ಪುಟ ಸಂಖ್ಯೆ – 06.
16. ಕಥೆ ಮೀಯುವ ಆಟ, ಕೃತಿ ಮೀಯುವ ಆಟ, ಪುಟ ಸಂಖ್ಯೆ – 08.
17. ಕಥೆ ತಾಯ್ತನ, ಕೃತಿ ಮೀಯುವ ಆಟ, ಪುಟ ಸಂಖ್ಯೆ – 70.
18. ಕಥೆ ಇವರ‍್ಯಾಕೆ ಕೊರಗರು, ಕೃತಿ ವಸುಂಧರೆಯ ಗ್ಯಾನ, ಪುಟ ಸಂಖ್ಯೆ – 103.

ಅಧ್ಯಾಯ – ೭

ಸಮಾರೋಪ

ಅಧ್ಯಾಯ -೭

ಸಮಾರೋಪ

ಕರ್ನಾಟಕದ ಸಾಂಸ್ಕೃತಿಕ ಭೂಪಟದಲ್ಲಿ ಕರಾವಳಿ ತನ್ನದೇ ಆದ ವಿಶಿಷ್ಟತೆಯನ್ನು ಉಳಿಸಿಕೊಂಡಿದೆ. ದಕ್ಷಿಣ ಕನ್ನಡದ ತೀರ ಪ್ರದೇಶದ ಜನರ ಭಾಷೆ, ಉಡುಗೆ, ತೊಡುಗೆ, ನಂಬಿಕೆ-ಸಂಪ್ರದಾಯ, ಪರಿಸರ ಇವುಗಳು ಬಯಲು ಸೀಮೆಗಿಂತ ಭಿನ್ನವಾಗಿ ಕಾಣಿಸುತ್ತವೆ ಘಟ್ಟದ ಮೇಲಿನವರಿಗೆ ಹೊಲಸೆನಿಸುವ ಮೀನು ಕರಾವಳಿಯ ಜನರಿಗೆ ಪ್ರಿಯವಾದ ಆಹಾರ, ಬಯಲು ಸೀಮೆಯವರಿಗೆ ಕೃಷಿ ಪ್ರಮುಖ ವೃತ್ತಿಯಾದರೆ ಮೀನು ಬೇಟೆಯು ಕಡಲಿಗರ ಜೀವನಾಧಾರ. ಇಂತಹ ಸೂಕ್ಷ್ಮ ವಿವರಗಳಿಂದ ಗಮನ ಸೆಳೆಯುತ್ತವೆ. ಇವರ ಕಥೆಗಳು ಇಲ್ಲಿನ ಹೆಚ್ಚಿನ ಪಾತ್ರಗಳು ದುಡಿಯುವ ವರ್ಗದ ಪ್ರತಿನಿಧಿಗಳದು, ಕೆಳಜಾತಿಯ ನಿರ್ಲಕ್ಷಿತ ಜೀವಗಳದು, ಮೇಲ್ಜಾತಿಗಳವರ ನಡುವಳಿಕೆಯ-ವಿಶೇಷವಾಗಿ ಬ್ರಾಹ್ಮಣ ಸಮುದಾಯದ ನಿಷ್ಕಾರಣ ಮಡಿವಂತಿಕೆಯ ಹಾಗೂ ಅನುದಾರವಾದ ನಿಲುವಿನ ವಿರುದ್ಧ ರೋಷದಿಂದ ಕುದಿಯುವ ಆತ್ಮಾಭಿಮಾನಿಗಳದು, ದೈವದ ನಂಬಿಕೆ ಹಾಗೂ ದರಿದ್ರ ಬದುಕಿನ ಅಸಹಾಯಕತೆಗಳ ನಡುವೆ ತೊಳಲಾಡುವ ಎಡಬಿಡಂಗಿಗಳದು, ಬದಲಾಗುತ್ತಿರುವ ಸಮಾಜದ ಮೌಲ್ಯಗಳ ಆಕರ್ಷಣೆ, ಭಯ ಹಾಗೂ ಸಂಕಟಗಳನ್ನು ಅನುಭವಿಸಬೇಕಾದ ಅನಿವಾರ್ಯ ಸ್ಥಿತಿಯನ್ನು ಹೇಗೋ ಒಪ್ಪಿಕೊಂಡಂತಹವರದು, ಆದರೆ ಈ ವ್ಯಕ್ತಿಗಳ ಅವಸ್ಥೆಯನ್ನು ನಿರೂಪಿಸುವಾ ಲೇಖಕಿಯವರು ಎಲ್ಲಿಯೂ ಸಹ ರೋಷಗೊಳ್ಳುವುದಿಲ್ಲ. ಒಂದು ರೀತಿಯ ಸರಸ-ವಿನೋದದ ಧಾಟಿಯಿಂದ, ತುಳು ಭಾಷೆಯ ಪರಿಮಳದಿಂದ ಕೂಡಿದ ವಾಗ್ ರೂಢಿಗಳ (ವಾಗ್ರೂಢಿಗಳ) ಹದವನ್ನು ಅರಿತ ಬಳಕೆಯಿಂದ ಸೊಗಯಿಸುವ ನಿರೂಪಣಾ ವಿಧಾನದಿಂದ ಈ ಕಥೆಗಳನ್ನು ಮಂಡಿಸುತ್ತಾರೆ. ಹಾಗಾಗಿ ಇವರ ಕಥೆಗಳು ವೈವಿಧ್ಯಮಯ ವಸ್ತು ಮತ್ತು ಆಸಕ್ತಿ ಕೆರಳಿಸುವ ಭಾಷಾ ಶೈಲಿಯಿಂದ ಕನ್ನಡ ಕಥಾ ಸಾಹಿತ್ಯದಲ್ಲಿ ಗುರುತಿಸಿಕೊಳ್ಳುತ್ತವೆ. ಕಥೆಗಾರ್ತಿಯು ತಾವು ಒಪ್ಪಿಕೊಂಡ ವಸ್ತುವಿಗೆ ಪೂರಕವಾದ ಘಟನೆಗಳನ್ನು ಸೇರಿಸಿ ಕಲಾತ್ಮಕವಾಗಿ ಕಥೆ ಹೆಣೆಯುತ್ತಾರೆ ಕಥೆಯ ಮುಂದುವರಿಕೆಗೆ ಕೊಂಡಿ ತಾಗಿಸಿಕೊಳ್ಳುವ ಉಪಕಥೆಗಳನ್ನು ಸಹಜ ಎನ್ನುವಂತೆ ಸೇರಿಕೊಳ್ಳುತ್ತವೆ.

ತಾವು ಕಂಡು ಉಂಡ ಅನುಭವಗಳನ್ನು ಕಥೆಯನ್ನಾಗಿಸುವ ನಾಗವೇಣಿಯವರು ಚಿಕ್ಕ ಘಟನೆಯನು ಸಹ ಮನ ಮುಟ್ಟುವಂತೆ ವಿವರಿಸುತ್ತಾ ಹೋಗುತ್ತಾರೆ ಎಂಬುದಕ್ಕೆ ಇವರ ಈ ಕಥೆಗಳೇ ಸಾಕ್ಷಿ.

ಸ್ವಾಭಿಮಾನ ವ್ಯಕ್ತಿಯನ್ನು ವ್ಯವಸ್ಥೆಯ ವಿರುದ್ಧ ಬಂಡೇಳುವ ರೀತಿಯನ್ನು ಬಿಂದುವಿನಂತಹ ಸಾಮಾನ್ಯ ಹೆಣ್ಣಿನ ಪಾತ್ರದ ಮೂಲಕ ಕಸಬರಿಕೆ ಎನ್ನುವ ಕತೆಯಲ್ಲಿ ತೋರಿಸಿದರೆ, ದೈವದ ಹೆಸರಿನಲ್ಲಿ ಕೆಳ ವರ್ಗದವರನ್ನು ಒಡೆದಿಡುವ ತಂತ್ರ-ಕುತಂತ್ರಗಳ ಮೂಲಕ ಬಡವರನ್ನು ಶೋಷಣೆ ಮಾಡುವುದು ಪಂಜುರ್ಲಿ ಮತ್ತು ಗರ್ಭಪಾತ ಕತೆಯಲ್ಲಿ ವ್ಯಕ್ತವಾದರೆ, ಮಕ್ಕಳನ್ನು ತುಂಬಾ ಪ್ರೀತಿಸುವ ಹಳ್ಳಿಗಾಡಿನ ಶಾಲೆಯೊಂದರ ಏಕೋಪಾಧ್ಯಾಯರೊಬ್ಬರು ಪರಿಶಿಷ್ಟ ವಿದ್ಯಾರ್ಥಿಗಳ ಸ್ಕಾಲರ್‌ಶಿಫ್ ಹಣವನ್ನು ತನ್ನ ವೆಚ್ಚಕ್ಕಾಗಿ ಬಳಸಿಕೊಂಡು ಪರಿತಾಪ ಪಡುವುದು. ಕೊಡೆ ಇಲ್ಲಿ ಶಿವರಾಯ ಕತೆಯಲ್ಲಿ ಬಂದರೆ, ಪರಿಶಿಷ್ಟನೊಬ್ಬನ ಬಸುರಿ ಪತ್ನಿಯ ತೊಟ್ಟಿಲ ಬಯಕೆ ತೀವ್ರಗೊಂಡಾಗ ಮೇಲ್ಜಾತಿಯ ಮಂದಿ ಅದೊಂದು ಕ್ಷುಲ್ಲಕ ವಿಷಯವೆಂದು ನಕ್ಕು ಅನುದಾರವಾಗಿ ವರ್ತಿಸುವುದು ಬಸಿರು

ಕಥೆಯಲ್ಲಿ ಮೂಡಿ ಬಂದಿದೆ, ಕೀಳು ಜಾತಿಯವನೊಬ್ಬನು ತನ್ನ ಎದುರೇ ಪೆಚ್ಚಿಕೊಂಡು ಓಡಾಡುತ್ತಾನೆಂದು ಅವನ ಧಣಿಗಳು ಎಂದು ಕರೆಯಿಸಿ ಕೊಳ್ಳುವಂತಹ ಯಜಮಾನನು, ಅವನನ್ನು ಸಾಯಿಸಲೆಂದು ವಿಷ ಹಾಕಿದರೆ, ಆ ವಿಷವನ್ನು ಆ ಯಜಮಾನನ ಹುಂಜವೇ ತಿಂದು ಸಾಯುವುದು, ಈ ಬಗ್ಗಂಡಿ ಪ್ರಸಂಗ ಎನ್ನುವ ಕತೆಯಲ್ಲಿ ಅರ್ಥಗರ್ಭಿತವಾಗಿ ನಿರೂಪಣೆಗೊಂಡರೆ, ಆ ಊರಿನ ಮಾಷ್ಟ್ರು ಶಾಲೆಯ ರಜೆಗೆಂದು ತನ್ನ ಸ್ವಂತ ಊರಿಗೆ ಹೋಗುವಾಗ ಆ ಊರಿನ ಮೇಲ್ಜಾತಿಯವರ ಮನೆಗಳಲ್ಲಿ ತನ್ನ ಕೆಲವು ವಸ್ತುಗಳನ್ನು ಇಟ್ಟು ಅದೇ ಊರಿನ ಬ್ರಾಹ್ಮಣರ ಮಗಳನ್ನು ತನ್ನ ಜೊತೆ ಮದುವೆ ಮಾಡಿಕೊಂಡು ಕರೆದುಕೊಂಡು ಹೋದಾಗ ಆ ಮಾಷ್ಟ್ರು ದಲಿತನೆಂದು ತಿಳಿದಂತಹ ಮೇಲ್ಜಾತಿಯವರು ತಮ್ಮ ತಮ್ಮ ಮನೆಯಲ್ಲಿ ಇರಿಸಿದ್ದ ವಸ್ತುಗಳನ್ನು ನಾಶಮಾಡುವುದು ಬೆಲ್ಲ ಎಂಬ ಕಥೆಯಲ್ಲಿ ವ್ಯಕ್ತವಾಗಿದೆ.

ತನ್ನ ಮೈಯ್ಯೊಳಗೆ ಮನೆ ಮಾಡಿಕೊಂಡು ಮನಃ ಶಾಂತಿ ಕೆಡಿಸಿದ್ದ ವಾತಕ್ಕೆ ಬಿಸಿ ನೀರಿನ ಸ್ನಾನವೇ ದಿವ್ಯ ಔಷಧಿ ಎಂದು ತಿಳಿದಿದ್ದ ಖಾದ್ರಿ ಬ್ಯಾರಿಯವರು, ಕೊನೆಯವರೆಗೂ ತನ್ನ ಆಸೆಯನ್ನು ಈಡೇರಿಸಿಕೊಳ್ಳಲಾಗದ್ದನ್ನ ಅರಿತ ಹಿಂದೂ-ಮುಸ್ಲಿಮರು ಒಟ್ಟುಗೂಡಿ ಅಂತಿಮವಾಗಿ ಆತನಿಗೆ ಬಿಸಿ ನೀರ ಸ್ನಾನ ಮಾಡಿಸುವ ಭಾವೈಕ್ಯದ ಸನ್ನಿವೇಶವನ್ನು ಮೀಯುವ ಆಟ ಕಥೆಯು ಮನ ಕರಗುವಂತೆ ಪರಿಚಯಿಸುತ್ತದೆ. ಹೊಳೆ ಮತ್ತು ಗುಡ್ಡ ಎಂಬ ಚಿಕ್ಕ ಹುಡುಗ ಮಾಡುವ ತಪ್ಪಿನಿಂದಾಗಿ ಆ ಇಡೀ ಕುಟುಂಬ ಕಳ್ಳತನದ ಆರೋಪವನ್ನು ಹೊತ್ತುಕೊಂಡು ಕೊನೆಗೆ ಸ್ವಾಭಿಮಾನಿ ಹೆಣ್ಣು ಮಗಳು ಚೆನ್ನಮ್ಮ ತನ್ನ ಕುಟುಂಬದ ಈ ನರಕ ಯಾತನೆಗೆ ಈ ದರಿದ್ರ ಬೆಳ್ಳಿ ಲೋಟವೇ ಕಾರಣ. ಇದು ನೋಡಲು ಬೆಳ್ಳಿ ಆದರೆ ಬುದ್ಧಿ ಮೂರ್ಕಾಸಿದು ಎಂದು ಬೈದು ತನ್ನ ಆತ್ಮ ಗೌರವವನ್ನು ತೋರಿಸುತ್ತಾ ಧಣಿಗಳ ವಿರುದ್ಧ ಮೌನವಾಗಿ ಸಿಡಿದೇಳುವಂತಹ ದಾರುಣತೆಯು ಧಣಿಗಳ ಬೆಳ್ಳಿ ಲೋಟ ಎಂಬ ಕಥೆಯಲ್ಲಿ ವ್ಯಕ್ತವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಚರಣೆಯಲ್ಲಿರುವ ಮಗು ದಾನದ ಸಂಪ್ರದಾಯದಲ್ಲಿ ಮೇಲ್ವರ್ಗದವರು ಕೊರಗ ಹೆಂಗಸಿಗೆ ಉಗುರು ಅಥವಾ ಕೂದಲು ಬೆರೆಸಿರುವ ಎಂಜಲನ್ನು ತಿನ್ನಿಸುವ ಆಚರಣೆಯನ್ನು ವಿರೋಧಿಸುವ ಯುವಕರ ಬಂಡಾಯ ಮನೊಧರ್ಮವನ್ನು 'ದಾನ' ಕಥೆಯು ಧ್ವನಿಸುತ್ತದೆ.

ಆ ಮ್ಯೂದಿನ್ ಬ್ಯಾರಿಯ ಶವ ಯಾತ್ರೆಗೆ ಕಾಯುತ್ತ ಇನ್ನೆಲ್ಲೂ ಕಿಡಿಗೇಡಿಗಳು ಹಚ್ಚಿದ ಕೋಮುವಾದದ ಬೆಂಕಿಯಿಂದ ಆ ಬ್ಯಾರಿಯ ಮನೆ ಮನಗಳನ್ನು ಸುಟ್ಟು ಹಾಕಿ ಈಗ ಪಶ್ಚಾತ್ತಾಪದಲ್ಲಿ ಕಾಯುತ್ತಿರುವಾಗ ಇತ್ತ ತುಕ್ರ ಮೊಲ್ಯೆಯ ಮಗಳು ಸುಂದರಿಗೆ ಚೊಚ್ಚಲ ಹೆರಿಗೆಯ ನೋವು ಕಾಣಿಸಿಕೊಂಡಾಗ, ಎಂತಹ ಭಯಂಕರ ಹೆರಿಗೆಯನ್ನೂ ಸಹ ಸುಲಲಿತವಾಗಿ ಮಾಡ ಬಲ್ಲಂತಹ ಐಸಂ ಬ್ಯಾರ್ದಿ ಅಮ್ಮನವರನ್ನು ಕರೆದುಕೊಂಡು ಬರಲು ಆ ಕೇರಿಯ ಮಂದಿಗೆ ಮುಖವಿಲ್ಲದೇ ಇರುವಾಗ ತಾಯ್ತನದ ಪ್ರತೀಕವೇ ಆಗಿರುವಂತಹ ಐಸಂ ಬ್ಯಾರ್ದಿಯವರು ತನ್ನ ಗಂಡನ ಸಾವಿನ ನಂತರದ ಸಂಪ್ರದಾಯ ಆಚರಣೆಗಳನ್ನು ಬಿಟ್ಟು ಈ ಸುಂದರಿಯ ಹೆರಿಗೆ ಮಾಡಿಸುತ್ತಾರೆ. ಇಡೀ ಕಥೆಯ ಧಾಟಿಯೇ ಭಾವುಕವಾಗಿದೆ. ಅದು ಒಂದು ಕಾಕತಾಳೀಯ (co-incident) ಎನ್ನುವ ಮಾದರಿಯನ್ನು ಉದ್ದೇಶಪೂರ್ವಕವಾಗಿ ಬಳಸಿಕೊಳ್ಳುತ್ತೆ. ಆದರೂ ಕತೆಯು ಶಕ್ತಿಶಾಲಿಯಾಗಿಯೇ ಈ ಸಮಾಜದಲ್ಲಿದ್ದ ಸಾಮರಸ್ಯ ಹಾಗೂ ಮಾನವೀಯತೆಯ ನೆಲೆಯನ್ನು ಚಿತ್ರಿಸುತ್ತದೆ. ಐಸಂಬ್ಯಾರ್ದಿಯವರಿಗೆ ಕೋಮು-ದ್ವೇಷವು ತಟ್ಟುವುದಿಲ್ಲ. ಗಂಡನ ಸಾವು, ಶವಸಂಸ್ಕಾರ ಹಾಗೂ ಧರ್ಮ ಕಟ್ಟಳೆಗಳು ಅವರಿಗೆ ಆದ್ಯತೆಗಳಾಗಿ ಕಾಣಿಸುವುದಿಲ್ಲ. ಹುಟ್ಟ

ಬೇಕೆನ್ನುವ ಶಿಶುಗಳಿಗೆ ಸುಸೂತ್ರವಾಗಿ ಪ್ರಸವ ಮಾಡಿಸುವುದೇ ಅವರ ನಿಜವಾದ ಧರ್ಮ. ಇದೇ ರೀತಿ ಸೇವಂತಿ ಎಂಬ ಮುಗ್ಧ ಮನಸಿನ ಹುಡುಗಿಯ ಸ್ವಾಭಿಮಾನವನ್ನು ಸೇವಂತಿಯ ಓಲೆ ಎಂಬ ಕಥೆಯಲ್ಲಿ ನಾಗವೇಣಿಯವರು ಬಹಳ ಚೆನ್ನಾಗಿ ಚಿತ್ರಿಸಿದ್ದಾರೆ. ಮೇಲ್ವರ್ಗದ ಯುವಕನ ನಿಜವಾದ ಪ್ರೀತಿಯಲ್ಲಿ ಸಿಲುಕಿ ನಂತರ ಆ ಯುವಕನ ಹೇಡಿತನಕ್ಕೆ ಸೆಡ್ಡು ಹೊಡೆದು ತನ್ನ ಆತ್ಮಾಭಿಮಾನ ಮತ್ತು ಸ್ವಾಭಿಮಾನಗಳನ್ನು ಉಳಿಸಿಕೊಳ್ಳಲು ಅವನಿಂದ ಪಡೆದಂತಹ ಆ ಓಲೆಗಳನ್ನು ಅ ನೇತ್ರಾವತಿ ನದಿಯ ಒಡಲಿಗೆ ಎಸೆಯುವಂತಹ ಚಿತ್ರಣವನ್ನು ಲೇಖಕಿಯವರು ತುಂಬಾ ಚೆನ್ನಾಗಿ ಚಿತ್ರಿಸಿದ್ದಾರೆ.

ಸೇವಂತಿ ಓಲೆ ಎಂಬ ಕಥೆಯಲ್ಲಿ ಬರುವಂತಹ ಸೇವಂತಿಯ ಪಾತ್ರವು ಮತ್ತು ಧಣಿಗಳ ಬೆಳ್ಳಿ ಲೋಟ ಕಥೆಯಲ್ಲಿ ಬರುವಂತಹ ಚಿನ್ನಮ್ಮನ ಪಾತ್ರವು ಈ ಇಬ್ಬರೂ ಹೆಣ್ಣುಗಳು ಅಷ್ಟು ಕಷ್ಟವನ್ನು ಅನುಭವಿಸಿದರೂ ಕೂಡ ತನ್ನ ಸ್ವಾಭಿಮಾನವನ್ನು ಬಿಟ್ಟು ಕೊಡದೆ ಅದನ್ನು ತನಗೆ ಮೋಸ ಮಾಡಿದವರ ವಿರುದ್ಧ ಮೌನವಾಗಿಯೇ ಪ್ರತಿ ಭಟಿಸುವುದನ್ನು ನಾವು ಕಾಣಬಹುದು. ಚೆನ್ನಮ್ಮನು ಶಾಂಭವಿ ಹೊಳೆಗೆ ಎಸೆಯುವುದು ಬೆಳ್ಳಿಯ ಲೋಟ ಆದರೆ ಸೇವಂತಿಯು ನೇತ್ರಾವತಿ ನದಿಗೆ ಎಸೆಯುವುದು ಚಿನ್ನದ ಬೆಂಡೋಲೆಗಳು. ಇವರು ದುರಾಸೆಯವರು ಮತ್ತು ಆತ್ಮಾಭಿಮಾನವಿಲ್ಲದೇ ಇರುವಂತಹವರಾಗಿದ್ದರೆ ಆ ಚಿನ್ನ ಮತ್ತು ಬೆಳ್ಳಿಗಳನ್ನು ತಾವೇ ಇಟ್ಟು ಕೊಳ್ಳಬಹುದಿತ್ತು. ತಾವು ಇಷ್ಟು ದಿನ ಕಷ್ಟ ಪಟ್ಟದ್ದಕ್ಕೆ ಇದಾದರೂ ಪ್ರತಿ ಫಲದ ರೂಪದಲ್ಲಿ ಸಿಕ್ಕಿತ್ತಲ್ಲ ಎಂದು ತಿಳಿದು ಆ ಚಿನ್ನ ಮತ್ತು ಬೆಳ್ಳಿಗಳನ್ನು ಇಟ್ಟುಕೊಂಡಿದ್ದರೆ. ಅವರು ಆತ್ಮಾಭಿಮಾನವನ್ನು ಮಾರಿಕೊಂಡಂತೆ ಆಗುತ್ತಿತ್ತು.

ಈ ಕಥೆಯಲ್ಲಿಯ ಸೇವಂತಿಯು ಮೇಲ್ವರ್ಗದ ತನ್ನ ಗೆಳತಿಯ ಅಣ್ಣನನ್ನು ಬಲವಾಗಿ ಪ್ರೀತಿಸಿ ಆ ಮೇಲ್ವರ್ಗದವರ ಕುತಂತ್ರಕ್ಕೆ ತನ್ನ ಪ್ರೀತಿಯನ್ನು ಬಲಿಕೊಡುತ್ತಾಳೆ. ಇತ್ತ ತಂದೆ ತಾಯಿಗೆ ಹೆದರಿ ತನ್ನ ತಂಗಿಯ ಮದುವೆಯ ಬಾರವನ್ನು ತನ್ನ ಹೆಗಲ ಮೇಲೆ ಹೊತ್ತು ತಂದೆಯ ಹಣದ ಋಣ ಭಾರವನ್ನು ತಾಳಲಾರದೆ ತನ್ನ ಪ್ರೀತಿಯನ್ನು ಆ ಓಲೆಯ ರೂಪದಲ್ಲಿ ಗಂಗಯ್ಯ ಶೆಟ್ಟಿಯು ನೇತ್ರಾವತಿ ನದಿಗೆ ಎಸೆದು ಬಿಡುತ್ತಾನೆ. ಸೇವಂತಿ ಎಸೆದದ್ದು ಓಲೆಯಾದರೆ ಗಂಗಯ್ಯ ಶೆಟ್ಟಿಯಯು ತನ್ನ ಪ್ರೀತಿಯನ್ನೇ ಎಸೆದು ಬಿಡುತ್ತಾನೆ.

ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಕರಾವಳಿ ನಾಡಿನಲ್ಲಿ ಆದಂತಹ ಬದಲಾಣೆಗಳು, ಕೈಗಾರಿಕರಣ, ಆಧುನಿಕರಣ, ನಗರೀಕರಣ ಇವುಗಳು ನಡೆದಾಗ ಅಲ್ಲಿನ ಧಣಿಗಳು, ಒಕ್ಕಲ ಮಕ್ಕಳುಗಳು ಸೇರಿ ಈ ಗೇಣಿದಾರರು ಎಂಬ ಚದುರಂಗದ ಆಡವಾಡುತ್ತಿದ್ದದ್ದನ್ನು ಮತ್ತು ಅದೇ ಸಮಯದಲ್ಲಾದ ಸಾಂವಿಧಾನಿಕ ಬದಲಾವಣೆಗಳು ಅದರಿಂದ ಅನುಕೂಲ ಯಾರಿಗೆ ಅನಾನುಕೂಲ ಯಾರಿಗೆ ಎನ್ನುವಂತಹ ಗಂಭಿರ ವಿಷಯಗಳನ್ನು ನಾಗವೇಣಿಯವರು ತಮ್ಮ ಮೂರನೇ ಕಥಾ ಸಂಕಲನದ ಗೇಣಿದಾರರ ಏಣಿಯಾಟ ಎಂಬ ಕಥೆಯಲ್ಲಿ ನಿರೂಪಿಸಿದ್ದಾರೆ. ತುಳು ನಾಡಿನಲ್ಲಿ ಕುಡಾಲ ಎಂಬ ಪಟ್ಟವು ನಗರೀಕರಣ ಮತ್ತು ಕೈಗಾರೀಕರಣದ ಹೊಡತಕ್ಕೆ ಸಿಲುಕಿ ಮಂಗಳೂರು ಎಂಬ ಹೆಸರನ್ನು ಪಡೆದು ಕೊಂಡದ್ದು. ಅಂತಹ ನಗರದಲ್ಲಿ ಅಂತಹ ನಗರದಲ್ಲಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಬಂದಿದ್ದು, ಪಣಂಬೂರು ಬಂದರು ಎಂಬ ಚಿಕ್ಕ ಬಂದರು ಅಂತರ ರಾಷ್ಟ್ರೀಯವಗಿ ಗುರುತಿಸಿಕೊಂಡು ನವ ಮಂಗಳೂರು ಬಂದರು ಎಂದಯ ಮರು ನಾಮಕರಣಗೊಂಡಿದ್ದು, ಆ

ನಗರದಲ್ಲಿನ ಬೀಡಿ ಕೈಗಾರಿಕೆಯು ಹಳ್ಳಿಯ ಜನರನ್ನು ಪಟ್ಟಣದ ಕಡೆಗೆ ವಲಸೆ ಬರುವ ಹಾಗೆ ಮಾಡಿದ್ದು, ಮತ್ತು ಧಣಿಗಳ ಹತ್ತಿರ ಮೂಲ ಗೇಣಿದಾರರು ಮತ್ತು ಚಾಲಗೇಣಿದಾರರಾಗಿ ದುಡಿಯುತ್ತಿದ್ದ ಜನರಿಗೆ ಸುಲಭವಾಗಿ ಮನೆಯಲ್ಲಿಯೇ ಕುಳಿತು ಹಣ ಸಂಪಾದಿಸುವ ದಾರಿಯನ್ನು ತೋರಿಸಿದ್ದು. ಇವೆಲ್ಲವಕ್ಕಿಂತ ಮುಖ್ಯವಾಗಿ ಸರ್ಕಾರವು ಕಾಯ್ದೆಯನ್ನು ಮಾಡಿ ಗೇಣಿದಾರರು ಉಳುತ್ತಿದ್ದಂತಹ ಭೂಮಿಯನ್ನು ಅವರಿಗೆ ದೊರಕುವಂತಹ ರೀತಿಯಲ್ಲಿ ಮಾಡಿ ಧಣಿಗಳು ಅಥವಾ ಮೇಲ್ವರ್ಗದವರ ಕೆಂಗಣ್ಣಿಗೆ ಗುರಿಯಾಗುವುದು ಅಧ್ಭುತವಾಗಿ ಮೂಡಿ ಬಂದಿದೆ.

ನಾಗವೇಣಿಯವರಿಗೆ ತಮ್ಮ ಬಾಲ್ಯದ ನೆನಪಿನ ಜೊತೆಗೆ ಹೀನವಾಗಿ ಬದುಕುತ್ತಿರುವ ಒಂದು ಜನಾಂಗವನ್ನು ಕಂಡು "ಇವರ್‍ಯಾಕೆ ಕೊರಗರು" ಎಂಬ ಪ್ರಶ್ನೆಯನು ತನ್ನ ಮನಸ್ಸಿನಲ್ಲಿಯೇ ಹಾಕಿಕೊಂಡು ಅದರ ಜಾಡು ಹಿಡಿದು ಆ ಕೊರಗ ಜನಾಂಗ ಎಷ್ಟು ಹೀನವಾದ ಬದುಕನ್ನು ಬದುಕುತ್ತಿದ್ದಾರೆ ಎಂಬುದನ್ನು ತಾನು ಕಂಡಂತದು ಮತ್ತು ತನ್ನ ಸಲಹೆಗಾರ್ತಿಯಾಗಿದ್ದಂತಹ ತಾಯಿಯ ಅನುಭವದಿಂದ ಕೇಳಿದಂತಹ ವಸ್ತುಗಳಿಗೆ ಜೀವ ತುಂಬಿ ಕಥೆಯನ್ನು ಹೆಣೆದಿದ್ದಾರೆ. ಕೊರಗ ಜನಾಂಗದವರು ಎದುರಿಸುತ್ತಿರುವ ಸಮಸ್ಯೆಗಳು ಶೋಷಣೆಗಳು ಇವುಗಳನ್ನು ಮೆಟ್ಟಿ ಎದುರಿಸುವಂತಹ ಯುವಕರುಗಳು ಮತ್ತು ಅವರೆಲ್ಲ ಸಂಘಟನೆಗಳ ಸಹಾಯ ಪಡೆಯುವುದು ಹೀಗೆ ಪ್ರತಿಯೊಂದು ವಿಷಯವನ್ನು ಸಹ ಎಳೆ ಎಳೆಯಾಗಿ ಬಿಡಿಸುತ್ತಾ ಹೋಗುತ್ತಾರೆ.

ಲೇಖಕಿಯವರಿಗೆ ತೋಚಿದ ಕತೆಯ ಹಂದರ ಪಾತ್ರಗಳು ನಿಜವಾಗಿಯೂ ಓದುಗರನ್ನು ಬೆಚ್ಚಿ ಬೀಳಿಸುತ್ತವೆ. ಪಾತ್ರಗಳ ಹತ್ತಿರಕ್ಕೆ ಕರೆದೊಯ್ಯುವ ಆಪ್ಯಾಯವಾಗಿಸುವ ಶಕ್ತಿ ಅವರ ಲೇಖನಿಗಿದೆ. ಸಮಾಜದ ಜೊತೆ ಅವರಿಗಿರುವ ಸೂಕ್ಷ್ಮ ಸಂವೇದಿ ನೋಟವು ಕತೆಗಳಲ್ಲಿ ಸ್ಪಷ್ಟವಾಗುತ್ತದೆ. ತಳವರ್ಗದ ಆ ಪಾತ್ರಗಳ ನೋವು ಓದುಗನದಾಗಿಸುವ ಅವರ ಬರವಣಿಗೆ ಶೈಲಿ, ಇತ್ತೀಚಿನ ಕತೆಗಾರರಲ್ಲಿ ಇವರನ್ನು ವಿಭಿನ್ನವಾಗಿಸುತ್ತದೆ.

ಕರಾವಳಿ, ಸಮುದ್ರದ ಮೊರೆತ ಬತ್ತದ ತೆನೆಯ ಬಸಿರಲ್ಲಿ ಚಿಗುರಿದ ಇವರ ಕಥಾಶಕ್ತಿ ಕೇವಲ ಅಲ್ಲಿನ ಸೌಂದರ್ಯದ ಆರಾಧನೆಗೆ ತೊಡಗದೆ, ಬಾಕ್ಯಾರಗುತ್ತಲು, ಕೊರಗರ ಕೇರಿ, ಕಣಿವೆಯ ಪುತ ಮುಂತಾದ ಪ್ರದೇಶಗಳ ಕುಪ್ಪ, ಕೇತು, ಮದನ ಮೌಲ್ಯ, ಕುದುಪ ಚೆನ್ನಮ್ಮ ತುಕ್ರ ಮೌಲ್ಯ...... ಮುಂತಾದ ವ್ಯಕ್ತಿಗಳ ಬದುಕಿನ ಹೃದಯ ಸಮುದ್ರ ಕಲಕಿ ಭಾವನೆಗಳ ಆವೇಗಗಳ ಮೇಲೆ ತಮ್ಮ ಸೂಕ್ಷ್ಮ ಕಣ್ಣನ್ನು ಹಾಯಿಸಿ ತಾನೊಬ್ಬ ಮೇಲ್ವರ್ಗದ ಹೆಣ್ಣು ಮಗಳಾಗಿದ್ದು ಸ್ಪಂದಿಸಿರುವ ರೀತಿ ನಿಜವಾಗಿಯೂ ಆಕೆಗಿರುವ ಸಖ್ಯ ಹಾಗೂ ಸಮಚಿತ್ತತೆ ಮತ್ತು ಅವರನ್ನು ಮೇಲಕ್ಕೆ ತರಬೇಕೆಂಬ ತುಡಿತ ಅವರೆಲ್ಲ ಕತೆಗಳ್ಲಲಿ ಬಂದಿದೆ. ಕರಾವಳಿ ಸಮುದಾಯದಲ್ಲಿ ತಮ್ಮ ಬಾಲ್ಯದಿಂದ ಬದುಕಿ ಬಂದಿರುವ ನಾಗವೇಣಿ ಕಡಾಲ ಇಂಸು ಮಂಗಳೂರಾಗಿ ಬೆಳೆದು ನಿಂತು ಆಧುನಿಕತೆಯನ್ನು ಮೈವೆತ್ತ ನಿಂತಿರುವ ಈ ಹಂತದವರೆಗೂ ಅವರ ಕಣ್ಣೋಟ ಹರಿದಿರುವುದನ್ನು ಅವರ ಕತೆಗಳಲ್ಲಿ ಗುರುತಿಸಬಹುದು ಆಧುನೀಕರಣ ಕೈಗಾರಿಕರಣ ತಂದಿರುವ ಬದಲಾವಣೆಯ ನಡುವಿನ ಸಂಕ್ರಮಣ ಅವಸ್ಥೆಗೆ ಲೇಖಕಿ ಸಾಕ್ಷಿಯಾಗಿದ್ದು, ಒಂದು ಸಮುದಾಯವನ್ನು ಅವರು ಪ್ರೀತಿಸಿದ ರೀತಿ ಇಲ್ಲಿ ಸ್ಪಷ್ಟವಾಗುತ್ತಿದೆ.

ಗ್ರಂಥ ಋಣಿ

ಗ್ರಂಥ ಋಣಿ

1. ನಾಕನೇ ನೀರು. ಲೇಖಕರು : ಎಚ್.ನಾಗವೇಣಿ

   ಪ್ರಕಾಶಕರು : ಕ್ರೈಸ್ಟ್ ಕಾಲೇಜು ಬೆಂಗಳೂರು – 1997

2. ಮೀಯುವ ಆಟ.ಲೇಖಕರು : ಎಚ್. ನಾಗವೇಣಿ

   ಪ್ರಕಾಶಕರು : ಲೋಹಿಯ ಪ್ರಕಾಶನ, ಬಳ್ಳಾರಿ – 2005

3. ವಸುಂದರೆಯ ಗ್ಯಾನ, ಲೇಖಕರು : ಎಚ್.ನಾಗವೇಣಿ

   ಪ್ರಕಾಶಕರು : ಲೋಹಿಯ ಪ್ರಕಾಶನ, ಬಳ್ಳಾರಿ – 2006

4. ನೆಲ ಸಂಸ್ಕೃತಿ, ಲೇಖಕರು: ನರಹಳ್ಳಿ ಬಾಲಸುಬ್ರಮಣ್ಯ

   ಪ್ರಕಾಶಕರು : ಸುಮುಖ ಪ್ರಕಾಶನ, ಬೆಂಗಳೂರು – 2006

5. ಕನ್ನಡ ಸಾಹಿತ್ಯ ಕೋಶ, ಲೇಖಕರು : ರಾಜಪ್ಪ ದಳವಾಯಿ.

   ಪ್ರಕಾಶಕರು : ಕದಿರು ಪ್ರಕಾಶನ. ಮೈಸೂರು – 1996.

6. ಸದ್ಯದ ಹಂಗು. ಲೇಖಕರು : ರಾಜೇಂದ್ರ ಚೆನ್ನಿ

   ಪ್ರಕಾಶಕರು : ಪಲ್ಲವ ಪ್ರಕಾಶನ.

7. ಚಿಂತೆಸೆಯ ಪಾಡು

8. ಶತಮಾನದ ಸಣ್ಣಕಥೆಗಳು, ಲೇಖಕರು: ಎಸ್.ದಿವಾಕರ್

   ಪ್ರಕಾಶಕರು : ನವ ಕರ್ನಾಟಕ ಪ್ರಕಾಶನ ಬೆಂಗಳೂರು – 2005.

9. ಸಣ್ಣ ಕಥೆಗಳೆ ಸಂಗ್ರಹ. ಲೇಖಕರು : ಬೊಳುವಾರು ಮಹಮದ್ ಕುಞ

   ಪ್ರಕಾಶಕರು : ಸಾಹಿತ್ಯ ಆಕಾಡೆಮಿ, ಬೆಂಗಳೂರು – 1992.